# ಸುಳಿ

## ಆರಂಭ

ಆದಿಮಾನವನು ಅಲೆಮಾರಿ ಪ್ರವೃತ್ತಿಯ ತನ್ನ ಬೇಟೆಯಾಟದ ಬದುಕನ್ನು ಕ್ರಮೇಣ ಬದಲಿಸಿ, ಫಲವತ್ತಾದ ನೆಲ, ನೀರಿನ ಸಮೃದ್ಧಿಯಿದ್ದ ಒಂದೆಡೆಯಲ್ಲಿ ನೆಲೆ ನಿಂತು, ಹೊಲ, ಗದ್ದೆ, ತೋಟ, ವ್ಯವಸಾಯವನ್ನು ಹಸ್ತಗತವಾಗಿಸಿಕೊಂಡ. ಕಾಡು ಕಡಿದು, ಗುಡಿಸಲು ಕಟ್ಟಿ, ಗ್ರಾಮವನ್ನು ನಿರ್ಮಿಸಿಕೊಂಡು, ತನ್ನ ಕೌಟುಂಬಿಕ ಪರಿವಾರದೊಡನೆ, ಕೆಲವು ವಿಧಿ, ನಿಷೇಧಗಳನ್ನು ಹಾಕಿಕೊಂಡು ಶಾಂತಿಯುತ ಸಾಮಾಜಿಕ ಜೀವವನ್ನು ರೂಢಿಸಿಕೊಂಡ. ಈ ಶಾಂತಿಯುತ ಸಾಮಾಜಿಕ ಜೀವನಕ್ಕೆ ಮೂಲವಾದುದು ಮನುಷ್ಯನಲ್ಲಿ ಇರುವ ನಂಬಿಕೆ. ಅಂದರೆ ಬದುಕುವ ನಂಬಿಕೆಯಿಂದ ಸಮಾಜ ಆರಂಭವಾಗುತ್ತದೆ. ಈ ಬದುಕುವ ನಂಬಿಕೆ ಬಂದ ಮೇಲೆ ಮನುಷ್ಯ ತನ್ನ ಬದುಕಿಗೆ ಬೇಕಾದ ಇತರ ಪರಿಕರಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಮಾನವ ಸಮಾಜದ ಅಸ್ಥಿತ್ವಕ್ಕೆ ಈ ನಂಬಿಕೆ ಮೂಲವಸ್ತು.

ನಂಬಿಕೆ ಮಾನವ ಸಮಾಜದ ಮೂಲಾಪೇಕ್ಷೆಯಾದ 'ಮೌಲ್ಯ' ಮತ್ತು 'ತತ್ವಚಿಂತನೆ'ಗೆ ತಳಹದಿ. ಒಂದು ನಂಬಿಕೆ 'ಮೌಲ್ಯ'ವಾಗುವ ಮೂಲಕ ಒಂದು ಜನಪದ ಸೃಷ್ಟಿಯಾಗುತ್ತದೆ. ಆ ಜನಪದಕ್ಕೊಂದು ಧರ್ಮ ಮತ್ತು ದೇವರುಗಳು ಬರುತ್ತವೆ. ಈ ನಂಬಿಕೆಯ ಮುಂದುವರಿಕೆಯಾಗಿ ಆಚರಣೆ ಅನುಷ್ಠಾನಗಳು ಉಂಟಾಗುತ್ತವೆ. ಹೀಗೆ ಮಾನವ ಬದುಕಿನ ಸ್ಥಾಪನೆ ನಂಬಿಕೆಯಲ್ಲಿದೆ. ಇದೇ ಸ್ಥಾಪನಾ ಆಕಾಂಕ್ಷೆ ಭೂಮಿಯ ಆಚೆಗೆ ಆಕಾಶಕ್ಕೆ, ಭೂಮಿಯ ಕೆಳಗೆ ಪಾತಾಳಕ್ಕೆ ಇಳಿಯುತ್ತದೆ. ಅಂದರೆ ಬದುಕುವ ನಂಬಿಕೆ ಸ್ವರ್ಗ ನರಕಗಳನ್ನು ಸೃಷ್ಟಿಸುತ್ತದೆ. ಈ ಬಗೆಯ ನಂಬಿಕೆಗಳು ಆರ್ಥಿಕ ಸ್ವಭಾವದು. ಇಲ್ಲಿ ಸುಖವಾಗಿರುವವನು ಅಥವಾ ಸುಖದಲ್ಲಿರುವವನು ಸ್ವರ್ಗದಲ್ಲಿ ನಂಬಿಕೆ ಇಟ್ಟುಕೊಳ್ಳುತ್ತಾನೆ. ವ್ಯಕ್ತಿ ಮನಸ್ಸಿನ ಮೂಲಕ "ಆರ್ಥಿಕ ಸ್ಥಳಾಂತರ"ಗೊಳ್ಳುವುದೇ ಈ ಸ್ವರ್ಗದಲ್ಲಿಯ ನಂಬಿಕೆ. ಪಾತಾಳಕ್ಕೆ ಹೆದರುವ ಮನುಷ್ಯ ಕಷ್ಟವನ್ನು ಅನುಭವಿಸಬಾರದೆಂದು ತಿಳಿದವನಾಗಿದ್ದಾನೆ. ನರಕ ಕೆಟ್ಟ ಆರ್ಥಿಕ ಸ್ಥಿತಿ ಅಥವಾ ಬದುಕಿನ ಬರಗಾಲ. ಭೂಮಿಯ ಮೇಲೆ ಇಂತಹ ಅನೇಕ ಕೆಟ್ಟ ಬರಗಾಲಗಳನ್ನು ಅವನು ಕಂಡಿದ್ದಾನೆ. ಆದ್ದರಿಂದಲೇ ಅಂತಹದ್ದನ್ನು ಅನುಭವಿಸಲಿಕ್ಕೆ ಹೆದರುತ್ತಾನೆ. ಇದರ ಪರಿಣಾಮವೇ ಅವನ ನರಕ ಕಲ್ಪನೆ. ಹೀಗೆ ನಮ್ಮ ನಂಬಿಕೆಯ ಪೂರ್ವದಲ್ಲಿ ಮನುಷ್ಯನ ಆರ್ಥಿಕ ನೆಲೆ ಮತ್ತು ಆರ್ಥಿಕ ಸ್ಥಳಾಂತರಗಳು ಇವೆ.

ಆರ್ಥಿಕ 'ಅಪೇಕ್ಷೆ'ಯೇ ಮನುಷ್ಯ ನೆಲೆ ನಿಲ್ಲುವುದಕ್ಕೆ ಕಾರಣ. ಈ 'ಅಪೇಕ್ಷೆ' ಗಾಗಿ ಮನುಷ್ಯ ಹೇಗೆ ದೈಹಿಕವಾಗಿ ಚಲಿಸುತ್ತನೆಯೋ, ಮಾನಸಿಕವಾಗಿಯೂ ಚಲಿಸುತ್ತಾನೆ. ಈ ಕಾರಣದಿಂದ ಅನೇಕ ನಂಬಿಕೆಗಳು ಹುಟ್ಟುತ್ತವೆ. ಇಂತಹವುಗಳಲ್ಲಿ 'ಸುಳಿ' ಬಗೆಗಿರುವ ನಂಬಿಕೆಯು ಒಂದು.

## ಸುಳಿಯ ಗುಣ ಲಕ್ಷಣಗಳು

ನಂಬಿಕೆಯನ್ನು ಮೂಲವಾಗಿರಿಸಿಕೊಂಡಿರುವ ಬದುಕು ಮನುಷ್ಯನ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಅಂದರೆ ನಮ್ಮ ನಂಬಿಕೆಯ ಪೂರ್ವದಲ್ಲಿ ಮನುಷ್ಯನ ಆರ್ಥಿಕ ನೆಲೆ ಮತ್ತು ಆರ್ಥಿಕ ಸ್ಥಳಾಂತರಗಳು ಇವೆ. ಹಾಗೆ ನೋಡಿದರೆ ಬಹುತೇಕ ನಂಬಿಕೆಗಳಿಗೆ ಆರ್ಥಿಕ ಅಪೇಕ್ಷೆಗಳೇ ಕಾರಣವಾಗುತ್ತವೆ. ಅಂತಹವುಗಳಲ್ಲಿ 'ಸುಳಿ' ಯ ಬಗೆಗಿನ ಬಹುಪಾಲು ನಂಬಿಕೆಗಳು ಆರ್ಥಿಕತೆಯನ್ನು ತಮ್ಮ ಬೆನ್ನಿಗಂಟಿಸಿಕೊಂಡಿವೆ. ಇದನ್ನು ಸ್ಪಷ್ಟಪಡಿಸಿಕೊಳ್ಳಬೇಕಾದರೆ ಸುಳಿಯನ್ನು ಗುರುತಿಸುವ ಭೌತಿಕ ಮತ್ತು ಜೈವಿಕ ವಸ್ತುಗಳನ್ನು ನೋಡಿದಾಗ ಗೊತ್ತಾಗುತ್ತದೆ. ಸಾಮಾನ್ಯವಾಗಿ ಕುದುರೆ, ಎತ್ತು, ಹೆಣ್ಣು, ಸಸ್ಯ, ಗಾಳಿ, ಕಲ್ಲು, ನೀರು ಇತ್ಯಾದಿಗಳಲ್ಲಿ ಸುಳಿಯನ್ನು ಗುರುತಿಸುತ್ತಾರೆ. ಒಂದು ಕಾಲದಲ್ಲಿ ಹಾಗೂ ಇತ್ತೀಚೆಗೂ ಸಹ ಕುದುರೆ, ಹೆಣ್ಣು (ಹೆಣ್ಣನ್ನು ಮದುವೆ

ಮಾಡಿಕೊಳ್ಳುವ ಮುಖ್ಯ ಉದ್ದೇಶ, ಅವಳು ಮನೆಯನ್ನು ಸರ್ವ ವಿಧದಲ್ಲಿ ಬೆಳಗುತ್ತಾಳೆ ಎಂಬುದಾಗಿದೆ). ಎತ್ತು ಮತ್ತು ಸಸ್ಯ ಇವುಗಳು ಆರ್ಥಿಕ ಚಟುವಟಿಕೆಯ ಬಹುಮುಖ್ಯ ಅಂಶಗಳಾಗಿವೆ.

ಕುದುರೆ, ಹೆಣ್ಣು ಮತ್ತು ಎತ್ತುಗಳ ಮೈಮೇಲಿನ ರೋಮಗಳು ಸಹಜವಾದ ರೀತಿಯಲ್ಲಿರದೆ, ಉಂಗುರಾಕಾರದಲ್ಲಿದ್ದರೆ ಅದಕ್ಕೆ ಸುಳಿ ಎನ್ನುವರು. ಆಕಾರದಲ್ಲಿ ಸುರುಳಿ ಸುರುಳಿಯಾಗಿ ರೋಮಗಳು ಒಂದು ಕೇಂದ್ರಬಿಂದುವಿನಿಂದ ಸುತ್ತಿಕೊಂಡಿರುವುದರಿಂದ ಸುಳಿ ಎಂಬ ಅರ್ಥ ಬಂದಿರಬಹುದು. ಸುಳಿ ಎಂದರೆ ವಂಶದ ಕುಡಿ ಎಂಬ ಇನ್ನೊಂದು ಅರ್ಥವೂ ಇದೆ. "ನಿನ್ನ ಸುಳಿ ಹಾಳಾಗ" ಎಂಬ ಬೈಗುಳದ ನುಡಿಯೊಂದಿದೆ. (ಎತ್ತಿನ ಸುಳಿ ಎಂದರೆ ಒಂದು ಹೆಬ್ಬೆಟ್ಟಿನಗಲ ಕೂದಲು ಸುಳಿಯಂತೆ ಸುತ್ತಿಕೊಂಡು ಮಧ್ಯೆ ಗುಳಿ ಇರುತ್ತದೆ). ಹಾಗೆಯೇ ಗಿಡದ ಕಾಂಡವನ್ನು ಕೊರೆದು ಅದರೊಳಗಿರುವ ಸುಳಿಯನ್ನು ಗುರುತಿಸಬಹುದು. ಜೊತೆಗೆ ಅದರ ಆಯುಷ್ಯವನ್ನು ಸಹ ಹೇಳಬಹುದು. ತೆಂಗು, ಬಾಳೆ ಮತ್ತು ಜೋಳದ ಸಸ್ಯಗಳಿಗೆ ಸುಳಿಯನ್ನು ಗುರುತಿಸುವವರಲ್ಲದೆ, ಸುಳಿ ಬಿದ್ದರೆ ಸಸ್ಯಗಳು ಸತ್ತುಹೋಗುವುದೆಂದು ಭಾವಿಸುವರು. ನೀರು ಸಹಜ ರೀತಿಯಲ್ಲಿ ಹರಿಯದೆ ಚಕ್ರಾಕಾರವಾಗಿ ಅಥವಾ ಉಂಗುರಾಕಾರದಲ್ಲಿ ಸುಳಿಯಾಗಿ ಹರಿದಾಗ ಆ ಜಾಗಕ್ಕೆ ಸುಳಿ ಎನ್ನುವರು. ಗಾಳಿ, ಕಲ್ಲುಗಳಲ್ಲು ಸಹ ಜನಪದರು ಸುಳಿಯನ್ನು ಗುರುತಿಸಿರುವುದು ಕಂಡು ಬರುತ್ತಿದೆ.

ಸುಳಿಯನ್ನು ಗುರುತಿಸುವ ವಸ್ತುಗಳ ಆಧಾರದ ಮೇಲೆ, ಭೌತಿಕ ವಸ್ತುಗಳಾದ ಗಾಳಿ, ಕಲ್ಲು, ನೀರು ಮುಂತಾದವುಗಳ ಮೇಲಿರುವ ಸುಳಿ, ಜೈವಿಕ ವಸ್ತುಗಳಾದ ಮನುಷ್ಯ, ಎತ್ತು, ಕುದುರೆ ಹಾಗೂ ಸಸ್ಯಗಳ ಮೇಲಿರುವ ಸುಳಿ.

<u>ಸುಳಿಯ ಗುಣ ಲಕ್ಷಣಗಳು</u>

ಆರ್ಥಿಕ ಅಪೇಕ್ಷೆಯ ಹಿನ್ನಲೆಯಲ್ಲಿ ಹುಟ್ಟಿಕೊಂಡಿರುವ ಸುಳಿಯ ಬಗೆಗಿನ ನಂಬಿಕೆಗಳು ಅನಾದಿ ಕಾಲದಿಂದಲೂ ಬಂದಿವೆ. ಕಾಲಕ್ಕೆ ಅನುಗುಣವಾಗಿ ಇವು ಬದಲಾಗುತ್ತಲೂ ಇರುತ್ತವೆ. ಅಂದರೆ 'ಸುಳಿ' ಬಗೆಗಿನ ನಂಬಿಕೆಗಳ ಹುಟ್ಟು ಮತ್ತು ಸಾವನ್ನು ತೀರ್ಮಾನಿಸುವುದು ಕಾಲ. ಒಂಟಿ ಮನುಷ್ಯನಲ್ಲ. ಒಂದು ಕಾಲಕ್ಕೆ ಇದ್ದ ಸುಳಿಯ ಬಗೆಗಿನ ನಂಬಿಕೆ ಮತ್ತೊಂದು ಕಾಲಕ್ಕೆ ಬೇಕಾಗದಿದ್ದಾಗ ಆ ಕಾಲ ನಿರ್ದ್ಯಾಕ್ಷಿಣ್ಯವಾಗಿ ತೆಗೆದು ಹಾಕುತ್ತದೆ ಅಥವಾ ಅದರ ಬಗೆಗೆ ದಿವ್ಯ ನಿರ್ಲಕ್ಷ್ಯ ವಹಿಸುತ್ತದೆ. ಈ ತೆರೆನಾಗಿರುವ 'ಸುಳಿ' ಯು ತನ್ನದೇ ಆದ ಹಲವಾರು ಗುಣಲಕ್ಷಣಗಳನ್ನು ಹೊಂದಿದೆ.

**ಮಾನಸಿಕ ಗುಣ :** ಸುಳಿಯ ಬಗೆಗಿನ ನಂಬಿಕೆಯು ಅನೇಕ ಮಾನಸಿಕ ಅಂಶಗಳನ್ನು ಅವಲಂಬಿಸಿರುತ್ತದೆ. ಸುಳಿ ಎಂಬುದು ಮೂಲತಃ ಮನುಷ್ಯನ ಮಾನಸಿಕ ಅನುಭವದ ಹಿನ್ನಲೆಯಲ್ಲಿ ಹುಟ್ಟಿಕೊಂಡಿರುವಂತಹದ್ದು. ಯಾವುದೇ ಒಬ್ಬ ವ್ಯಕ್ತಿ ಹೇಳಿದ ಸುಳಿಯನ್ನು ಒಪ್ಪಿಕೊಳ್ಳುವ ಪ್ರಕ್ರಿಯೆಯಲ್ಲಿ ಮನಸ್ಸು ಮುಖ್ಯವಾದುದು. ಅಲ್ಲದೆ ಇದು ಭಾವನಾತ್ಮಕ ಅನುಭವದೊಡನೆ ನಿಕಟವಾದ ಸಂಬಂಧವನ್ನು ಹೊಂದಿರುವಂತೆ ಕಾಣುತ್ತದೆ. ಮನುಷ್ಯ ಮಾನಸಿಕವಾಗಿ ನಂಬುವ ಆಧಾರದ ಮೇಲೆ ಸುಳಿಯ ಕಲ್ಪನೆ ಉಂಟಾಗುತ್ತದೆ. ಮಾನವ ಸಮಾಜ ಮಾನಸಿಕವಾಗಿ ಸುಳಿಯನ್ನು ನಂಬದಿದ್ದಾಗ ಸುಳಿಯ ಬಗ್ಗೆ ಕಲ್ಪನೆಯೆ ಇರುವುದಿಲ್ಲ. ವ್ಯಕ್ತಿಯ ಆಂತರಿಕ ಸ್ಥಿರತೆಯನ್ನು ಅವಲಂಬಿಸಿಯೇ ಅವನ ಆನಂದದಾಯಕ ಭಾವನಾ ಪರಿಸ್ಥಿತಿ ರೂಪಿತವಾಗುವುದು. ಇದು ಕಷ್ಟಗಳ ನಿವಾರಣೆಯಿಂದ ಅಡಚಣೆಗಳ ನಾಶದಿಂದ ಮತ್ತು ಪರಸ್ಪರ ವಿರುದ್ದಾಂಶಗಳ ಸಾಂಗತ್ಯದಿಂದ ಬರುತ್ತದೆ. ಇಂತಹ ಶಾಂತಿದಾಯಕ ಸಾಂಗತ್ಯವನ್ನು ಸುಳಿ ತರುತ್ತದೆ. ಸುಳಿ ಮೂಲಭೂತವಾಗಿ ಮನುಷ್ಯನ ಮನಸ್ಸಿನ ವಿಕಲ್ಪಗಳಿಂದ ಉಂಟಾಗಿರುವುದು.

**ವಾಸ್ತವತೆಯ ಅರಿವು :** ಸುಳಿಯ ಬಗೆಗಿನ ನಂಬಿಕೆಯನ್ನು ವಾಸ್ತವತೆಯಿಂದ ಬೇರ್ಪಡಿಸುವುದು ಸುಲಭವಲ್ಲ. ಸುಳಿ ಬಗೆಗಿನ ನಂಬಿಕೆ ಮತ್ತು ವಾಸ್ತವಿಕತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ವಾಸ್ತವಿಕತೆಯೂ ಸಹ ಪ್ರಜ್ಞೆಯ ಒಂದು ಸ್ವರೂಪ. ಅದರಲ್ಲಿ ಒಂದು ವಿಧವಾದ ಸ್ಪರ್ಧೆಯಾಗಲಿ, ಗೊಂದಲವಾಗಲಿ ಇರುವುದಿಲ್ಲ. ಪ್ರತಿಯೊಂದು ಅನುಭವವೂ ತನ್ನದೇ ಆದ ಸ್ಥಾನ ಪಡೆದಿದೆ. ಹಾಗೆಯೇ ಪ್ರತಿಯೊಂದು ಸುಳಿಯ ಬಗೆಗಿನ ನಂಬಿಕೆಗೂ ತನ್ನದೇ ಅದ ಸ್ಥಾನವಿದೆ. ವಾಸ್ತವಾನುಭವವು ನಮ್ಮನ್ನು ಒಂದು ತೀರ್ಪಿಗೆ

ಎಳೆದೊಯ್ಯುತ್ತದೆ. ಈ ಕ್ರಿಯೆ ನಡೆಯುವಾಗ ಒಂದರಿಂದ ಮತ್ತೊಂದನ್ನು ಬೇರ್ಪಡಿಸುವ ಹಾಗೂ ಒಪ್ಪಿತವಾದುದನ್ನು ಆರಿಸಿಕೊಳ್ಳುವ ಕ್ರಮವನ್ನು ಅನುಸರಿಸಲಾಗುತದೆ. ಈ ಬಗೆಯ ತೀರ್ಪು ವ್ಯಕ್ತಿಗತವಾಗಿರುತ್ತದೆ. ತೀರ್ಪಿನೆಡೆಗೆ ಕೊಂಡೊಯ್ಯುವ ವಾಸ್ತವಿಕಾನುಭವದ ಅರಿವೇ ಒಂದು ರೀತಿಯಲ್ಲಿ ಸುಳಿಯ ಬಗೆಗಿನ ನಂಬಿಕೆ ಎನ್ನಬಹುದು.

**ಜನಪದರ ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿ :** ವಾಸ್ತವಿಕವಾಗಿ ಜನಪದರ ಆರ್ಥಿಕ ಆವರಣದಿಂದ ಸುಳಿಗಳನ್ನು ಬೇರ್ಪಡಿಸಿ ನೋಡುವುದು ಕಷ್ಟ. ಆರ್ಥಿಕ ಸಾಂಸ್ಕೃತಿಕತೆಗೆ ರೂಪಧಾರಣ ಹೊಂದುವ ಪ್ರಾಥಮಿಕ ಸ್ಥಿತಿಯಲ್ಲಿಯೇ ಸುಳಿಯ ಬಗೆಗಿನ ಕೆಲವು ನಂಬಿಕೆಗಳು ನಿಯಮಗಳೆಂಬಂತೆ ಸ್ಥಾನ ಪಡೆದಿವೆ. ಆರ್ಥಿಕತೆಯು ತಾನು ಉತ್ತಮಗೊಳ್ಳಲು ಪ್ರಯತ್ನಿಸಿದಂತೆಲ್ಲಾ ತನ್ನ ಆರ್ಥಿಕ ಸಂಸ್ಕೃತಿಯನ್ನು ತನ್ನದೇ ಆದ ರಿತಿಯಲ್ಲಿ ಕಟ್ಟಲು ಯೋಚಿಸಿದಂತೆಲ್ಲಾ ಈ ಬಗೆಯ ಹಲವು ಸುಳಿಯ ಕಲ್ಪನೆಗಳು ಹುಟ್ಟಿಕೊಂಡಿರಬೇಕು. ಆರ್ಥಿಕ ಸಂಸ್ಕೃತಿಯ ಒಂದು ಅಂಗವಾಗಿ ಸುಳಿಯ ಬಗೆಗಿನ ಕಲ್ಪನೆಗಳು ಹುಟ್ಟುತ್ತವೆ. ಸುಳಿಗಳು ಆಯಾ ಆರ್ಥಿಕ ಸಂಸ್ಕೃತಿಯ ಮೌಲ್ಯ, ನೈತಿಕತೆ ಆದರ್ಶ, ಆಸಕ್ತಿ ನಿಷ್ಠೆಯ ಅಭಿವ್ಯಕ್ತಿಗಳಾಗಿರಬಹುದು.

**ಪ್ರಾದೇಶಿಕ ಹಿನ್ನಲೆ :** ಕರ್ನಾಟಕದ ಬಹುಪಾಲು ಪ್ರದೇಶಗಳಲ್ಲಿ ಸುಳಿಯ ಬಗೆಗಿನ ನಂಬಿಕೆಗಳನ್ನು ನೋಡಬಹುದು. ಪ್ರದೇಶದಿಂದ ಪ್ರದೇಶಕ್ಕೆ ಸುಳಿಗಳು ಕೊಡುವ ಫಲಿತಾಂಶಗಳಲ್ಲಿ ಭಿನ್ನತೆ ಇರುವುದನ್ನು ಗ್ರಹಿಸಬಹುದು. ಹಾಗೆಯೇ ಸುಳಿಗಳಿರುವ ಜಾಗ ಮತ್ತು ಹೆಸರುಗಳಲ್ಲೂ ಸಹ ಭಿನ್ನತೆಯನ್ನು ಕಾಣಬಹುದು. ಒಂದು ಪ್ರದೇಶದಲ್ಲಿ ಒಂದು ಸುಳಿ ಕೊಡುವ ಫಲ ಒಳ್ಳೆಯದಾಗಿದ್ದರೆ, ಇನ್ನೊಂದು ಪ್ರದೇಶದಲ್ಲಿ ಕೆಟ್ಟದ್ದಾಗಿರಬಹುದು.

**ಪ್ರಾಚೀನತೆಯ ಕಲ್ಪನೆ :** ಮನುಷ್ಯ ತನ್ನ ಸಂಘ ಜೀವನದ ಜೊತೆ ಜೊತೆಗೆ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಬಿಸಿ ಆರ್ಥಿಕ ಜೀವನಕ್ಕೆ ಎಂದಿನಿಂದ ಎತ್ತು ಮತ್ತು ಕುದುರೆಗಳನ್ನು ಬಳಸಲು ಪ್ರಾರಂಭಿಸಿದನೋ ಅಂದಿನಿಂದಲೇ ಸುಳಿಗಳ ಬಗೆಗಿನ ಕಲ್ಪನೆಗಳು ಹುಟ್ಟಿಕೊಂಡಿರಬೇಕು. ಅಂದಿನಿಂದ ಇಂದಿನವರೆಗೂ ಬೆಳೆಯುತ್ತಲೂ, ನಶಿಸುತ್ತಲೂ ಇವೆ. ಹಾಗಾಗಿ ಸುಳಿಯ ಬಗೆಗಿನ ಕಲ್ಪನೆಗಳು ಸಹ ಪ್ರಾಚೀನ ಮಾನವನ ಬದುಕಿನೊಂದಿಗೆ ಜನ್ಮ ತಾಳಿರುವುದರಲ್ಲಿ ಆಶ್ಚರ್ಯವಿಲ್ಲ.

**ಅನುಭವ ಹಾಗೂ ಮಾನಸಿಕ ಅನುಭವಗಳ ಮಿಳಿತ :** ಸುಳಿಯ ಬಗೆಗಿನ ಕಲ್ಪನೆ ಜನತೆಯ ಜೀವನಾನುಭವದ ಮೂಸೆಯಿಂದ ಮೂಡಿಬಂದು, ಆರ್ಥಿಕ ಬದುಕಿನಲ್ಲಿ ಬೆರೆತು ಪರಿಣಾಮಕಾರಿಯಾಗಿ ತಮ್ಮ ಪ್ರಭಾವ ಬೀರಿ ಜೀವಂತವಾಗಿವೆ. ಪುರಾತನ ಕಾಲದಿಂದ ಮಾನವ ನಾಗರೀಕತೆ ಪ್ರೌಢಸಂಸ್ಕೃತಿಯ ಹಂತವನ್ನು ಮುಟ್ಟುವವರೆಗೂ ಅವಿರತ ಅನುಭವಗಳನ್ನು ಪಡೆಯುತ್ತಾನೆ. ಕೆಲವು ಸುಳಿಯ ಕಲ್ಭನೆಗಳಿಗೆ ಕಾರಣವಾಗಿರಲೂಬಹುದು. ಅಲ್ಲದೆ ಮಾನಸಿಕವಾಗಿಯೂ ಕೆಲವು ಸುಳಿಯ ಕಲ್ಪನೆಗಳು ಉಂಟಾಗುತ್ತವೆ. ಅವುಗಳು ಘಟನೆಗಳ ಪುನರಾವೃತ್ತಿಯಾಗಿರಬಹುದು, ಅಥವಾ ಘಟನೆಗಳು ಎಂದೋ ನಡೆದು ಮತ್ತೆ ಘಟನೆಗಳು ನಡೆದಾಗ ಸಮರ್ಥನೆಗೆ ಅದು ಒಪ್ಪಿಗೆ ಎಂದಂತಾಗಿರಬಹುದು.

**ಅಭಯ ಅಥವಾ ನೆಚ್ಚಿಕೆಯ ಒಂದು ಮಾನಸಿಕ ಸ್ಥಿತಿ :** ಸುಳಿಯ ಬಗೆಗಿನ ನೆಲೆಗಟ್ಟೆಲ್ಲೆವೂ ನಂಬುವವರ ಮನೋವೈಖರಿಯನ್ನು ಪ್ರತಿಬಿಂಬಿಸುತ್ತದೆ. ಒಮ್ಮೊಮ್ಮೆ ಒಂದು ಸುಳಿಯ ಆಧಾರವೇನೆಂದು ನಿರ್ಧಿಷ್ಟವಾಗಿ ಮನಸ್ಸಿನಲ್ಲಿಲ್ಲದಿದ್ದರೂ ಆ ನಂಬಿಕೆಯನ್ನು ಒಪ್ಪಿ ಸ್ವೀಕರಿಸುವ ಸಾಧ್ಯತೆಯಿದೆ. ಪರಿಣಿತರ ತೀರ್ಪು ಎಷ್ಟೋ ವೇಳೆ ಪೂರ್ಣ ಪ್ರಜ್ಞೆ ಇಲ್ಲದ ಜೀವನಾನುಭವಗಳ ಮೇಲೆಯೇ ನಿಂತಿರುತ್ತದೆ. ಉದಾಹರಣೆಗೆ 'ದಾವಣಿ ಸುಳಿ ಇರೆಉವ ಎತ್ತನ್ನು ಕೊಂಡರೆ, ಕೊಂಡವರ ದಾವಣಿಯಲ್ಲಿ ಯಾವಾಗಲೂ ದನಗಳಿರುತ್ತವೆ' ಎಂದು ನಂಬುತ್ತಾರೆ.

**ಆರ್ಥಿಕ ಮತ್ತು ಉಪಭೋಗದ ಹಿನ್ನಲೆ :** ಎತ್ತು, ಎಮ್ಮೆ, ಕುದುರೆ ಇತ್ಯಾದಿ ಸಾಕು ಪ್ರಾಣಿಗಳು ಮನುಷ್ಯನ ಆರ್ಥಿಕ ಚಟುವಟಿಕೆಯ ಅಂಗಗಳಾಗಿದ್ದವು. ಇವುಗಳನ್ನು ಕೊಳ್ಳುವಲ್ಲಿ, ಮಾರುವಲ್ಲಿ, ಲಾಭಾಕಾಂಕ್ಷಿಯಾಗಿದ್ದ ಮನಸ್ಸು 'ಸುಳಿ'ಯ ಕಲ್ಪನೆಯನ್ನು ಹುಟ್ಟು ಹಾಕಿತು. ಕ್ರಮೇಣ, ಹೆಣ್ಣು ಉಪಭೋಗದ ವಸ್ತುವಾಗಿ ಪರಿಣಮಿಸಿ 'ಸುಳಿ' ಯ ಚೌಕಟ್ಟಿನೊಳಗೆ ಹೆಣ್ಣು ಕೂಡಾ ಸಿಲುಕಿಕೊಂಡಿದ್ದಾಳೆ.

**ಭೌತಿಕ ವಸ್ತುಗಳು : ಸುಳಿ**

ಪ್ರಕೃತಿಯಲ್ಲಿರುವ ಭೌತಿಕ ವಸ್ತುಗಳು ಮನುಷ್ಯನ ಜೀವನಕ್ಕೆ ಬಹಳ ಕಾಲದಿಂದಲೂ ಸಹಾಯ ಮಾಡುತ್ತಲೇ ಬಂದಿವೆ. ಹಾಗಾಗಿ ಒಂದು ರೀತಿಯಲ್ಲಿ ಪ್ರಕೃತಿಗೂ ಮತ್ತು ಮಾನವನಿಗೂ ಅವಿನಾಭಾವ ಸಂಬಂಧವಿದೆ. ಈ ಸಂಬಂಧಗಳು ಎಷ್ಟೊಂದು ಗಾಢವಾಗಿವೆ ಎಂದರೆ, ತನ್ನ ಅಪೇಕ್ಷೆಯ ಈಡೇರಿಕೆಗಾಗಿ ಸುಳಿ ಬಗೆಗಿನ ನಂಬಿಕೆಗಳನ್ನು ಹೇಗೆ ಹೊಂದಿದನೋ, ಹಾಗೆಯೇ ಪಕ್ರುತಿಯ ಭೌತಿಕ ವಸ್ತುಗಳಾದ ಗಾಳಿ, ನೀರು ಮತ್ತು ಕಲ್ಲುಗಳಲ್ಲಿಯೂ 'ಸುಳಿ' ಯನ್ನು ಗುರುತಿಸಿಕೊಂಡನು. ಹಾಗೆಯೇ ಅವುಗಳ ಬಗೆಗೆ ತನ್ನದೇ ಆದ ನಂಬಿಕೆಗಳನ್ನು ಸೃಷ್ಟಿಸಿಕೊಂಡನು.

ಗಾಳಿಯಲ್ಲಿರುವ ಸುಳಿಯನ್ನು ಸುಳಿಗಾಳಿ ಎಂದು ಕರೆಯುತ್ತಾರೆ. ಸುಂಟರಗಾಳಿ ಅದರ ವಿರಾಟ್ ಸ್ವರೂಪವಾಗಿದೆ. ಜನಪದರು ನೀರಿನ ಸುಳಿಗೆ 'ಮಡೆ' ಎಂದು ಕರೆಯುತ್ತಾರೆ ಅಂದರೆ ನೀರು ಯಥಾ ಸ್ಥಿತಿಯಲ್ಲಿ ಹರಿಯದೆ ಸುಳಿಯಾಕಾರದಲ್ಲಿ ತಿರುಗಿ ತಿರುಗಿ ಹರಿದಾಗ ಆ ಜಾಗಕ್ಕೆ ಸುಳಿ ಎನ್ನುತ್ತಾರೆ. ಸುಳಿ ತೀರಾ ದೊಡ್ಡದಾಗಿದ್ದರೆ ಅದನ್ನು 'ತಿರುಗಣಿ' ಎಂದು ಕರೆಯುತ್ತಾರೆ. ಅದರಲ್ಲಿ ಮನುಷ್ಯ, ಪ್ರಾಣಿ ಯಾವುದಾದರೂ ಸಿಕ್ಕಿ ಹಾಕಿಕೊಂಡರೆ ಪ್ರಾಣಾಪಾಯದಿಂದ ಹೊರಬರಲು ಸಾಧ್ಯವಿರುವುದಿಲ್ಲ. ಅಷ್ಟೊಂದು ಶಕ್ತಿ ನೀರಿನ ಸುಳಿ ಪಡೆದಿದೆ.

ಕಲ್ಲಿನಲ್ಲಿರುವ ಸುಳಿಯು ಸಹ ತನ್ನದೇ ಆದ ವಿಶಿಷ್ಟ ಲಕ್ಷಣ ಹೊಂದಿದೆ. ಸುಳಿಯು ಕಲ್ಲನ್ನು ಬೇರ್ಪಡಿಸುವಿಕೆಗೆ ಸಹಾಯ ಮಾಡುತ್ತದೆ. ಏಕೆಂದರೆ ಕಲ್ಲನ್ನು ಒಡೆಯಬೇಕಾದರೆ ಸುಳಿ ನೋಡಿ ಏಟು ಹಾಕಬೇಕು ಎನ್ನುತ್ತಾರೆ. ಇದನ್ನು ನೋಡಿಯೇ ಇರಬೇಕು 'ಸುಳಿ ನೋಡಿ ಕಲ್ಲು ಪಡೆ, ಪಳಿ ನೋಡಿ ಕುಸ್ತಿ ಹಿಡಿ' ಎಂಬ ಗಾದೆ. ಸುಳಿ ನೋಡಿ ಕಲ್ಲು ಒಡೆದರೆ ಕಲ್ಲನ್ನು ನಮಗೆ ಬೇಕಾದ ರೀತಿಯಲ್ಲಿ ಬಾಗ ಮಾಡಿಕೊಳ್ಳಬಹುದು. ಶಿಲ್ಪಶಾಸ್ತ್ರಜ್ಞರ ಪ್ರಕಾರ "ಸುಳಿ ಇರುವ ಕಲ್ಲುಗಳನ್ನು ಹೆಚ್ಚಾಗಿ ಶಿಲ್ಪಕಲೆಗೆ ಉಪಯೋಗಿಸುವುದಿಲ್ಲ ಎನ್ನುವುದು. ಅಂದರೆ ಕಲ್ಲಿನಲ್ಲಿರುವ ಸುಳಿಗಳು ತಮ್ಮದೇ ಆದ ಪಾತ್ರ ವಹಿಸುತ್ತವೆ ಎಂಬುದನ್ನು ಇದರಿಂದ ಗ್ರಹಿಸಬಹುದು" (ಎಸ್.ಎಂ. ಸಾವಿತ್ರಿ; ೧೯೯೫; ೫)

**ಜೀವ ಜಗತ್ತು : ಸುಳಿ**

ಪ್ರಕೃತಿಯ ಭೌತಿಕ ವಸ್ತುಗಳು ನೀಡುವ ಅನುಕೂಲದಂತೆಯೇ ಜೈವಿಕ ವಸ್ತುಗಳು ಸಹ ಮಾನವನ ಸುಸಂಬದ್ಧ ನೆಮ್ಮದಿಯ ಜೀವನಕ್ಕೆ ಅನುಕೂಲವನ್ನು ನೀಡುತ್ತಿವೆ. ಅದರಲ್ಲೂ ಪುರಷ ಎಂದು ಹೆಣ್ಣಿನ ಮೇಲೆ ಮೇಲುಗೈ ಸಾಧಿಸಿ ಅವಳನ್ನು ತನ್ನ ಭೋಗದ ವಸ್ತುವಿನಂತೆ ಕಂಡನೋ ಅಂದಿನಿಂದ ಹೆಣ್ಣಿನ ಮೇಲೆ ಹಲವಾರು ವಿಧಿ, ನಿಯಮ, ನಿಷೇದ ನಂಬಿಕೆಗಳನ್ನು ಹೇರಿದನು. ಅಂತಹವುಗಳಲ್ಲಿ 'ಸುಳಿ' ಒಂದು. ಮನುಷ್ಯರಿಗೆ ತಲೆಕೂದಲಲ್ಲಿಯ ಸುಳಿ ಸ್ವಾಭಾವಿಕ. ಮೈಮೇಲೂ ಅಲ್ಲಲ್ಲಿ ಕೂದಲಿದ್ದಲ್ಲಿ ಸುಳಿಗಳನ್ನು ಕಾಣಬಹುದು. ಹೆಣ್ಣಿನ ಮೈಮೇಲೆ ಇರುವ ಈ ಸುಳಿಗಳ ಆಧಾರದ ಮೇಲೆ ಅವಳ ಭವಿಷ್ಯ ನಿರ್ಧಾರವಾಗುತ್ತಿತ್ತು. ಅದರಂತೆ ದನಕರುಗಳಿಗೂ ಹಲವು ಸುಳಿಗಳಿರುವುದು ಅಸಂಭವವೇನಲ್ಲ. ವಿಶೇಷವಾಗಿ ಹೆಣ್ಣು, ಎತ್ತು ಮತ್ತು ಕುದುರೆಗಳ ವಿಷಯದಲ್ಲಿ ಜನಪದರು ಸುಳಿ ಕುರಿತು ತಮ್ಮದೇ ಅದ ಶಾಸ್ತ್ರವನ್ನು ರಚಿಸಿದ್ದಾರೆ. ಹಾಗೆಯೇ ಸಸ್ಯಗಳ ಬಗೆಗೂ ಸುಳಿಗಳನ್ನು ಗುರುತಿಸಿದ್ದಾರೆ.

**ಸಸ್ಯ : ಸುಳಿ**

ಮನುಷ್ಯನಿಗೆ ಭೌತಿಕ ವಸ್ತುಗಳು, ಪ್ರಾಣಿಗಳು ಹಾಗೂ ಪಕ್ಷಿಗಳು ಹೇಗೆ ಜೀವನಕ್ಕೆ ಅವಶ್ಯಕವಾಗಿರುತ್ತವೆಯೋ ಹಾಗೆಯೇ ಸಸ್ಯ ಜಗತ್ತು ಸಹ ಅಷ್ಟೆ ಅವಶ್ಯಕವಾಗಿರುತ್ತದೆ. ಜೀವನಾವಶ್ಯಕಕ್ಕೆ ಬೇಕಾಗುವ ಬಹುಪಾಲು ಆಹಾರ ಮತ್ತು ಗಾಳಿಯನ್ನು ಒದಗಿಸುವುದರಲ್ಲಿ ಸಸ್ಯಗಳ ಪಾತ್ರ ಬಹು ಮುಖ್ಯವಾದುದು. ನಮ್ಮ ಒಕ್ಕಲಿಗರು 'ಬಾಳಿ ಸುಳಿಬಿಟ್ಟೈತಿ' 'ಟೆಂಗಿನ ಸುಳಿ ಒಣಗೈತಿ' 'ಜ್ವಾಳದ ಸಸಿಗೆ ಸುಳಿ

ಬಿದ್ದೈತಿ' ಎನ್ನುವುದು ಸಾಮಾನ್ಯ. ನಮ್ಮ ಜನಪದರ ದೃಷ್ಟಿಯಲ್ಲಿ ಸುಳಿಗಳನ್ನು ಹೊಂದಿರುವ ಮರಗಳನ್ನು ಕಡಿದರೆ ಕಡಿದವರು ಸತ್ತುಹೋಗುತ್ತಾರೆ ಅಲ್ಲದೆ ಅವರ ಸುಳಿಯೇ (ವಂಶವೇ) ಸತ್ತು ಹೋಗುತ್ತದೆಂಬ ನಂಬಿಕೆ ಇದೆ.

**ಕುದುರೆ : ಸುಳಿ, ಲಕ್ಷಣ**

ಇತಿಹಾಸಪೂರ್ವ ಯುಗಗಳಲ್ಲಿ ಯುರೋಪು ಮತ್ತು ಏಷ್ಯಾ ಖಂಡಗಳ ಹಲವು ಪ್ರದೇಶಗಳಲ್ಲಿ ಕುದುರೆ ಜಾತಿಯ ಪಶುಗಳು ಕಾಡಾಡಿಗಳಲ್ಲಿ ಅಲೆಯುತ್ತಿದ್ದ ಕಾಲವಿತ್ತು. ಹಾಗೆಯೇ ಕತ್ತೆ, ಒಂಟೆ ಮೊದಲಾದವೂ ಇದ್ದವು. ಇಂದು ವನ್ಯ ಸ್ಥಿತಿಯಲ್ಲಿರುವ ಕುದುರೆಗಳ ಬಳಗ ತೀರಾ ಸ್ವಲ್ಪ. ಕಳೆದ ಶತಮಾನದ ತನಕವೂ ಯುರೋಪ್ಯಾದಲ್ಲಿ ಅವು ಮೊದಲಿದ್ದ ಯಾವಲ್ಲಿಯೂ ಕಾಡು ಕುದುರೆಗಳ ಕುಲ ಇಂದು ಉಳಿದಿಲ್ಲ. ಅವುಗಳಿಂದ ಪಡೆದ, ಸಾಧು ಮಾಡಿದ ಕುಲವೇ ಈಚಿನ ಎಂಟು ಸಾವಿರ ವರ್ಷಗಳಿಂದಲೂ ಮನುಷ್ಯನ ಆಳಾಗಿ ಬಂದುದು ಕಾಣಿಸುತ್ತದೆ. ಅದೇ ಕುಲದ ಪಶುಗಳು, ಸೈಬೀರಿಯಾದ ಹುಲ್ಲುಗಾವಲು ಮತ್ತು ಮರುಭೂಮಿಗಳಲ್ಲೂ, ಮಂಗೋಲಿಯ ಮತ್ತು ಚೀನಾ ದೇಶಗಳಲ್ಲೂ ಉಳಿದುಕೊಂಡಿದ್ದವಂತೆ. ಇತ್ತೀಚೆಗೆ ಅವುಗಳಲ್ಲಿ ಕೆಲವೇ ಕಾಡು ಕುದುರೆಗಳು ಗೋಬಿ ಮರುಭೂಮಿಯಲ್ಲಿವೆ ಎಂದು ಹೇಳುವವರಿದ್ದಾರೆ. ಮಾನವನ ಆರೈಕೆಯಲ್ಲಿ ದನ, ನಾಯಿ, ಕುರಿ, ಕತ್ತೆ, ಮೊದಲಾದ ಪಶುಗಳು ಹೇಗೆ ಸಾಧುವಾದವೋ, ಅದೇ ರೀತಿ ವಿವಿಧ ಗುಣ, ಬಳಕಜೆ, ಆಕಾರ ಮೊದಲಾದ ಉದ್ದೇಶಗಳಿಗಾಗಿ ಮಿಶ್ರ ತಳಿಗಳಿಂದ ಪಡೆದ ಕುದುರೆಗಳು ಇವೆ.

ತಾಂತ್ರಿಕತೆಯ ಅವಿಷ್ಕಾರಕ್ಕಿಂತ ಮೊದಲು ಒಂದೂರಿನಿಂದ ಇನ್ನೊಂದು ಊರಿಗೆ ಪ್ರಯಾಣಕ್ಕೆ, ಮನೆಗೆ ನೀರು ತರಲು, ಹೊಲದಿಂದ ಭಾರವಾದ ವಸ್ತುಗಳನ್ನು ತರಲು ದನಕರುಗಳನ್ನು ಮೇಯಿಸಲು ಕುದುರೆಯನ್ನು ಬಳಸುತ್ತಿದ್ದರು. ಕಾಲಾನಂತರದಲ್ಲಿ ರಾಜರುಗಳು ಯುದ್ಧದಲ್ಲಿ ಕುದುರೆಗಳನ್ನು ಬಳಸಿದರು. ಇತ್ತೀಚಿನ ದಿನಗಳಲ್ಲಿ ಪ್ರತಿಷ್ಠೆಯ ಸಂಕೇತವಾಗಿ ಶ್ರೀಮಂತರು ಬಳಸುತ್ತಿದ್ದರು. ಇತ್ತೀಚೆಗೆ ಜಟಕಾ ಬಂಡಿಗಳನ್ನು ಎಳೆಯಲು ಕುದುರೆಗಳನ್ನು ಬಳಸುವರು. ಬಹುಮುಖ್ಯವಾಗಿ ಈಗ ರೇಸ್ ನಲ್ಲಿ ಕುದುರೆಗಳನ್ನು ಬಳಸುತ್ತಾರೆ.

'ಹೆಣ್ಣಿನ ನೆಲೆ, ನೀರಿನ ನೆಲೆ, ಕುದುರೆಯ ನೆಲೆ ತಿಳಿದಿಲ್ಲ' ಎಂಬ ಜನಪದರ ಹೇಳಿಕೆ, ಅವರ ಅನುಭವ ಜನ್ಯವಾದುದು. ಏಕೆಂದರೆ, ಕುದುರೆಯು ಮನುಷ್ಯನ ಸಾಕು ಪ್ರಾಣಿಯಾಗಿದ್ದರೂ ಸಹ, ಅದರ ಸಂಪೂರ್ಣ ಶಕ್ತಿ ಸಾಮರ್ಥ್ಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಕಷ್ಟ ಸಾಧ್ಯ. ಇಂತಹ ಕುದುರೆಗಳನ್ನು ಕೊಳ್ಳುವಾಗ 'ಸುಳಿ' ಯನ್ನು ನೋಡುವಷ್ಟು ಇನ್ನಾವ ಪ್ರಾಣಿಗೂ ನೋಡುತ್ತಿರಲಿಲ್ಲವಂತೆ. ಕುದುರೆಯ 'ಸುಳಿ' ಸರಿಯಾಗಿರದಿದ್ದರೆ ಅದರ ಮಾಲೀಕನಿಗೆ ಕೆಡುಕು ಕಟ್ಟಿಟ್ಟದ್ದು. ಎಷ್ಟೋ ಜನರ ಪ್ರಾಣಹಾನಿಗೂ ಅದರ ಸುಳಿ ಕಾರಣವೆಂದು ಪರಿಭಾವಿಸಲಾಗುತ್ತಿತ್ತು.

ಒಂದು ಗಾದೆಯಂತೆ ಎತ್ತಿಗೆ ಹತ್ತು ಸುಳಿಗಳಾದರೇ ಕುದುರೆಗೆ ಮುನ್ನೂರಾ ಅರವತ್ತು ಸುಳಿಗಳೆಂದು ಹೇಳಲಾಗುತ್ತದೆ. ಅದರ ಲದ್ದಿಗೂ ಸುಳಿಗಳಿರುತ್ತವಂತೆ. ಈ ಎಲ್ಲಾ ಸುಳಿಗಳನ್ನು ಪರಿಶೀಲಿಸಿ ಕುದುರೆ ಕೊಳ್ಳುವ ಕೆಲಸ ಸಣ್ಣದೇನಲ್ಲ. ಹಿಂದೆ ರಾಜರುಗಳಿಗೆ ಕುದುರೆ ಪ್ರಮುಖ ವಸ್ತುವಾಗಿತ್ತು. ಕುದುರೆ ಬಲ ಅರಸರ ಸೈನ್ಯ ಬಲದ ಪ್ರಮುಖ ಅಂಗವಾಗಿತ್ತು. ಅದಕ್ಕಾಗಿ ರಾಜರುಗಳು ತಮ್ಮ ಆಸ್ಥಾನದಲ್ಲಿ ಗಜಶಾಸ್ತ್ರ, ಹಯಶಾಸ್ತ್ರ ಲಕ್ಷಣಗಳ ಬಗೆಗೆ ಬಲ್ಲವರನ್ನು ಇಟ್ಟುಕೊಳ್ಳುತ್ತಿದ್ದರು.

ಬಿಳಿ ಮತ್ತು ಕೆಂಪು ಬಣ್ಣದ ಕುದುರೆಗಳನ್ನು ಸಾಕುವುದು ಒಳ್ಳೆಯದೆಂದು ನಂಬುತ್ತಾರೆ. ಕೆಲವೆಡೆ ಒಂದೇ ಬಣ್ಣದ ಕುದುರೆಯನ್ನು ಇಷ್ಟಪಡುವುದಿಲ್ಲ. ಅದರಲ್ಲೂ ಕಪ್ಪು, ಕರಿಯಮಾಸ (ಬೂದಿಬಣ್ಣ) ಕುದುರೆಯನ್ನು ಯಾರೂ ಇಷ್ಟಪಡುವುದಿಲ್ಲ. ಅಂತಹವುಗಳು ಅಶುಭ ಮತ್ತು ಮಂದ ಗುಣದ್ದೆಂದು ಭಾವಿಸುವರು. ಗಂಡು ಕುದುರೆ ಕರಿ ಇಲ್ಲವ ಕೆಂಪು ಬಣ್ಣದಿದ್ದು, ಅದರ ಹಣೆಯ ಮೇಲೆ (ಹಣೆಚಿಕ್ಕಿ) ಸಣ್ಣ ಬಿಳಿಯ ಪಟ್ಟಿ ಬಾಯಿಯವರೆಗೆ ಬಂದಿರಬಾರದು. ಅದನ್ನು ಅಶುಭ ಲಕ್ಷಣವೆನ್ನುವುದಕ್ಕಿಂತ ಅಂತಹ ಕುದುರೆ ಹೇಳಿಕೊಳ್ಳಬೇಕಾದಷ್ಟು ಜಾಣ ಇಲ್ಲವೆ ಚಪಲವಲ್ಲ ಎಂಬುದು ಅವರ ಅನುಭವ ಸತ್ಯವಾಗಿರಬಹುದು.

ಕರಿಯ ಇಲ್ಲವೆ ಕೆಂಪು ಬಣ್ಣದ ಕುದುರೆ ಇದ್ದು, ಅದರ ಹಣೆಯ ಮೇಲೆ ಬಿಳಿಯ ಪಟ್ಟಿ ಇರುವುದಲ್ಲದೆ ಅದರ ಸಮಪಾದಗಳು ಬಿಳಿಯವಿರಬೇಕು. ವಿಷಮ ಪಾದಗಳಿಗೆ ಬಿಳಿಯ ಬಣ್ಣವಿದ್ದರೆ ಅದು ಕೊಳ್ಳಲು ಯೋಗ್ಯವೆಂದು ಪರಿಣಿತರು ಹೇಳುತ್ತಿರಲಿಲ್ಲ. ನಾಲ್ಕೂ ಪಾದಗಳು ಬಿಳಿಯವಿದ್ದು, ಹಣೆಯ ಮೇಲೆ ಚಿಕ್ಕದಾದ ಬಿಳಿಯ ಪಟ್ಟಿ ಇದ್ದರೆ ಅದು ಬಹಳ ಒಳ್ಳೆಯ ಲಕ್ಷಣವೆಂದು ತಿಳಿಯುತ್ತಿದ್ದರು. ಅಂತಹ ಕುದುರೆಯನ್ನು 'ಪಂಚ-ರಂಗಿ', 'ಅಬಲಾಕ' ಎಂದು ಕರೆಯುತ್ತಿದ್ದರು. ಸಂಪೂರ್ಣ ಕೆಂಪು ಬಣ್ಣದ ಕುದುರೆಯ ಬೆನ್ನಮೇಲೆ ಉದ್ದಕ್ಕೂ ಗಡದಾದ ಕೆಂಪುಪಟ್ಟಿ ಇದ್ದರೆ, ಅದನ್ನು ಸಭ್ಯ ಉತ್ತಮ ಕುದುರೆ ಎಂದು ಪರಿಗಣಿಸಲಾಗುತ್ತದೆ. ಹಂಡಬಂಡ (ಕೆಂಪು ಮತ್ತು ಬಿಳಿ ಅಥವಾ ಕರಿ ಮತ್ತು ಬಿಳಿ) ಕುದುರೆಗಳನ್ನು ಉತ್ತಮ ಕುದುರೆಗಳೆಂದು ನಂಬಲಾಗುತ್ತಿದ್ದರೂ ಅದರಲ್ಲಿ ಬಿಳಿಯ ಭಾಗ ಹೆಚ್ಚಿರಬಾರದಂತೆ! ಅದರಲ್ಲೂ ಕೆಂಪು ಮತ್ತು ಬಿಳಿಯ ಹಂಡ ಬಂಡದ ಕುದುರೆಗಳು ವಿಶೇಷ ಬೇಡಿಕೆಯಲ್ಲಿರುತ್ತವೆ.

"ಆಯಾಲು (ಕುತ್ತಿಗೆಯ ಮೇಲಿನ ಜವೆಗೂದಲು) ಹೆಣ್ಣು ಕುದುರೆಗೆ ಎಡಕ್ಕೆ ಬೀಳಬೇಕು. ಗಂಡುಕುದುರೆಗೆ ಬಲಕ್ಕೆ ಬೀಳಬೇಕು. ಇದಕ್ಕೆ ವ್ಯತಿರಿಕ್ತವಾಗಿದ್ದ ಕುದುರೆ ಮೇಲುನೋಟದಿಂದಲೇ ತ್ಯಾಜ್ಯ. ಅದರಂತೆ ಬಾಲದ ಜವೆ ನೀಳವಾಗಿರಬೇಕು. ಅವು ಹುರಿಯಾಗಿ ಇಲ್ಲವೇ ಗುಂಗುರಾಗಿ ಇರಕೂಡದು. ಗೊರಸು ಬಿರುಸಾಗಿ ಚಿಕ್ಕವಾಗಿರಬೇಕು, ಚಪ್ಪಟೆ ಗೊರಸಿನ ಕುದುರೆ ನಿರುಪಯೋಗಿ. ಕಿವಿಗಳು ಚಿಕ್ಕವಾಗಿರುವುದು ಸಲ್ಲ ಲಕ್ಷಣದ ಕುರುಹು. ಉತ್ತಮ, ಜಾತಿಯ ಕುದುರೆ ಎಂದೂ ಮಲಗುವುದೇ ಇಲ್ಲ. ಅದರ ನಿದ್ರೆ ನಿಂತಲ್ಲೇ" (ಎಂ.ಜಿ. ಬಿರಾದಾರ ೧೯೮೭-೪೬).

ಕುದುರೆಯ ಶರೀರ ತತ್ತ್ವವು ಪೃಥ್ವಿ, ಅಪ್ಪು, ತೇಜ, ವಾಯು ಎಂಬ ನಾಲ್ಕು ತತ್ವಗಳನ್ನೂ ಒಳಗೊಂಡಿರುತ್ತದೆ. ಪೃಥ್ವ ತತ್ವವುಳ್ಳದ್ದು, ಮೀನಿನ ವಾಸನೆಯಿಂದ ಕೂಡಿಯೂ ಬಲಹೀನವಾಗಿಯೂ ದುಡುಕು ಬುದ್ಧಿಯಿಂದಲೂ ಇರುತ್ತದೆ. ಅಪ್ಪು ತತ್ತ್ವವನ್ನುಳ್ಳ ಕುದುರೆಯ ಶರೀರ ಸುವಾಸನೆಯಿಂದಲೂ ಆಹಾರ ನಿಯಮಗಳಲ್ಲಿ ಮಿತವುಳ್ಳದ್ದಾಗಿಯೂ, ಚೊಕ್ಕಟವಾಗಿಯೂ ಇರುತ್ತದೆ. ತೇಜೋ ತತ್ತ್ವವನ್ನುಳ ಕುದುರೆಯ ಶರೀರ ಸಾಂಬ್ರಾಣಿ ವಾಸನೆಯುಳ್ಳದ್ದಾಗಿಯೂ ಬಲ ಹಾಗೂ ಚುರುಕಾಗಿಯೂ ಇರುತ್ತದೆ. ವಾಯು ತತ್ತ್ವವನ್ನುಳ್ಳ ಕುದುರೆಯ ಶರೀರ ತುಪ್ಪದ ವಾಸನೆಯಿಂದಲೂ ಗರ್ವಯುಕ್ತವಾಗಿಯೂ ಇರುತ್ತದೆ. ಇವಲ್ಲದೆ ಶ್ವಾಸ, ಶ್ಲೇಷ, ಪೈತ್ಯ, ವಾಯು ತತ್ವಗಳಿಂದಾಗಿ ನಾಲ್ಕು ವಿಧ ತತ್ವಗಳಿರುತ್ತವೆ.

ನಾಲ್ಕು ಬಣ್ಣದ ಕುದುರೆಗಳಿರುತ್ತವೆ. ಅವುಗಳಲ್ಲಿ 'ಬಿಳಿ ಕುದುರೆಯು ಬ್ರಾಹ್ಮಣ ವರ್ಗಕ್ಕೂ, ಕೆಂಪು ಕುದುರೆಯು ಕ್ಷತ್ರಿಯ ವರ್ಗಕ್ಕೂ, ಹಳದಿ ಕುದುರೆ ವೈಶ್ಯ ಪಂಗಡಕ್ಕೂ, ಕಪ್ಪು ಕುದುರೆಯು ಶೂದ್ರ ವರ್ಗಕ್ಕೂ ಸೇರಿರುತ್ತವೆಂದು ಅಶ್ವಶಾಸ್ತ್ರದಿಂದ ತಿಳಿಯುತ್ತದೆ. ನಾಲ್ಕು ಕಾಲುಗಳು, ಎರಡು ಕರ್ಣಾಂತಗಳು, ಮುಖ, ಬಾಲವು ಇವೆಲ್ಲ ಬಿಳುಪಾಗಿರುವ ಕುದುರೆ 'ಅಷ್ಟ ಮಂಗಳಿ' ಎಂತಲೂ; ನಾಲ್ಕು ಕಾಲುಗಳು ಮತ್ತು ಮುಖ ಬಿಳುಪಾಗಿರತಕ್ಕ ಕುದುರೆ 'ಪಂಚಕಲ್ಯಾಣಿ' ಎಂತಲೂ ಕರೆಸಿಕೊಳ್ಳುತ್ತದೆ. ಅಷ್ಟಮಂಗಳಿ ಒಡೆಯನಿಗೆ ರಾಜ ವೈಭವವನ್ನುಂಟು ಮಾಡುತ್ತದೆ. ಕೆಂಪು ಬಣ್ಣದ ಕುದುರೆಗೆ ಬೆನ್ನಿನ ಮೇಲೆ ಬಿಳಿ ಪಟ್ಟೆಯು ದುಂಡಾಗಿಯೂ ಶರೀರವು ಬಿಳುಪು, ಕಪ್ಪು, ಹಳದಿ ಬಣ್ಣವಾಗಿದ್ದೂ ಬೆನ್ನಿನ ಮೇಲೆ ದುಂಡಾದ ಚಿಹ್ನೆಗಳೂ ಹೊಟ್ಟೆಯ ಕೆಳಭಾಗವು ಬಿಳುಪಾಗಿಯೂ ಇರುವ ಕುದುರೆ ಯೋಗ್ಯವಾದದ್ದೆಂದು ತಿಳಿದು ಬರುತ್ತದೆ. (ಡಾ. ಚಂದ್ರಶೇಖರ ಕಂಬಾರ; ೧೯೮೫; ೪೩೭)

ಎಲ್ಲಾ ಕುದುರೆಗಳಲ್ಲಿ ಶಂಕ, ಚಕ್ರ, ಹಲ, ಧನಸ್ಸು ಗದೆ, ಸೂರ್ಯಬಿಂಬ, ಯಜ್ಞವೇದಿಕೆ, ಕಲಶ, ಮತ್ಸ್ಯ, ಅಂಕುಶ, ಧ್ವಜ, ಕೂರ್ಮ, ವಜ್ರ, ಅಷ್ಟಕೋನಾ, ಬಾಣ, ಪಂಚಕೋಣ, ಛತ್ರ - ಈ ವಸ್ತುಗಳ ಆಕಾರಗಳಿದ್ದು ಮುಖವು ಬಿಳುಪಾಗಿರತಕ್ಕ ಕುದುರೆಗಳು ಮಂಗಳಕರವಾದವುಗಳು.

ಎಲ್ಲಾ ಕುದುರೆಗಳಲ್ಲಿ ಸಾಮಾನ್ಯವಾಗಿರುವಂತಹದ್ದು 'ಮಸಕ್ತ ಸುಳಿ' ಅದು ಕಿವಿಯ ಗಡ್ಡಿಯ ಹಿಂದೆ ಒಂದಂಗಲ ಅಂತರದಲ್ಲಿ ಇರುತ್ತದೆ. ಇದು ಒಳ್ಳೆಯದು. ಇದಕ್ಕಿಂತ ಒಂದಂಗಲ ಕೆಳಕ್ಕಿದ್ದರೆ ಅದು 'ಜಾರಮಸ್ತಕ ಸುಳಿ' ಇದು ಕುದುರೆಗೇ ಕುಂದು. ಎರಡೂ ಕಣ್ಣಿನ ಮಧ್ಯದಿಂದ ಒಂದೆರಡಂಗುಲ ಮೇಲೆ ಸುಳಿ ಇದ್ದು ಅದರ ಹಣೆಗೆ ಇನ್ನೊಂದು ಚಿಕ್ಕದಾದ ಸುಳಿ ಇದ್ದರೆ ಈ ಎರಡನ್ನೂ 'ಅಡಕ ಸುಳಿ' ಎಂದೂ ಕರೆಯುತ್ತಾರೆ. ಈ ಸುಳಿ ಇದ್ದ ಕುದುರೆ ಕೊಂಡವರ ಮನೆತನ ಅಡಕವೇರಿದಂತೆ ಏರುತ್ತದೆಯಂತೆ! ಒಂದು ವೇಳೆ ಕೆಳಗಿನ

ಸುಳಿಗಿಂತ ಮೇಲಿನದು ದೊಡ್ಡದಿದ್ದರೆ ಅಡಕಲು ಉರುಳಿ ಬೀಳುವುದು. ಇದು ಅಶುಭ. ಇಲ್ಲವೇ ಕೆಳಗಿನ ಸುಳಿ ಎರಡೂ ಕಣ್ಣಿನ ಮಧ್ಯೆ ಇದ್ದರೆ ಅದು 'ಶೋಕಾವಳಿ' . ಹಾಗೆ ಕರೆಯುವಲ್ಲಿಯೇ ಅದರ ದುಷ್ಪರಿಣಾಮ ಧ್ವನಿಸುತ್ತದೆ. ಸಾಮಾನ್ಯವಾಗಿ ಬಹಳ ಕುದುರೆಗಳಿಗೆ ಹಣೆಯ ನಡುವೇ ಒಂದೇ ಸುಳಿ ಇರುವುದು. ಕುಂಕುಮ ಹಚ್ಚುವ ಸ್ಥಳದಲ್ಲಿ ಅದು ಇರುವುದರಿಂದ ಅದಕ್ಕೆ 'ಕುಂಕುಮ ಸುಳಿ' ಎನ್ನುವರು. ಕಣ್ಣಿನಿಂದ ಒಂದಂಗುಲ ಕೆಳಗೆ ಕಪಾಳಕ್ಕೆ ತೀರಾ ಚಿಕ್ಕದಾದ ಸುಳಿಯೊಂದಿದ್ದು, ಅದರ ಕೆಳಗೆ ಅಂದರೆ, ಕೆಳದವಡೆಯ ಕಡೆಗೆ ಇನ್ನೊಂದು ಅಷ್ಟೇ ಚಿಕ್ಕದಾದ ಸುಳಿ ಇರುತ್ತದೆ. ಇವೆರಡನ್ನು ಕೂಡಿಯೇ 'ಗಾನಕೋಡ ಸುಳಿ' ಎನ್ನುತ್ತಾರ. ಮೂಗಿನ ಹೊರಳೆಗಳ ಮಧ್ಯೆ ಸುಳಿ ಇದ್ದರೆ ಆ ಕುದುರೆ ತೀರ ದಡ್ಡ ಇರುವುದೆಂದು ಹೇಳುತ್ತಾರೆ. ಅದನ್ನು 'ದಡ್ಡ ಸುಳಿ' ಎಂದೇ ಕರೆಯುತ್ತಾರೆ. ಇದಕ್ಕೂ ಕೆಟ್ಟದಾದ ಇನ್ನೊಂದು ಸುಳಿ 'ಬೊಬ್ಬಿಸುಳಿ' ಅದು ಕುದುರೆಯ ಕೆಳದುಟಿಯ ಕೆಳಗೆ ಇರುತ್ತದೆ. ಈ ಎರಡೂ ಸುಳಿಗಳಿದ್ದ ಕುದುರೆ ಎಂದೂ ಮಾರಾಟವಾಗುವುದೇ ಕಷ್ಟ. ಕೊಂಡವರು ಬೊಬ್ಬೆ ಹೊಡೆಯದೆ ಬೇರೆ ಗತಿಯಿಲ್ಲವಂತೆ. 'ಕುದುರೆಗೆ ಸುಳಿ ಕೊರಳ ತುಂಬ' ಎಂದು ಹೇಳುತ್ತಾರೆ. ಒಂಭತ್ತನೆಯ ಸುಳಿ 'ಉರ್ಲ ಸುಳಿ'. ಈ ಕುದುರೆ ಕಟ್ಟಿದವ ಸಂಸಾರದ ತಾಪತ್ರಯಕ್ಕೆ, ಬುದುಕಿನ ಬೇರೆ ಸಮಸ್ಯೆಗಳಿಗೂ ಹೆದರಿ ಉರ್ಲು ಹಾಕಿಕೊಂಡು ಸಾಯಬೇಕಾಗುತ್ತದಂತೆ. ಈ ಸುಳಿ ಕುದುರೆಯ ಮುಖದಿಂದ ಕುತ್ತಿಗೆ ಆರಂಭವಾಗುವಲ್ಲಿ ಗಂಟಲಿಗೆ ಇರುತ್ತದೆ. ಅದರ ಕೆಳಗೆ ಗೆಜ್ಜೆ, ಲಡ್ಡು, ಕಟ್ಟುವಲ್ಲಿ ಇದ್ದ ಸುಳಿಯನ್ನು 'ಕಂಠಾಭರಣ ಸುಳಿ' ಎನ್ನುವರು. ಇದು ಮಂಗಲದಾಯಕ. ಶುಭ ಸೂಚಕ. ಇದಕ್ಕೂ ಕೆಳಗಿನ ಕುತ್ತಿಗೆಯ ಭಾಗದಲ್ಲಿದ್ದ ಅಂದರೆ ಎದೆಯಿಂದ ಕುತ್ತಿಗೆಯ ನಡುವೆ ಇದ್ದ ಸುಳಿಯನ್ನು 'ದೇವಮಣಿ ಸುಳಿ' ಎಂದು ಹೇಳುತ್ತಾರೆ ಈ ಸುಳಿಯ ಕುದುರೆ ಬಹಳ ಚಪಲವಾಗಿದ್ದು ಇದಕ್ಕೆ ಬೇಡಿಕೆ ಅಧಿಕವಾಗಿರುತ್ತದೆ. ಎರಡೂ ಮುಂಗಾಲ ಮೊಳಕಾಲ ಹಿಂದೆ ಇದ್ದ ಸುಳಿಗಳನ್ನು 'ಬೇಡಿಸುಳು' ಎಂದು ಹೆಸರಿಸುತ್ತಾರೆ. ಈ ಕುದುರೆಯ ಯಜಮಾನನ ಕೈಗೆ ಖಚಿತವಾಗಿ ಬೇಡಿ ಬರುತ್ತದೆಂಬ ನಂಬಿಕೆ ಇದೆ. ಇದು ತೀರಾ ಕೆಟ್ಟ ಸುಳಿಗಳಲ್ಲೊಂದು. ಹಿಂಗಾಲ ಮೊಳಕಾಲಿಗೂ ಅದೇ ರೀತಿಯ ಸುಳಿಗಳಿದ್ದರೆ ಅವನ್ನೂ ತೀರ ಕೆಟ್ಟವೆಂದು ಪರಿಗಣೀಸುತ್ತಾರೆ. 'ಗೂಟಾಪಳಿ ಸುಳಿ' ಸುಳಿಯಿದ್ದ ಕುದುರೆ ತನ್ನ ಮಾಲೀಕನನ್ನು 'ಗೂಟ' 'ಪಳಿ' ಕಿತ್ತಿಸುತ್ತದೆ. ಅಂದರೆ ಅವನನ್ನು ಊರು ಬಿಡಿಸುತ್ತದೆಂಬುದು ಜನಜನಿತ ತಿಳುವಳಿಕೆ. ಇಂತಹ ಕುದುರೆಗಳ ಮಾರಾಟ ಇಲ್ಲವೆಂದೇ ತಿಳಿಯಬೇಕು. ಕೆಲವು ಕುದುರೆಗಳನ್ನು ಹತ್ತಿ ತಿರುಗಾಡಲು ಬಳಸುವುದೇ ಇಲ್ಲ. ಕೇವಲ ಭಾರ ಹೊರಲು, ಸೇಂದಿ ಮೊದಲಾದ ಕೀಲು ವಸ್ತುಗಳನ್ನು ತರಲು ಮಾತ್ರ ಬಳಸುತ್ತಾರೆ. ಇಂತಹ ಕುದುರೆಗಳಿಗೆ 'ಪಕಾಲಿ ಸುಳಿ' ಇರುತ್ತದೆ. ಈ ಸುಳಿ ಇದ್ದ ಕುದುರೆಗಳನ್ನು ಮೇಲ್ವರ್ಗದವರಾರೂ ಸಾಕುವುದಿಲ್ಲ. ಹಿಂಗಾಲಿನಿಂದ ಸ್ವಲ್ಪ ಮುಂದೆ ಕಿಪ್ಪೊಟೆಯ ಮೇಲೆ ಈ ಸುಳಿ ಇರುತ್ತದೆ. ಕೆಲವು ಸುಳಿಗಳು ಒಬ್ಬರಿಗೆ ಅನುಕೂಲವಾಗಿದ್ದರೆ ಅವೇ ಸುಳಿಗಳು ಇನ್ನೂ ಕೆಲವರಿಗೆ ಪ್ರತಿಕೂಲವೂ ಆಗಿರುವುದುಂಟು. 'ಗಂಗಾವಾಟಸುಳಿ' ಅಥವಾ 'ಬಂಗಾರಪಾಟ ಸುಳಿ' ಎಂದು ಹೇಳುವ ಸುಳಿಯನ್ನು ಉದಾಹರಿಸಬಹುದು. ಥಡಿಯ ಮುಂದಿನ ಭಾಗವಿರುವ ಸ್ಥಳದಲ್ಲಿ ನೀರು ಹಾಕಿದರೆ, ಅದು ಮುಂಗಾಲು ನಡುವಿರುವ ಎದೆಯಿಂದ ಸ್ವಲ್ಪ ಹಿಂದೆ ಹಾದು ಬೀಳುವಲ್ಲಿ ಈ ಸುಳಿ ನೆಲಕ್ಕೆ ಮುಖ ಮಾಡಿ ಇರುತ್ತದೆ. ಈ ಸುಳಿಯಿದ್ದ ಕುದುರೆ ಕೆಲವರ 'ಘರ್ ಸಪಾಟ' ಮಾಡಲೂಬಹುದು. ಇನ್ನು ಕೆಲವರಿಗೆ 'ಬಂಗಾರ ಪಾಟ' ಆಗಿ ಅವರನ್ನು ಉತ್ಕರ್ಷಕ್ಕೂ ಒಯ್ಯಬಹುದು. ಮುಂಗಾಲು ಪಚ್ಚೆಯ ಮೇಲೆ ಇರುವ ಇನ್ನೊಂದು ಸುಳಿಯನ್ನು 'ಹುರದಾವಳಿಸುಳಿ' ಎಂದೂ ಹೇಳುತ್ತಾರೆ. ಈ ಸುಳಿಯ ಕುದುರೆ ಬಹಳ 'ವಾಂಡ' ಇರುತ್ತದೆ ನಂಬಿಗಸ್ಥವಲ್ಲ. ನಿಯಂತ್ರಣದಲ್ಲಿ ಆ ಕುದುರೆ ಬರುವುದೇ ಇಲ್ಲ. 'ಸಿದಿಗಿ ಸುಳಿ' ಎಂದು ಹೇಳುವ ಸುಳಿ ತೀರ ಕೆಟ್ಟದ್ದು. ಕುತ್ತಿಗೆ ಮಧ್ಯೆ ಆಯಾಲುವಿನಲ್ಲಿ ಈ ಸುಳಿ ಇರುತ್ತದೆ. ಈ ಸುಳಿ ಅಶುಭವಷ್ಟೇ ಅಲ್ಲ. ಸಾಕಿ ಸವಾರನ ಸಿದಿಗೆ ಕಟ್ಟಿಸುತ್ತದೆ ಎಂಬುದು ಬಹುಪಾಲು ಜನರ ನಂಬಿಕೆ (ಎಂ.ಜಿ. ಬಿರಾದಾರ; ೧೯೮೭-೪೯:೪೭:೪೮). ಹಿಂಗಾಲ ಮೊಣಕಾಲ ಮೇಲೆ ಅಂದರೆ ಸುಮರು ಎರಡು ಇಂಚು ಮೇಲುಗಡೆ ಎರಡೂ ಕಾಲಲ್ಲಿ ಸುಳಿ ಇದ್ದರೆ ಅದನ್ನು 'ಕಸಬರಿಗೆ ಸುಳಿ' ಎಂದು ಗುರುತಿಸುತ್ತಾರೆ. ಈ ಸುಳಿ ಇರುವ ಕುದುರೆಯನ್ನು ಯಾರೂ ಕೊಳ್ಳುವುದಿಲ್ಲ. ಏಕೆಂದರೆ ಕೊಂಡವನ ಮನೆ ಕಸಬರಿಗೆಯಿಂದ ಗುಡಿಸಿದಂತೆ ಎಲ್ಲಾ ಖಾಲಿಯಾಗುತ್ತದೆ ಎಂದು ನಂಬುತ್ತಾರೆ. ಹಾಗಾಗಿ ಸಾಮಾನ್ಯವಾಗಿ ಯಾರೂ ಈ ಕುದುರೆಯನ್ನು ಕೊಳ್ಳುವುದಿಲ್ಲ.

ಕುದುರೆಗಳ ಶರೀರದಲ್ಲಿ ಕೂದಲುಗಳು ಚಕ್ರಾಕಾರವಾಗಿ ಸುತ್ತಿಕೊಂಡಿರುತ್ತವೆ. ಇವುಗಳ ಶುಭಾಶುಭ ಫಲಗಳಲ್ಲಿ ಹಿಂದೂಗಳಿಗೆ ಅಪಾರ ನಂಬಿಕೆ ಇದೆ. ಲಕ್ಷಣವಾಗಿರುವ ಕುದುರೆಗಳನ್ನು ಯಾವನು ಕಟ್ಟಿರುತ್ತಾನೋ ಅಂಥವನ ಮನೆಯಲ್ಲಿ ಸರ್ವಕಾಲ ಲಕ್ಷ್ಮಿ ಸಂಚರಿಸುತ್ತಿರುವಳೆಂದೂ ದುರ್ಲಕ್ಷಣಯುಕ್ತ ಕುದುರೆಗಳನ್ನು ಕಟ್ಟಿರುವ ಮನೆಯಲ್ಲಿ ನಿಷ್ಕಾರಣವಾಗಿ ಆಪತ್ತುಗಳು ಸಂಭವಿಸುತ್ತವೆಂದು ತಿಳಿದು ಬರುವುದರಿಂದ ರತ್ನ, ಸ್ತ್ರೀಯರು, ಕುದುರೆ ಮುಂತಾದವುಗಳ ಲಕ್ಷಣಗಳನ್ನು ನೋಡುವಾಗ ಮೊದಲು ಪರೀಕ್ಷಿಸಬೇಕಾದ್ದು ಈ

ಸುಳಿಗಳನ್ನು ಎಂದು ನಮ್ಮವರು ಅಭಿಪ್ರಾಯಪಡುತ್ತಾರೆ. ಕುದುರೆಗಳ ಶರೀರದಲ್ಲಿ ಸುಳಿ, ಮುಕುಳ, ಪಾದುಕ, ಶಕ್ತಿ, ಸಮೂಹ, ಪಾದುಕಾರ್ಥ, ಅವಲೀಢ, ಶತಪದಿಗಳೆಂದು ಎಂಟು ಸುಳಿಗಳಿರುತ್ತವೆ.

"ನೀರಿನ ಸುಳಿಯಂತೆ ಬಲಪ್ರದಕ್ಷಿಣವಾಗಿ ತಿರುಗಿಕೊಂಡ ಸುಮಾರು ಅರ್ಧ ಅಂಗುಲ ಪ್ರಮಾಣವುಳ್ಳ ಚಚ್ಚೌಕವಾದ ಸುಳಿಗೆ 'ಸುಳಿ' ಎಂದೂ, ಕೂದಲಿನ ತುದಿಗಳು ಪರಸ್ಪರ ಕೂಡಿಕೊಂಡು ಮಲ್ಲಿಗೆ ಮೊಗ್ಗಿನ ಆಕಾರವಾಗಿಯೂ ಕಾಲು ಅಂಗುಲ ಪ್ರಮಾಣವುಳ್ಳದ್ದಾಗಿಯೂ ಇರತಕ್ಕ ಸುಳಿಗೆ 'ಮುಕುಳ'ವೆಂದೂ, ಕೂದಲುಗಳು ತಿರುಗಿಕೊಂಡು ನಾಲ್ಕು ಅಂಗುಳ ಅಳತೆಯುಳ್ಳದ್ದಾಗಿಯೂ ಪಾದುಕೆಯ ಆಕಾರವುಳ್ಳದ್ದಾಗಿಯೂ ಇರುವ ಸುಳಿಗೆ 'ಪಾದುಕ' ವೆಂತಲೂ, ಮುತ್ತಿನ ಚಿಪ್ಪಿನ ಹಾಗೆ ತಿರುಗಿಕೊಂಡು ಎರಡು ಅಂಗುಲ ಪ್ರಮಾಣವುಳ್ಳ ಸುಳಿಗೆ ಶಕ್ತಿ ಎಂತಲೂ, ಮೂರಂಗುಲ ಪ್ರಮಾಣವುಳ್ಳದ್ದಾಗಿ ಕರುಗ ನಾಲಗೆಯಿಂದ ಶರೀರವನ್ನು ನೆಕ್ಕಿಕೊಂಡರೆ ಯಾವ ರೀತಿಯಲ್ಲಿ ರೋಮಗಳು ಒಂದು ಕಡೆಗೆ ಬಾಗಿಕೊಂಡಿರುತ್ತವೆಯೋ ಆ ರೀತಿಯಲ್ಲಿ ರೋಮಗಳು ಒಂದು ಕಡೆ ಬಾಗಿಕೊಂಡಿರತಕ್ಕಂತಹ ಸುಳಿಗೆ 'ಅವಲೀಡ' ಎಂತಲೂ, ಎಂಟು ಅಂಗುಲ ವಿಸ್ತಾರವಾಗಿ ಇರತಕ್ಕ ರೋಮಗಳ ಗುಂಪಿನ ಸುಳಿಗೆ 'ಸಮೂಹ'ವೆಂತಲೂ, ನಾಲ್ಕು ಅಂಗುಲ ವಿಸ್ತಾರವಾಗಿ ಜರಿಯು ಹರಿದಂತೆ ಉದ್ದವಾಗಿರುವ ಸುಳಿಯು 'ಶತಪಾದಿ' ಎಂತಲೂ, ಮುಕ್ಕಾಲು ಅಂಗುಲ ಪರಿಮಾಣವುಳ್ಳದಾಗಿ ಒಡೆದುಹೋದ ಪಾದುಕೆಯ ತುಂಡಿನ ಆಕಾರದಲ್ಲಿ ಇರತಕ್ಕ ಸುಳಿಗೆ 'ಪಾದುಕಾರ್ಥ'ವೆಂತಲೂ ಹೆಸರುಗಳಿವೆ. ಇವುಗಳಲ್ಲಿ ಆವರ್ತ, ಮುಕುಳ, ಶಕ್ತಿ ಎಂಬ ಮೂರು ಸುಳಿಗಳು ಶುಭಕರ, ಉಳಿದ ಐದು ಸುಳಿಗಳು ಕೇಡನ್ನುಂಟು ಮಾಡುತ್ತವೆ. ಉತ್ತಮ ಸುಳಿಗಳಿರಬೇಕಾದ ಜಾಗಗಳಲ್ಲಿ ಹೀನಸುಳಿಗಳಿದ್ದರೆ ಅಶುಭ. ಸುಳಿಗಳಿಲ್ಲದ ಕುದುರೆಯು ಅನಿಷ್ಟವೆಂದೆನಿಸಿ ಅದರ ದರ್ಶನ ಸ್ಪರ್ಶ ಮಾಡಬಾರದೆಂದು, ಮತ್ತು ಮನೆಯಲ್ಲಿ ಹುಟ್ಟಿದ ಕುದುರೆಗೆ ಹೀನ ಸುಳಿಯಿದ್ದರೂ ದೋಷವಿಲ್ಲವೆಂದೂ ಹೇಳುತ್ತಾರೆ. ಕುದುರೆಯ ಹಣೆಯ ಮೇಲೆ ನಾಲ್ಕು ಸುಳಿಗಳು ವಜ್ರದಂತೆ ಚಚ್ಚೌಕವಾಗಿರುವ ಕುದುರೆಯ ಯಜಮಾನನು ಸಪ್ತಸಮುದ್ರ ಮಧ್ಯಸ್ತವಾಗಿರತಕ್ಕ ಭೂಮಂಡಲವನ್ನುಳ್ಳ ಚಕ್ರವರ್ತಿಯಾಗುತ್ತಾನೆ. ಹಣೆಯ ಮೇಲೆ ತ್ರಿಕೋಣಾಕಾರವಾದ ಮೂರು ಸುಳಿಗಳಿದ್ದರೆ ಅಂಥಾ ಅಶ್ವದ ಒಡಯನು ತ್ರೈಲೋಕ್ಯ ವಿಕ್ರಮಿಯೀ ಕೀರ್ತಿಯುಳ್ಳವನೂ ಆಗುತ್ತಾನಂತೆ (ಡಾ. ಚಂದ್ರಶೇಖರ ಕಂಬಾರ; ೧೯೮೫ : ೪೩೭-೪೩೮)

ಶ್ವೇತವರ್ಣ, ಪಂಚಕಲ್ಯಾಣಿ, ಅಷ್ಟಮಂಗಳಿ, ಕೆಂಪು ಬಣ್ಣ ಮತ್ತು ದೈವ ಮಣಿಯುಳ್ಳ ಕುದುರೆ ಜಯವನ್ನು, ಸುಖವನ್ನು ಭೋಗವನ್ನು ಉಂಟು ಮಾಡುತ್ತದೆ.

## ಎತ್ತು : ಸುಳಿ, ಲಕ್ಷಣ

ದನಗಳ ಸಾಕಣೆ ಮೊದಲೋ, ಬೇಸಾಯ ಮೊದಲೋ, ಎಂಬುದು ಒಂದು ಸಮಸ್ಯೆ. ಕೆಲವರ ಪ್ರಕಾರ ಮೊದಲು ದನಗಳ ಸಾಕಣೆ, ತದನಂತರ ಬೇಸಾಯ, ಅವರ ಪ್ರಕಾರ ಮಾನವ ಮೊದಲು ಬೇಟೆಯಾಡುತ್ತಿದ್ದ ಪ್ರಾಣಿಗಳನ್ನು ಪಳಗಿಸಿಕೊಂಡ. ಆಮೇಲೆ ಅವನ ಹೆಂಗಸು ಅವನು ಬೇಟೆಯಾಡುವುದರ ಬದಲು ಆ ಪ್ರಾಣಿಗಳನ್ನೇ ಸಾಕಿ, ಮೇಯಿಸಿ ಇರುವ ಕಡೆಯೇ ಭೂಮಿಯನ್ನು ಉತ್ತು, ಬಿತ್ತಿ ಬೆಳೆಯುವಂತೆ ಪ್ರೇರೇಪಿಸಿದಳು ಎನ್ನುವರು. ಇನ್ನು ಕೆಲವರ ಪ್ರಕಾರ ಆಹಾರಕ್ಕಾಗಿ ಬೇಟೆಯಾಡಿಯೋ, ಕಾಡು, ಮೇಡುಗಳಲ್ಲಿ ಅಲೆದು ಹಣ್ಣು, ಹಂಪಲುಗಳನ್ನು ಆರಿಸಿಕೊಂಡೋ, ಒಂದೆಡೆ ನಿಲ್ಲದೆ ಇದ್ದ ಆಗಿನ ಮಾನವ ಪಶುಗಳನ್ನು ಪಳಗಿಸಲು ಶಕ್ತನಾಗಿರಲಿಲ್ಲ. ಇವನ್ನು ಸಾಕಲು ಕೆಲವು ವಸ್ತುಗಳು ಅನುಕೂಲಗಳು ಬೇಕು. ಕಟ್ಟಲು ಗೂಟ, ಹಗ್ಗ ಬೇಕು; ಮುಂದೆ ಚದುರದಿರಲು ರೊಪ್ಪ ಕಟ್ಟಬೇಕು; ಬೇಲಿ ಹಾಕಬೇಕು. ಗೂಟ ಚೂಪು ಮಾಡುವ ಹತಾರು ಅವನಲ್ಲಿರಲಿಲ್ಲ. ಹಗ್ಗ ಹೊಸೆಯುವ ಕಲೆ ತಿಳಿದಿರಲಿಲ್ಲ. ರೊಪ್ಪ ಕಟ್ಟಲು ತಡಿಕೆಗಳನ್ನು ಹೆಣೆಯುವುದು, ಬೊಂಬುಗಳನ್ನು ಕತ್ತರಿಸುವುದು ಅವನ ಬುದ್ಧಿಶಕ್ತಿಗೆ, ಕೈ ಶಕ್ತಿಗೆ ಮೀರಿದ್ದು. ಅಲ್ಲದೆ ಹೊಟ್ಟೆಪಾಡಿಗಾಗಿ ಯಾವಾಗಲೂ ಅಲೆಯಬೇಕಾದವನಿಗೆ ಪಳಗಿಸುವ ಹವ್ಯಾಸಕ್ಕೆ ವಿರಾಮವೆಲ್ಲಿತ್ತು! ಯಾವಾಗ ಈ ಮಾನವ ಭೂಮಿಯನ್ನು ಉತ್ತು, ಬಿತ್ತಿ, ಕಳೆ ತೆಗೆದು, ಬೆಳೆಯನ್ನು ಕುಯ್ದು, ತನಗೆ ಬೇಕಾದ ಆಹಾರವನ್ನು ತಾನು ತಂಗಿದ ಕಡೆಯೇ ಹುಟ್ಟಿಸಿಕೊಳ್ಳಲು ಪ್ರಾರಂಭಿಸಿದನೋ, ಹೀಗೆ ಬೆಳೆಸಿದ ಬೆಳೆಯ ಹತ್ತಿರವೇ ಜೋಪಡಿ ಹಾಕಿಕೊಂಡು ಒಂದೆಡೆ ನಿಂತನೋ, ಯಾವಾಗ ಆಹಾರಕ್ಕಾಗಿ

ಅಲೆಯುವುದು ತಪ್ಪಿತೋ, ಬಿಡುವು ಸಿಕ್ಕಿತೋ ಆಗ ಅವನು ಪಶುಗಳನ್ನು ಸಾಕಬಲ್ಲ ಸಾಮರ್ಥ್ಯವನ್ನು ಕಾಲಾವಕಾಶವನ್ನು ಅನುಕೂಲಗಳನ್ನು ಪಡೆದ. ಅಂದರೆ, ಮಾನವ ಬೇಸಾಯಗಾರನಾದ; ಆನಂತರ ಪಶುಪಾಲಕನಾದ.

ಹೀಗೆಂದಾಕ್ಷಣ, ಇದಕ್ಕಿಂತ ಮುಂಚೆ ಸಾಕುಪ್ರಾಣಿಗಳೇ ಇರಲಿಲ್ಲವೆಂದಲ್ಲ. ಒಂಟಿ, ಒಂಟಿಯಾಗಿ ಮನೆಗಳಲ್ಲಿ ಬೆಳೆಯುವ ಪ್ರಾಣಿಗಳಾದ ನಾಯಿ, ಕೋಳಿ, ಹಂದಿ, ಮುಂತಾದ ಸಣ್ಣ ಪುಟ್ಟ ಪ್ರಾಣಿಗಳನ್ನು ಸಾಕುತ್ತಿದ್ದರು. ದನ, ಕುರಿ, ಮೇಕೆ, ಒಂಟೆ ಇವು ಹಿಂಡು ಪ್ರಾಣಿಗಳು. ಮಂದೆಯಲ್ಲಿ ಜೀವಿಸುವ ಚಲಿಸುವ ಪ್ರಾಣಿಗಳು, ದೊಡ್ಡ ಪ್ರಾಣಿಗಳನ್ನು ನಂತರ ಸಾಕಿದರು. ದನಗಳನ್ನು ಪಳಗಿಸಿದ ಮೇಲೆ, ಅವು ಸಾಕಷ್ಟು ಸಾಧುವಾದ ಮೇಲೆ, ಈ ದಿನ ಹಿಂಡುಗಳನ್ನು ಹುಡುಗರು, ಎಳೆಯರು ಅಟ್ಟಿಕೊಂಡುಹೋಗಿ ಮೇಯಿಸುವಂತಾಯಿತು

ದನ ಎಮ್ಮೆಗಳ ಓಟ ಕಡಿಮೆ. ಆದುದರಿಂದ ಶತ್ರು ಭಯ ಹೆಚ್ಚು. ಅವಸರವಸರವಾಗಿ ಮೇದು, ಹೊಟ್ಟೆ ತುಂಬಿಕೊಂಡು ಶತ್ರುಗಳು ಇಲ್ಲದ ಕಡೆ ಹೋಗಿ, ಕೂತು, ನಿಧಾನವಾಗಿ ನುಂಗಿದ ಮೇವನ್ನು ಸ್ವಲ್ಪ ಸ್ವಲ್ಪವಾಗಿ ಬಾಯಿಗೆ ತಂದುಕೊಂಡು, ಹಲ್ಲುಗಳಿಂದ ಚೆನ್ನಾಗಿ ಜೊಲ್ಲಿನೊಂದಿಗೆ ಅರೆದು ನುಂಗುತ್ತವೆ. ದನಗಳು ತುತ್ತನ್ನು ಎಡ ದವಡೆಯಲ್ಲಿ ಕೆಲವು ಬಾರಿ, ಆಮೇಲೆ ಅಷ್ಟೇ ಬಾರಿ ಬಲ ದವಡೆಯಲ್ಲಿ ಅರೆಯುತ್ತವೆ. ಎರಡೂ ದವಡೆಯನ್ನು ಉಪಯೋಗಿಸುತ್ತವೆ. ದನದ ಕೆಳ ದವಡೆಯಲ್ಲಿ ೨೦ ಹಲ್ಲು, ಮೇಲ್ದವಡೆಯಲ್ಲಿ ೧೨ ಹಲ್ಲುಗಳಿವೆ. ಕೆಳದವಡೆಯಲ್ಲಿ ಮಾತ್ರ ೮ ಬಾಚಿಹಲ್ಲು, ಮೇಲು ದವಡೆಯಲ್ಲಿ ಈ ಬಾಚಿ ಹಲ್ಲಿನ ಬದಲು ಕೊಂಬಿನಂತಿರುವ ಒಂದು ಸಿಂಬಿ ಮಾತ್ರ ಇದೆ. ಮೇಯುವಾಗ ದನ ಮೇವನ್ನು ತಳದ ಬಾಚಿಹಲ್ಲು ಮತ್ತು ಮೇಲಿನ ಸಿಂಬಿ ಮಧ್ಯೆ ಸಿಕ್ಕಿಸಿಕೊಂಡು ತಲೆಯನ್ನು ಪಕ್ಕಕ್ಕೆ ಥಟ್ಟನೆ ಜಗ್ಗುತ್ತದೆ; ಆಗ ಹುಲ್ಲು ಕಿತ್ತುಕೊಂಡು ಬರುತ್ತದೆ.

ದನಕ್ಕೆ ಏಕೆ ಮೇಲ್ದವಡೆಯಲ್ಲಿ ಮುಂದಿನ ಹಲ್ಲು ಇಲ್ಲ ಎನ್ನುವುದಕ್ಕೆ ಜನಪದರಲ್ಲಿ ಒಂದು ಕಥೆ ಇದೆ. ಅದೇನೆಂದರೆ ಕೃಷ್ಣ ಗೊಲ್ಲ ಅಲ್ಲವೆ? ಬೇಕಾದಷ್ಟು ಹಸುಗಳನ್ನು ಸಾಕಿದ್ದ. ಅವನ ಸಾಕು ತಂದೆ ನಂದ, ಯಶೋಧೆಯ ಗಂಡನಿಗೆ ೯ ಲಕ್ಷ ದನಗಳು ಇದ್ದುವಂತೆ. ಇವುಗಳನ್ನೆಲ್ಲಾ ಮೇಯಿಸಲು, ಪಾಲಿಸಲು ಕಷ್ಟವಲ್ಲವೆ ? ಇದು ಕೃಷ್ಣನಿಗೆ ಸಾಧ್ಯವಿತ್ತು. ಅವನು ಕೊಳಲನ್ನು ಊದಿದ ಎಂದರೆ ಎಲ್ಲಾ ಗೋವುಗಳು ಅವನ ಹತ್ತಿರಕ್ಕೆ ಬರುತ್ತಿದ್ದವಂತೆ; ಅವನ ಕೊಳಲಿನ ಶಕ್ತಿ ಅಂಥದ್ದು. ಕೃಷ್ಣ ದನಗಳನ್ನು ಚೆನ್ನಾಗಿ ಮೇಯಿಸುತ್ತಿದ್ದ. ಅವನ ಮುಂದೆ ದನಗಳು ಮೈತುಂಬಿ ಮಿನುಗುತ್ತಿದ್ದಂತೆ ಮತ್ಯಾರ ಮುಂದೆಯೂ ಇರಲಿಲ್ಲ. ಒಂದು ದಿನ, ದನಗಳನ್ನೆಲ್ಲಾ ಹೊಟ್ಟೆ ತುಂಬ ಮೇಯಿಸಿ, ಗೋಕುಲಕ್ಕೆ ಅಟ್ಟಿ ರೊಪ್ಪಕ್ಕೆ ಸೇರಿಸುತ್ತಿದ್ದ. ಒಂದು ಹಸು ಎಂದೂ ಅವನ ಜೊತೆಯಲ್ಲೇ ಇರುತ್ತಿತ್ತು. ಅವನ ಸಂಗಡವೇ ಮಲಗುತ್ತಿತ್ತು. ಅದು ರೊಪ್ಪಕ್ಕೆ ಬರುವುದಕ್ಕೆ  ಮುಂಚೆ ಮನೆಗೆ ಹೊದೆಸಿದ ಚಾವಣಿಯ ಹುಲ್ಲನ್ನು ಕಿತ್ತು ತಿನ್ನುತ್ತಿತ್ತು. ಕೃಷ್ಣನಿಗೆ ಕೋಪ ಬಂತು "ಮುಂಡೇದೆ, ಹೊಟ್ಟೆ ಬಿರಿಯುವ ಹಾಗೆ ಕಾವಲಿನಲ್ಲಿ ಮೇದಿದ್ದಿಯಾ ಅದೂ ಸಾಲದೆ ಚಾವಣಿ ಹುಲ್ಲೂ ಬೇಕೋ, ಹೊಟ್ಟೆ ಬಾಕ, ಎನ್ನುತ್ತ ಅದರ ಹೆಗ್ಗತಿಗೆ ಚೆನ್ನಾಗಿ ಗುದ್ದಿದ. ದೊಡ್ಡ ಬಾಸುಂಡೆ ಎದ್ದಿತು. ಆದರೂ ಹುಲ್ಲನ್ನು ಎಳೆಯುವುದು ಬಿಡಲಿಲ್ಲ. ಕೃಷ್ಣನಿಗೆ ಕೋಪ ಉಕ್ಕಿತು. 'ಹಲ್ಲು ಉದುರಿಸಿದ ಹೊರತು ನಿನಗೆ ಬುದ್ಧಿ ಬರುವುದಿಲ್ಲ' ಅಂತ ಹೇಳಿ ರೊಪ್ಪನೆ ಮೂತಿ ಮೇಲೆ ಬಾರಿಸಿದ. ಆ ಏಟಿಗೆ ೮ ಮುಂದಿನ ಹಲ್ಲು ಉದುರಿತು. ಮತ್ತೆ ಬೆಳೆಯಲಿಲ್ಲ. ಅಂದಿನಿಂದ ಯಾವ ದನಕ್ಕೂ ಮೇಲ್ದವಡೆಯ ಬಾಚಿ ಹಲ್ಲು ಬೆಳೆಯುತ್ತಿಲ್ಲ. ಹಾಗೆ, ಹೆಗ್ಗತಿನ ಬಾಸುಂಡೆಯು ಹಾಗೆ ನಿಂತಿತು; ಡುಬ್ಬವಾಯಿತು. ಕೃಷ್ಣನ ಮಾತು ಹುಸಿಯಾಗುತ್ತದೆಯೇ ?' (ನರಸಿಂಹ ಅಯ್ಯಂಗಾರ್; ೧೯೭೩ : ೪೧).

ಕರ್ನಾಟಕ ಬಹಳ ಹಿಂದಿನಿಂದಲೂ ಉತ್ತಮ ದನಗಳಿಗೆ ಹೆಸರಾಗಿದೆ. ರಾಜ್ಯದಲ್ಲಿ ಎರಡು ರೀತಿಯ ದನಗಳನ್ನು ಕಾಣಬಹುದು. ಮೊದಲನೆಯದು ಬಹಳ ಹೆಚ್ಚಿನ ಪ್ರಮಾಣದಲ್ಲಿರುವ ನಿರ್ದಿಷ್ಟ ಗುಂಪಿಗೆ ಸೇರಿದ ನಾಡುದನ. ಇವು ಗಾತ್ರದಲ್ಲಿ ಸಣ್ಣವು ಹಾಗೂ ವಿವಿಧ ಬಣ್ಣದವು. ಎರಡನೆಯದು ಮುಖ್ಯವಾದ ಶುದ್ಧ ತಳಿಗಳನ್ನು ಒಳಗೊಳ್ಳುತ್ತದೆ. ಇವುಗಳ ಪ್ರಮಾಣ ಬಹಳ ಕಡಿಮೆ. ಇವು ನಿರ್ದಿಷ್ಟ ಗಾತ್ರ ಹಾಗೂ ಬಣ್ಣದವು.

ಕರ್ನಾಟಕಕ್ಕೇ ವಿಶಿಷ್ಟವಾದ ಹೈನ ತಳಿ ಯಾವುದೂ ಇಲ್ಲ. ಕೆಲವು ಪಟ್ಟಣಗಳಲ್ಲಿ ಹಾಗೂ ಸರ್ಕಾರಿ ಸಾಕಾಣೆ ಕೇಂದ್ರಗಳಲ್ಲಿ ಕೆಲವು ಸಿಂಧಿ ದನಗಳು ಇದ್ದವು. ಇತ್ತೀಚಿನ ವರ್ಷಗಳಲ್ಲಿ ಮಿಶ್ರತಳಿ ಎಬ್ಬಿಕೆಯಿಂದ ಮೈಸೂರು ಹಾಗೂ ಬೆಂಗಳೂರು ಮತ್ತು ಅದರ

ಸುತ್ತಮುತ್ತಲ ಪ್ರದೇಶದಲ್ಲಿ ಮಿಶ್ರತಳಿ ದನಗಳ ಸಂಖ್ಯೆ ಹೆಚ್ಚುತ್ತಿದೆ. ರಾಜ್ಯ ಸರ್ಕಾರ ಕೈಗೊಂಡಿರುವ ತೀವ್ರತಳಿ ಅಭಿವೃದ್ಧಿ ಕಾರ್ಯಕ್ರಮದಿಂದಾಗಿ ಇತರ ಜಿಲ್ಲೆಗಳಲ್ಲೂ ಮಿಶ್ರತಳಿಗಳನ್ನು ಕಾಣಬಹುದು.

**೧. ಅಮೃತ ಮಹಲ್ :** ಈ ತಳಿ ಕಾರ್ಯಶಕ್ತಿಗೆ ಭಾರತದಲ್ಲೇ ಹೆಸರಾದದ್ದು. ಇದು ಸಿಟ್ಟಿನ, ಚುರುಕು ಸ್ವಭಾವದ್ದು. ಕಷ್ಟ, ಸಹಿಷ್ಣುತೆಗೆ ಹೆಸರಾದದ್ದು. ಈ ತಳಿಯ ಹಸುಗಳಲ್ಲಿ ಹಾಲಿನ ಉತ್ಪಾದನೆ ಬಹಳ ಕಡಿಮೆ. ಸುಸಂಬದ್ಧವಾದ ಕಿರಿದಾದ ಮೈಕಟ್ಟು, ಬೂದುಬಣ್ಣ, ಉದ್ದವಾದ ತುದಿ, ಚೂಪಾದ ಪ್ರಮುಖವಾಗಿ ಕಾಣುವ ಹಣೆಯಿರುವ ತಲೆ, ಕಾಲುಗಳ ಉದ್ದ ಮಧ್ಯಮ ಮತ್ತು ಕಾಲಿನ ಭಾಗಗಳು ಸುಸಂಬದ್ಧ. ಸುಮಾರಾಗಿ ದಪ್ಪನಾದ ಮೂಳೆ, ಲಯಬದ್ಧ ನಡಿಗೆ ಈ ತಳಿಯ ಲಕ್ಷಣ. ಈ ತಳಿಗಳು ಮುಖ್ಯವಾಗಿ ಚಿತ್ರದುರ್ಗ, ತುಮಕೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಯ ಭಾಗಗಳಲ್ಲಿ ಕಂಡುಬರುತ್ತವೆ. ಅಲ್ಲದೆ ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲೂ ಈ ತಳಿಯ ಎತ್ತುಗಳು ಸಾಕಷ್ಟು ಪ್ರಮಾಣದಲ್ಲಿ ಉಂಟು, ಅಮೃತಮಹಲ್ ದನಗಳನ್ನು ಅಜ್ಜಂಪುರ ಕೇಂದ್ರಕ್ಕೆ ಸೇರಿದ ಸಾವಿರಾರು ಎಕರೆಯ ಅಮೃತಮಹಲ್ ಕಾವಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾಕಲಾಗುತಿತ್ತು.

**೨. ಹಳ್ಳಿಕಾರ್ :** ಕರ್ನಾಟಕದಲ್ಲಿ ಕೆಲಸಕ್ಕೆ ಬಹಳ ಜನಪ್ರಿಯವಾದ ತಳಿ, ರಸ್ತೆ ಸಾರಿಗೆ ಮತ್ತು ಕೃಷಿ ಕೆಲಸಗಳೆರಡಕ್ಕೂ ಇದು ಉಪಯುಕ್ತವೆನಿಸಿದೆ. ದನಗಳನ್ನು ಕೊಟ್ಟಿಗೆಯಲ್ಲಿ ಮೇಯಿಸಿ ಸಣ್ಣ ಗುಂಪುಗಳಲ್ಲಿ ಹಾಕಲಾಗುತ್ತಿದೆ. ಬಣ್ಣ ಸಾಮಾನ್ಯವಾಗಿ ಬೂದು, ಭುಜ ಹಾಗೂ ಚಪ್ಪೆಯ ಮೇಲೆ ಬಣ್ಣ ಸ್ವಲ್ಪ ದಟ್ಟವಾಗಿರುತ್ತದೆ. ಕತ್ತು ತೆಳು ಹಾಗೂ ಉದ್ದವಾದುದು. ಕಾಲುಗಳು ಬಲವಾಗಿದ್ದು ಒಂದರಿಂದ ಒಂದು ದೂರವಾಗಿರುತ್ತವೆ. ತಲೆ ಉದ್ದ ಹಾಗೂ ತುದಿಯಲ್ಲಿ ಚೂಪಾಗಿದೆ. ಹಣೆ ಸ್ವಲ್ಪ ಉಬ್ಬಿದ್ದು ಅದರ ಮಧ್ಯ ಒಂದು ಕಾಲುವೆಯಂತ ತಗ್ಗು ಇರುತ್ತದೆ. ಕೊಂಬುಗಳು ಉದ್ದ ಹಾಗೂ ಚೂಪು ಕತ್ತಿನ ಮೇಲೆ ಹಿಂದಕ್ಕೆ ಸ್ವಲ್ಪ ಮೇಲಕ್ಕೆ ಬಗ್ಗಿದಂತಿವೆ. ಈ ತಳಿಗಳನ್ನು ಮುಖ್ಯವಾಗಿ ತುಮಕೂರು, ಹಾಸನ, ಮೈಸೂರು, ಮಂಡ್ಯ, ಕೋಲಾರ, ಜಿಲ್ಲೆಗಳು ಹಾಗೂ ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಾಣಬಹುದು.

**೩. ಖಿಲಾರಿ :** ಇದು ವ್ಯವಸಾಯ ಮತ್ತು ವೇಗವಾದ ರಸ್ತೆ ಸಾರಿಗೆಗೆ ಸೂಕ್ತವಾದ ಅತ್ಯುತ್ತಮ ಕೆಲಸದ ತಳಿ. ಹಸುಗಳು ಬಹಳ ಕಡಿಮೆ ಹಾಲು ಉತ್ಪಾದಿಸುತ್ತವೆ. ಇದು ಉತ್ತರ ಕರ್ನಾಟಕದ ತಳಿ. ಹಳ್ಳಿಕಾರ್ ಮತ್ತು ಅಮೃತಮಹಲ್ ತಳಿಗಳನ್ನು ಹೋಲುತ್ತದೆ. ಬಿಳಿ ಹಾಗೂ ಬೂದು ಸಾಮಾನ್ಯ ಬಣ್ಣಗಳು. ಮುಖನೀಳ, ಹಣೆಯ ಮಧ್ಯದಲ್ಲಿ ತಗ್ಗು ಬೀಳುವಂತೆ ಕಣ್ಣುಗಳ ಮೇಲೆ ಉಬ್ಬಿರುತ್ತದೆ. ಕೊಂಬು ಬುಡದಲ್ಲಿ ದಪ್ಪವಾಗಿಯೂ ತುದಿಯಲ್ಲಿ ಚೂಪಾಗಿಯೂ ಇರುತ್ತದೆ.

**೪. ಅಲಂಬಾಡಿ :** ಇವು ಮೈಸೂರು ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕಿನ ಬೆಟ್ಟಗಾಡು ಪ್ರದೇಶದಲ್ಲಿ ಅಭಿವೃದ್ಧಿ ಹೊಂದಿದ ದನಗಳು. ಇವನ್ನು ಸಾಮಾನ್ಯವಾಗಿ ಕಾಡಿನಲ್ಲಿ ಮೇಯಿಸಿ ಸಾಕಲಾಗುತ್ತಿದೆ. ಈ ತಳಿಯು ಹಳ್ಳಿಕಾರ್ ತಳಿಯನ್ನು ಹೋಲುತ್ತದೆ. ದಟ್ಟ ಬೂದು ಅಥವಾ ಕಪ್ಪು ಇದರ ಸಾಮಾನ್ಯ ಗುಣಗಳು. ತಲೆ ಸಣ್ಣ ಮತ್ತು ನೀಲ. ಹಣೆ ಉಬ್ಬಿಕೊಂಡಿರುತ್ತದೆ. ಉದ್ದವಾದ ಕೊಂಬುಗಳು ಹಿಂದಕ್ಕೆ ಹಾಗೂ ಸ್ವಲ್ಪ ಮೇಲಕ್ಕೆ ಚಾಚಿಕೊಂಡಿರುತ್ತವೆ. ಚೆನ್ನಾಗಿ ಬಗ್ಗಿದ ಪಕ್ಕೆಲುಬುಗಳುಳ್ಳ ದೊಡ್ಡ ಮೈಕಟ್ಟು ಇರುತ್ತದೆ. ಎತ್ತುಗಳು ಚುರುಕು ಮತ್ತು ಗಡಸು.

**೫. ದೇವನಿ :** ಈ ತಳಿ ಬೀದರ್ ಜಿಲ್ಲೆ ಹಾಗೂ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ. ಇದು ಮಧ್ಯಮ ಗಾತ್ರದ, ಬಿಳಿ ಕಪ್ಪು ಇಲ್ಲವೆ ಬಿಳಿ ಕಂದು ಬಣ್ಣಗಳ ಅನಿರ್ದಿಷ್ಟ ಮಚ್ಚೆಗಳ ದನ. ಈ ತಳಿಯ ಎತ್ತುಗಳು ಚೆನ್ನಾಗಿ ಕೆಲಸ ಮಾಡುತ್ತವೆ ಹಾಗೂ ಹಸುಗಳು  ಸುಮಾರಾಗಿ ಹಾಲು ಕೊಡುತ್ತವೆ. ಈ ತಳಿ ನೋಡಲು ಸುಂದರ ಚರ್ಮ ಗಾಜಿನಂತೆ ನುಣುಪು, ಹಣೆ ಅಷ್ಟಾಗಿ ಉಬ್ಬಿಲ್ಲ. ಕೊಂಬು ಮೋಟು ಮತ್ತು ಹೊರಕ್ಕೆ ಹಿಂದಕ್ಕೆ ಬಂದಿರುತ್ತವೆ.

**೬. ಕೃಷ್ಣಕೊಳ್ಳ :** ಈ ತಳಿಯ ದನಗಳು ದೊಡ್ಡ ಗಾತ್ರದವು. ಆದ್ದರಿಂದ ಕಪ್ಪು ಜೇಡಿಮಣ್ಣಿನಲ್ಲಿ ಕೆಲಸ ಮಾಡಲು ಮತ್ತು ಇತರ ಕಷ್ಟದ ಕೆಲಸಗಳಿಗೆ ಸೂಕ್ತವಾದವು. ಇದು ರಾಮದುರ್ಗ, ಜಮಖಂಡಿ, ಮುಧೋಳ, ಅಥಣೀ ಮತ್ತು ಚಿಕ್ಕೋಡಿ ತಾಲ್ಲೂಕುಗಳಲ್ಲಿ

ಕಂಡುಬರುತ್ತವೆ. ಇವು ಬೂದು ಬಿಳಿ ಬಣ್ಣದವು. ಕತ್ತು ತುಂಡಾಗಿದ್ದು ಬಲವಾಗಿರುತ್ತದೆ. ಚಿಕ್ಕದಾದ ಮತ್ತು ಬಗ್ಗಿರುವ ಇದರ ಕೊಂಬುಗಳು ತಲೆಯ ಹೊರಕೋನದಿಂದ ಹೊರಟು ಸ್ವಲ್ಪ ಮೇಲಕ್ಕೆ ಹಾಗೂ ಒಳಕ್ಕೆ ಬಗ್ಗಿರುತ್ತವೆ.

ವ್ಯವಸಾಯ ಪ್ರಧಾನವಾದ ಈ ಸಂಸ್ಕೃತಿಯಲ್ಲಿ ಎತ್ತಿಗೆ ಇದ್ದ ಪ್ರಾಮುಖ್ಯತೆ ಇತರ ಪ್ರಾಣಿಗಳಿಗಿಲ್ಲ. ಹಸು ಎತ್ತಿನ ತಾಯಿ. ಹಾಲು ಕರೆಯುವ ಪ್ರಾಣಿಯಲ್ಲ; ಹಾಲಿಗಾಗಿ ಎಮ್ಮೆ ಎತ್ತಿಗಾಗಿ ಹಸು ಇದು ನಮ್ಮ ಸಂಪ್ರದಾಯ. ಮೊದಲೇ ಹೇಳಿದಂತೆ ವ್ಯವಸಾಯ ಪ್ರಧಾನವಾದ ಸಂಸ್ಕೃತಿಯಲ್ಲಿ ಎತ್ತಿಲ್ಲದೆ ಬೇಸಾಯ ಅಸಾಧ್ಯ. ಆದುದರಿಂದ ಬಹುಪಾಲು ಬೇಸಾಯಗಾರರಿರುವ ನಮ್ಮ ದೇಸದವರಿಗೆ, ಹಾಲಿಗಿಂತ ಎತ್ತೇ ಮುಖ್ಯ. ನೇಗಿಲು ಮುಂತಾದ ಮುಟ್ಟುಗಳನ್ನು ನಿರಾಯಾಸವಾಗಿ ಎಳೆಯಬಲ್ಲ, ಹೆಚ್ಚು ಹೊರೆ ಹಾಕಿದ ಗಾಡಿಗಳನ್ನು ಕಚ್ಚಾ ರಸ್ತೆಗಳಲ್ಲಿ ವೇಗವಾಗಿ ಎಳೆದುಕೊಂಡು ಹೋಗಬಲ್ಲ ಎತ್ತಿಗೇ, ಎತ್ತಿನ ತಳಿಗಳಿಗೇ ಹೆಚ್ಚು ಪ್ರಾಶಸ್ತ್ಯ. ಈ ಬಗೆಯ ತಳಿಗಳನ್ನೇ ನಾವು ನೂರಾರು ವರ್ಷಗಳಿಂದ ರೂಪಿಸಿಕೊಂಡು ಸಾಕುತ್ತಿದ್ದೇವೆ. ಮೆಹೆಂಜೋದಾರೋ ಮುದ್ರೆಯಲ್ಲಿ ಕೆತ್ತಿರುವುದು ಗೂಳಿಯೇ ಹೊರೆತು ಹಸುವಲ್ಲ. ಆಗಿನಿಂದಲೂ ಎತ್ತಿಗೇ ಪ್ರಮುಖ ಸ್ಥಾನ. ನಮ್ಮದೇವರಿಗೂ ಗೂಲಿಯೇ ವಾಹನ. ಶಿವ ನಂದೀಶ್ವರ, ಪಶುಪತಿ, ಬಸವೇಶ್ವರ. ಹೀಗಾಗಿ ನಾವು ಹಸುಗಳನ್ನು ಸಾಕುತ್ತಿರುವುದು ಅದರ ಹಾಲಿಗಲ್ಲ. ಅದರ ಹೋರಿಕರಕ್ಕಾಗಿ. ಹಾಲಿನ ಉಪಯೋಗ, ಗುಣ ನಮಗೆ ಗೊತ್ತಿಲ್ಲದೆ ಇಲ್ಲ. ಅದರ ಹಾಲನ್ನು ಹಸುವಿನಿಂದ ಪಡೆಯುವುದರ ಬದಲು ಎಮ್ಮೆಯಿಂದ ಪಡೆಯುತ್ತಿದ್ದೇವೆ.

ವ್ಯವಸಾಯ ಪ್ರಧಾನ ಸಂಸ್ಕೃತಿಯ ಅಂಗವಾಗಿದ್ದ ಪ್ರಾಣಿ ಎತ್ತು. ಅದನ್ನು ನಂದಿ ಅವತಾರ ಬಸವಣ್ಣ ಎಂದು ಪೂಜಿಸುತ್ತಾರೆ. ಎತ್ತು ಕೃಷಿಕನ ಸ್ನೇಹಿಯಾಗಿ, ಭವಿಷ್ಯ ನಿರ್ಮಾಣದ ಶಕ್ತಿಯಾಗಿ ಬೆಳೆದು ಬಂದಿದೆ. ಅದು ಮನೆಯಲ್ಲೇ ಹುಟ್ಟಿದ್ದಾಗಿದ್ದರೆ ಅದರ ಸುಳಿ ಸೂತ್ರ ಯಾವ ಲಕ್ಷಣವನ್ನು ನೋಡುವುದಿಲ್ಲ. ಆದರೆ ಅದನ್ನು ಕೊಂಡು ತರುವುದಾಗಿದ್ದರೆ, 'ಪರಿಣಿತ'ರಿಂದ ಅದರ ಶಾಸ್ತ್ರೀಯ ಪರೀಕ್ಷೆ ಮಾಡಿಸುತ್ತಾರೆ. ಹೊಸ ಎತ್ತನ್ನು ಕೊಂಡು ತರುವುದರಿಂದ ಮನೆ ಏರಲೂಬಹುದು ಇಲ್ಲವೆ ಹಾಳು ಆಗಲೂಬಹುದು. ಕೃಷಿಕ ಅನಂತ ಕಾಲದಿಂದ ಹೀಗೆ ನಂಬಿಕೊಂಡು ಬಂದಿದ್ದಾನೆ. ಒಳ್ಳೆಯ ಸುಳಿ ಇದ್ದ ಎತ್ತಿಗೆ ಬೇಡಿಕೆ ಜಾಸ್ತಿ. ಅಲ್ಲದೆ ಎಷ್ಟೋ ಜನರು ಅಂಥ ಎತ್ತುಗಳನ್ನು ಮಾರುವುದೇ ಇಲ್ಲ. ಸತ್ತರೂ ಸಹಿತ ಹೊಲ-ತೋಟಗಳಲ್ಲಿ ಹುಗಿದು, ಅದರ ಕಾಲ್ಗುಣದ ಪರಿಣಾಮ ಶಾಶ್ವತವಾಗಿ ಮನೆಗೇ ಉಳಿಯುತ್ತದೆಂಬ ಭಾವನೆ ಬೆಳೆಸಿಕೊಳ್ಳುತ್ತಾರೆ.

ಎತ್ತನ್ನು ಕೊಂಡುಕೊಳ್ಳುವ ಮುಂಚೆ ಒಳ್ಳೆಯ ಲಕ್ಷಣಗಳಿವೆಯೇ ಎಂದು ಚೆನ್ನಾಗಿ ಪರೀಕ್ಷಿಸುತ್ತಾರೆ. ದನ ಯಾವುದೇ ಆಗಲಿ ಸುಳಿ ನೋಡುವುದು ಬಹಳ ಬಳಕೆಗೆ ಬಂದಿದೆ. ಎತ್ತುಗಳನ್ನು ಕೊಳ್ಳುವಾಗ ತಳಿ ಯಾವುದು, ತಳಿಗೆ ತಕ್ಕ ಎತ್ತರವಿದೆಯೇ, ಎತ್ತುಗಳ ವಯಸ್ಸೆಷ್ಟು, ಎಂದು ಕೇಳುತ್ತಾರೆ; ಗಣ ದೋಷಗಳ ಪರೀಕ್ಷೆ ಕೂಲಂಕಷವಾಗಿ ನೋಡುತ್ತಾರೆ. ಕೊಳ್ಳುವಾಗ ಮುಖ್ಯವಾಗಿ ಎತ್ತಿನ ಕಾಲುಗಳು 'ಶುದ್ದ' ವಾಗಿರಬೇಕು. ಕಾಲುಗಳು ಒಂದಕ್ಕೊಂದು ಬಡಿಯಬಾರದು. ಅದಕ್ಕೆ ನೆವರು ಬಡಿದುಕೊಳ್ಳುವುದು ಎನ್ನುತ್ತಾರೆ. ನೆವರು ಬಡಕ ಎತ್ತು ನಿರುಪಯೋಗಿ. ಕಾಲುಗಳು ದಪ್ಪವಾಗಿರಬಾರದು. ಗೊರಸುಗಳು ಬಿರುಸಾಗಿದ್ದು ಸಣ್ಣವೂ, ಎತ್ತರವೂ ಆಗಿರಬೇಕು. ಗೊರಸುಗಳು ಚಪ್ಪಟೆಯಾಗಿರಬಾರದು. ಎತ್ತಿಗೆ ಗಂಗೆದೊಗಲು ಜಾಸ್ತಿ ಇರಬಾರದು ಗಂಗೆದೊಗಲು ತೀರಾ ತೆಳುವಾಗಿರಬೇಕು. ಎತ್ತಿನ ಭುಜ ಸಹ ಉದ್ದಾಗಿರಬಾರದು. ಎತ್ತಿನ ಕೊಂಬುಗಳು ಕೆಲವು ಕಡೆ ಅಗಲವಿದ್ದರೆ ಒಳ್ಳೆಯದು ಎನ್ನುವರು. ಕೆಲವೆಡೆ ಸಣ್ಣಗಿ ಎರಡೂ ಒಂದೇ ಅಳತೆ ಆಕಾರದವಾಗಿರಬೇಕು ಎನ್ನುವರು. ಕೆಲವೆಡೆ ಎತ್ತಿನ ಕೊಂಬುಗಳಲ್ಲಿ ಬಲಗಡೆಯ ಕೊಂಬು ಸ್ವಲ್ಪ ಮುಂದಕ್ಕೆ ಚಾಚಿದ್ದರೆ ಒಳ್ಳೆಯ ಲಕ್ಷಣವೆಂದು ಪರಿಗಣಿಸುತ್ತಾರೆ. ಎತ್ತಿನ ಇಣಿ ತೀರಾ ದೊಡ್ಡದಾಗಲೀ, ತೀರಾ ಚಿಕ್ಕದಾಗಲೀ, ಇರಬಾರದು. ಮುಖ ನೀಳವಾಗಿ, ಉದ್ದಾಗಿರಬೇಕು.

'ಎತ್ತಿಗೆ ಹೆಗಲು, ಕುದುರೆಗೆ ಕಾಲು' ಎಂಬ ಮಾತಿನಂತೆ ಎತ್ತಿನ ಹೆಗಲು ದಪ್ಪಾಗಿ ಶಕ್ತಿಯುತವಾಗಿದ್ದರಷ್ಟೇ ಸಾಲದು. ಅದು ನೊಗದ ಘರ್ಷಣೆಯಿಂದ ಗಾಯವಾಗದಂತಿರಬೇಕು. ಈಗ 'ಹೆಗಲು ಕೊಟ್ಟಿದೆ' ಎಂದರೆ ಈಗ ಹೂಡಲಿಕ್ಕೆ ಆರಂಭವಾಗಿದೆ ಎಂದರ್ಥ. 'ಹೆಗಲ ತೊಳದೈತಿ' ಅಂದರೆ ಆ ಎತ್ತಿಗೆ ನಿವೃತ್ತಿಯಾಗಿದೆ ಎಂದು ತಿಳಿಯಬೇಕು. 'ಹೆಗಲ ಬಂದೈತಿ' ಅಂದರೆ ಹೆಗಲಿಗೆ ಗಾಯವಾಗಿದೆ ಎಂದು ಜನಪದರು ತಿಳಿಯುತ್ತಾರೆ. ಆಗಾಗ ಹೆಗಲು ಬರುತ್ತಿದ್ದರೆ ಅಂಥಾ ಎತ್ತು ಹೆಚ್ಚು ಕಾಲ ಉಪಯೋಗವಾಗದು. 'ಕಾಗಿ ಕಾ ಎಂದರೆ

ಲ್ವಾಳೆತ್ತು ಬೆದರಿತ್ತು' ಅನ್ನುವ ಗಾದೆ ಹೆಗಲು ಹುಣ್ಣಾದ ಎತ್ತಿನ ಸ್ಥಿತಿ ಕಂಡೇ ಹೇಳಿದ ಮಾತು. ಎತ್ತಿನ ಬಾಲ ಮೂಲದಲ್ಲಿ ದಪ್ಪಾಗಿದ್ದು ಸಣ್ಣಾಗಿ ನೇರವಾಗಿ ಉದ್ದಾಗಿರಬೇಕು. ಸಾಮಾನ್ಯವಾಗಿ ಜಂಡೆದ ಕೂದಲು ಹಿರಿಗಾಲು ಮೊಣಕಾಲು ಕೆಳಗೆ ಇಳಿದಿರಬೇಕು. ಎತ್ತಿನ ಗುದದ್ವಾರದ ಕೆಳಗೆ ನಾಗರಹೆಡೆಯ ಆಕಾರದ ಚಿಹ್ನೆ ಇದ್ದರೆ ಬಹಳ ಒಳ್ಳೆಯದು. ಆ ಎತ್ತು ನಾಗರ ಹಾವಿನಂತೆ ಚಪಲವಾಗಿರುತ್ತದಂತೆ. ಕೆಲವು ಎತ್ತುಗಳ ಕೊನೆಯ ಪಕ್ಕೆಲುಬು ಉಳಿದ ಎಲುಬುಗಳ ಅರ್ಧದಷ್ಟಿರುತ್ತದೆ. ಅದು ಒಂದೇ ಪಕ್ಕೆಗೆ ಇದ್ದರೆ ಅದನ್ನು 'ಮೆಟ್ಟೆಲುಬು' ಎಂದು ಹೇಳುತ್ತಾರೆ. ಅಂಥಾ ಎತ್ತನ್ನು ಯಾರೂ ಕೊಳ್ಳುವುದಿಲ್ಲ. ಆದರೆ ಆ ರೀತಿಯ ಎಲುಬು ಎರಡೂ ಪಕ್ಕೆಗೆ ಇದ್ದರೆ ಅದನ್ನು 'ಗರುಡ' ಎನ್ನುತ್ತಾರೆ ಗರುಡ ಇದ್ದ ಎತ್ತಿಗೆ ಬೇಡಿಕೆ ಬೆಲೆ ಎರಡೂ ಅಧಿಕ. (ಎಂ.ಜಿ. ಬಿರಾದಾರ; ೧೯೮೭; ೪೩-೪೪).

"ಬಣ್ಣದಲ್ಲಿ ರೂಪಾಯಿ ಬಣ್ಣ, ಬೂದು ಬಣ್ಣ, ಸೌರನ್ ಬಣ್ಣ, ಕಪ್ಪು ಬಣ್ಣದ ಎತ್ತುಗಳು ಉತ್ತಮ ಮತ್ತು ನೋಡಲು ಚೆಂದ. ಬಹುತೇಕ ರೈತರು ಇಷ್ಟಪಡುವ ಬಣ್ಣಗಳಿವು. ಜೀಜದ ಹೋರಿ ರೂಪಾಯಿ ಬಣ್ಣದಾಗಿದ್ದರೆ ಒಳ್ಳೆಯದಂತೆ. ವಯಸ್ಸಾದ ದುಡಿವ ಎತ್ತುಗಳಿಗೆ ಬಿಳಿ, ಬೂದು, ರೂಪಾಯಿ ಬಣ್ಣ ನಡೆಯುತ್ತದೆ. ಬಣ್ಣದ ಜೊತೆಗೆ ಜಿಂಕೆಯ ನೋಟವಿರಬೇಕು. ಜೋಲು ಮೋರೆ ಹಾಕಿರಬಾರದು. ಜೋಡಿ ಎತ್ತುಗಳನ್ನು ಕೊಳ್ಳುವಾಗ ಅವು ಬಣ್ಣ, ಎತ್ತರ, ಕೊಂಬುಗಳಲ್ಲಿ ತಾಳೆಯಾಗುವಂತಿರಬೇಕು. ಇಲ್ಲದಿದ್ದರೆ ಹೂಡಲು ಸರಿಯಾಗುವುದಿಲ್ಲ. ಮುಖದ ಮೇಲೆ ಕಣ್ಣಿನ ಸುತ್ತ ರೇಖೆ ಇರುವ ಎತ್ತುಗಳನ್ನು ಬಹಳಷ್ಟು ರೈತರು ಇಷ್ಟಪಡುತ್ತಾರೆ.' (ಅಶೋಕ ಹೇರಿಂದ್ಯಾಪನಹಳ್ಳಿ; ೨೦೦೦ ೮)

ಬೇಸಾಯದ ಕೆಲಸಕ್ಕೆ, ಗಾಡಿ ಹೊಡೆಯಲು ಎತ್ತು ಕೊಳ್ಳುವವರು ಹೆಗಲನ್ನು ನೋಡುವರು. ಹೆಗಲು ಉರುಟುರುಟಾಗಿದ್ದರೆ ಕೆಲಸದ ಅನುಭವವಿದೆಯೆಂದು ಅರ್ಥ. ಹಾಗೆಯೇ ವಯಸ್ಸು ತಿಳಿಯಲು ತಜ್ಞರು ಹಲ್ಲು ನೋಡುತ್ತಾರೆ. ಹುಟ್ಟು ಹಲ್ಲುಗಳು ಬಿದ್ದು ಹೊಸ ಹಲ್ಲು ಮೂಡಿರುವುದರ ಆಧಾರದ ಮೇಲೆ ವಯಸ್ಸು ಗುರುತಿಸುತ್ತಾರೆ. ಇನ್ನೂ ಹಲ್ಲು ಉದುರಿಲ್ಲದ ಅಥವಾ ಎರಡು ಹಲ್ಲು ಹಾಕಿರುವ ಎತ್ತುಗಳು ಒಳ್ಳೆ ಪ್ರಾಯದವು. ನಾಲ್ಕು ಹಲ್ಲು ಹಾಕಿದರೆ ನಡುವಯಸ್ಸು. ಆರು ಹಲ್ಲು ಮತ್ತು ಕಡೆಹಲ್ಲು ಹಾಕಿದ್ದರೆ ವಯಸ್ಸಾಗಿದೆ ಎಂದರ್ಥ. ಕಡೆ ಹಲ್ಲು ಹಾಕಿದರೆ ಹಲ್ಲು ಕಲೆತಿದೆ (ಬಾಯಿಕಲೆತಿದೆ) ಎನ್ನುತ್ತಾರೆ. ಬೀಜದ ಹೋರಿಗೆ ಹಲ್ಲು ಬಾರದಿದ್ದರೆ ಶ್ರೇಷ್ಠ. ಒಳ್ಳೇ ದುಡಿವ ಎತ್ತು ಎಂದರೆ ನಾಲ್ಕು ಹಲ್ಲು ಹಾಕಿರಬೇಕು. ಹಲ್ಲು ನೋಡಿ ವಯಸ್ಸು ಹೇಳುವುದು ಅನುಭವಿಗೆ ಮಾತ್ರ ಸಾಧ್ಯ. ಜೊತೆಗೆ ಕುತ್ತಿಗೆಯ ಕೆಳಗೆ ಅಥವಾ ಗೋಮಾಳೆಯ ಕೆಳಗಿನ ಚರ್ಮ ವಿಪರೀತ ಜೋತು ಬಿದ್ದಿರಬಾರದು. ಸ್ವಲ್ಪ ಬಿರುಸಾಗಿ ಚೂರು ನೇತಾಡುತ್ತಿರಬೇಕು. ಮುಖ್ಯವಾಗಿ ಬೀಜದ ಹೋರಿ ಮತ್ತು ಎತ್ತುಗಳನ್ನು ಕೊಳ್ಳುವವರು ಈ ಅಂಶವನ್ನು ಗಮನಿಸುತ್ತಾರೆ.

ಕಣ್ಣರ್ಸಿ ಮತ್ತು ಕಾಡಿಗೆಗಣ್ಣು ಇರುವ ಎತ್ತನ್ನು ಕೊಳ್ಳುವುದಿಲ್ಲ. ಇವು ಒಳ್ಳೆಯವು ಅಲ್ಲ. ಕರೆ ಎತ್ತು ಮತ್ತು ಕೆಂದ ಎತ್ತನ್ನು ಕಟ್ಟಬಾರದೆಂಬ ನಂಬಿಕೆ ಇದೆ. ಹಾಗೆಯೇ ಸೂಲಿಹಲ್ಲು ಮತ್ತು ಅರೆಬಾಯಿ ಇರುವ ಎತ್ತನ್ನು ಕಟ್ಟುವುದಿಲ್ಲ. ಒಳ್ಳೆಯದಲ್ಲ ಎಂಬ ನಂಬಿಕೆ ಇದೆ. ಏಕೆಂದರೆ ಆ ಎತ್ತುಗಳು ಸರಿಯಾಗಿ ಮೇಯುವುದಿಲ್ಲ. ಅಲ್ಪಸ್ವಲ್ಪ ಮೇದದ್ದನ್ನು ಉಗುಳುತ್ತವೆ ಎಂಬ ನಂಬಿಕೆ ಇದೆ. ಎತ್ತುಗಳಾಗಲಿ ಎಂಟು ಅಥವಾ ಆರು ಹಲ್ಲುಗಳಿದ್ದರೆ ಒಳ್ಳೆಯದು. ಏಲು ಹಲ್ಲುಗಳಿದ್ದರೆ ಒಳ್ಳೆಯದಲ್ಲ. ಪಂಚಕಲ್ಯಾಣಿ ಎತ್ತನ್ನು ಸಾಮಾನ್ಯವಾಗಿ ಕಟ್ಟುವುದಿಲ್ಲ. ಏಕೆಂದರೆ ಪಂಚಕಲ್ಯಾಣಿ ಎತ್ತು ಇದ್ದರೆ ಸದಾ ಪೂಜೆ ಮಾಡಬೇಕು. ಮಾರಬಾರದು, ಕಟುಗರಿಗೆ ಕೊಡಬಾರದು, ಅದನ್ನು ಹೊಡೆಯಬಾರದು. ಹೀಗಾಗಿ ಪಂಚಕಲ್ಯಾಣಿಯನ್ನು ಯಾರೂ ಕಟ್ಟುವುದಿಲ್ಲ ಪಂಚಕಲ್ಯಾಣಿಯನ್ನು ಕೆಲವೆಡೆ 'ಬಸವಣ್ಣ' ಎಂದು ಕರೆಯುವರು. ಎತ್ತಿನ ಮುಂಗಾಲಿನ ಹೆಜ್ಜೆಗಿಂತ ಹಿಂಗಾಲಿನ ಹೆಜ್ಜೆಯು ದೊಡ್ಡದಾಗಿದ್ದರೆ ವ್ಯವಸಾಯದಲ್ಲಿ ಚುರುಕಾಗಿರುವುದೆಂದು ನಂಬುತ್ತಾರೆ.ಎತ್ತುಗಳಿಗೆ ಹೂಬಾಲ ಇದ್ದರೆ ಅದು ದೇವರ ಸಮಾನ ಎಂದು ಭಾವಿಸುತ್ತಾರೆ. ಅದಕ್ಕೆ ಪೊರಕೆ ಸೋಕಿಸಬಾರದು. ಎಂಜಲು ನೀರು ಕುಡಿಸಬಾರದು. ಹಾಗಾಗಿಯೇ ಕೆಲವರು ಇವನ್ನು ಕಟ್ಟುವುದಿಲ್ಲ. ಹಾಗೆಯೇ ಮೂಗುಹಣ್ಣು ಅಥವಾ ಪೀನಾಸಿ ಇರುವ ರಾಸುಗಳನ್ನು ಕಟ್ಟಬಾರದು. ಇವು ಮೇವು ತಿನ್ನುವಾಗ ಗೊರಕೆಯಂತೆ ಸದ್ದು ಮಾಡುತ್ತವೆ. ಇದನ್ನು ಮೇವು ತಿನ್ನಿಸಿ ಪರೀಕ್ಷಿಸುತ್ತಾರೆ. ಸಿಡಿಗಾಲು ಅಂದರೆ ನಡೆಯುವಾಗ ಕಾಲುಗಳನ್ನು ಎಸೆಯುತ್ತಿದ್ದರೆ ಕೊಳ್ಳಬಾರದು. 'ಹುಳಕಣ್ಣು' - ಕಣ್ಣಿನಲ್ಲಿ ನೀರು ಸುರಿಯುತ್ತಿದ್ದರೆ, 'ಹುಳಕಿವಿ' - ಕಿವಿಯಲ್ಲಿ ಸೋರುತ್ತಿದ್ದರೆ, 'ಹುಳಕಟ್ಟು' - ಬಾಲದ ತುದಿಗೆ ಹುಳ ಬಿದ್ದಿದ್ದರೆ, 'ಆನೆಗಾಲು' ಕಾಲಲ್ಲಿ

ಗೊರಸು ಬೆಳೆದುಕೊಂಡಿದ್ದರೆ, 'ನೊಗಬಡಕ' ಹೆಗಲ ಮೇಲೆ ನೊಗ ಇಟ್ಟಾಗ ಕೊಂಬಿನಿಂದ ಬಡಿಯುತ್ತಿದ್ದರೆ ಅಂತಹ ಎತ್ತುಗಳನ್ನು ಕೊಳ್ಳುವುದಿಲ್ಲ. ಎತ್ತುಗಳು ಹಾಯುತ್ತವೆಯೋ ಇಲ್ಲವೊ ಎಂಬುದನ್ನು ಸಹ ನೋಡುವರು.

ಯಾವ ದನಕ್ಕೂ ಹೊಟ್ಟೆಗೆ ಒಂದೇ ಮಗ್ಗಲು ಒಂಟೆಲವು (ಮಂಡೆಲವು) ಇರಬಾರದು. ದನಗಳು ಹಲ್ಲು ತಿನ್ನಬಾರದು ಮತ್ತು ಗೊರಕೆ ಹೊಡೆಯಬಾರದು. ದನಗಳ ತುಟಿ ಕರ್‍ರಗಿರಬಾರದು ಬಾಲದ ಕೂದಲು ಬೆಳ್ಳಗಿರಬಾರದು. ಆದರೆ ದನಗಳ ಖುರ (ಗೊರಸು) ಕರ್‍ರಗಿರಬಾರದು. ತಿರಪ ಕಾಲಿನ ದನ ಇರಬಾರದು. ಹಿಂದಿನ ಕಾಲುಗಳು ಎಳೆಯಬಾರದು, ಹೀಗೆ ಎಳೆಯುತ್ತಿದರೆ ಖುರಗಳು ಹಾಳಾಗುತ್ತವೆ. ಮುಂಗಾಲುಗಳು ಬಡಿದುಕೊಳ್ಳಬಾರದು. ಇದರಿಂದ ಗಾಯವಾಗಿ ದನಗಳು ನಿಶ್ಯಕ್ತವಾಗುತ್ತವೆ. ಕಾಡಿಗೆ ಕಣ್ಣಿನ ಎತ್ತು ಒಳ್ಳೆಯದು. ಆದರೆ ಗಾರೆ ಕಣ್ಣಿನ ಎತ್ತು ಇರಬಾರದು. ಎತ್ತು ಹಾಸು ಹೊಯ್ಯಬಾರದು. ಆದರೆ ಆಕಳು ಹಾಸು ಹೊಯ್ಯುತ್ತಿದ್ದರೆ ಒಳ್ಳೆಯದು. ಎತ್ತಿನ ಕೋಡುಗಳಲ್ಲಿ ಅದರ ಬಲ ಕೋಡು ಮುಂದಿದ್ದರೆ ಶುಭ. ದನಗಳ ಕೋಡುಗಳಿಗೆ ಗೊರಲಿ ಹತ್ತಬಾರದು ಕಣ್ಣುಗಳಲ್ಲಿ ಹೂವು ಬೀಳಬಾರದು. ದನಗಳ ಕಿವಿ ಸೋರಬಾರದು. ಎತ್ತಿನ ತೋಬರಿ (ಜನನೇಂದ್ರಿಯ) ಹೆಚ್ಚು ಜೋತು ಬಿದ್ದಿರಬಾರದು. ಒಂಟಿ ಬೀಜದ ದನ ಇರಬಾರದು. ದನಗಳಗೆ ಅಡ್ಡಹಲ್ಲು ಇರಬಾರದು. ದನಗಳ ಮೈ ಮೆತ್ತಗಿರಬೇಕು. ಮೈಮೇಲಿನ ಕೂದಲು ರೇಷ್ಮೆಯಂತೆ ನಯವಾಗಿರಬೇಕು. ಎತ್ತಿನ ಒಂದು ಕಣ್ಣು ಕಾಡಿಗೆ ಕಣ್ಣು ಇರಬಾರದು. ಎರಡು ಕಾಡಿಗೆ ಕಣ್ಣು ಇದ್ದರೆ ದೋಷವಿಲ್ಲ. ಎಮ್ಮೆಗೆ ಎರಡು ಮೊಲೆಗಳಿರಬಾರದು. ಮೂರು ಮೊಲೆಗಳಿದ್ದರಂತೂ ತೀರ ಅಶುಭ. ಎರಡು ಎತ್ತುಗಳು ಒಂದೇ ಮಗ್ಗುಲಾಗಿ ಮಲಗಿದ್ದರೆ ಶುಭ. ಆ ಕಾಲಕ್ಕೆ ಒಕ್ಕಲಿಗ ಕಾಯಿ ಒಡೆಯುವುದುಂಟು. ಸೋದರಮಾವ, ಸೋದರಳಿಯ ಎತ್ತುಗಳು ಜೊತೆಯಾಗಿ ಸಿಕ್ಕರೆ ಅತ್ಯಂತ ಶುಭವೆಂದು ಹೇಳುತ್ತಾರೆ. ಎತ್ತು ಕಟ್ಟಿದಲ್ಲಿಯೇ ಥರಿ ಹೊಡೆದರೆ ಒಳ್ಳೆಯದು.

"ಸಾಮಾನ್ಯವಾಗಿ (ದನ) ಎತ್ತುಗಳಿಗೆ ಹಣೆಯ ಮೇಲೊಂದು, ಬೆನ್ನಮೇಲೆ, ಇಣಿಯ ಹಿಂದೆ ಐದಾರು ಅಂಗುಲ ಅಳತೆಯಲ್ಲೊಂದು ಸುಳಿಗಳಿರುವುದು ಸ್ವಾಭಾವಿಕ. ಆದರೆ ಇಣಿಗೆ ತೀರ ಹತ್ತಿರ ಅಂದರೆ ಒಂದೆರಡಂಗುಲದಲ್ಲಿ ಸುಳಿ ಇದ್ದರೆ ಅದನ್ನು 'ಕಾಗೆಸುಳಿ' ಎಂದು ಹೇಳುತ್ತಾರೆ. ಕೆಲವೆಡೆ ಪಾತಾಳ ಸುಳಿ ಎಂದು ಸಹ ಕರೆಯುವರು. ಕಾಗೆ ಸುಳಿಯ ಎತ್ತನ್ನು ಯಾರೂ ಕೊಳ್ಳುವುದಿಲ್ಲ. ಅದು ಅಪಶಕುನ. ಅವಲಕ್ಷಣ. ಅಂಥ ಎತ್ತು ಮನೆಯಲ್ಲಿದ್ದರೆ ಆ ಮನೆಯ ಉದ್ಧಾರವಾಗುವುದೇ ಇಲವಂತೆ. ಬೆನ್ನು ಹುರಿಯ ಮಧ್ಯದಲ್ಲಿ ನೇರವಾಗಿ ತೋಬರಿಗೆ ಸರಳ ರೇಖೆಯಲ್ಲಿ ಇದ್ದ ಸುಳಿಯನ್ನು 'ಮೂತ್ರಿ ಸುಳಿ' ಎನ್ನುತ್ತಾರೆ. ಇದನ್ನೂ ಸಹ ಒಳ್ಳೆಯ ಸುಳಿ ಎನ್ನುವುದಿಲ್ಲ. ಸುಳಿಯಲ್ಲಿ ನೀರು ಹಾಕಿದರೆ ಅದು ತೋಬರಿಯ ತುದಿಯಿಂದ ಬೀಳಬಾರದು. ಹಿಂಗಾಲು ಗೂಟೆಲುಬಿನ ಮುಂದೆ ಐದಾರು ಅಂಗುಲ ಅಂತರದಲ್ಲಿ ಬೆನ್ನುಹುರಿಯ ಬದಿಗೆ, ಎಡಬಲಕ್ಕೆ ಎರಡು ಸುಳಿಗಳಿರುತ್ತವೆ. ಇವುಗಳನ್ನು 'ಕತ್ತರಿಯ ಸುಳಿ' ಕೆಲವೆಡೆ 'ಕೀಲುಸುಳಿ' ಎಂದು ಕರೆಯುವರು. ಅವು ಎತ್ತಿನ ಬೆನ್ನು ಹುರಿಯ ಆಚೆ, ಈಚೆ ಕತ್ತರಿಯ ಆಕಾರದಲ್ಲಿ ಕಾಣುತ್ತಿರುತ್ತವೆ. ಈ ಹೆಸರಿನಂತೆ ಈ ಸುಳಿಯ ಎತ್ತನ್ನು ಕೊಂಡವನ ಸಂಸಾರ ಕತ್ತರಿಸುತ್ತಲೇ ಹೋಗುತ್ತದೆಂಬುದು ನಂಬಿಕೆ. ಅಲ್ಲಿಯೇ ಗೂಟೆಲುಬಿಗೆ ಹತ್ತಿಯೇ ಎರಡೂ ಕಡೆಗೆ ಇನ್ನೆರಡು ಸುಳಿಗಳಿರುತ್ತವೆ. ಅವುಗಳನ್ನು 'ಮುಟ್ಟಿನ ಸುಳಿ' ಎಂದೂ, 'ಚಾಳಿ ಸುಳಿ' ಎಂದೂ ಹೇಳುತ್ತಾರೆ. ಈ ಸುಳಿಯ ಎತ್ತನ್ನು ಹೂಡಲಿಕ್ಕೆ ಉಪಯೋಗಿಸುವುದಿಲ್ಲ. ಆದರೆ ಅದನ್ನು ಸಬರಹಾಕಿ ಮೇಲೆ ಕೂಡ್ರಲು, ಹೇರು ಹೇರಲು, ನೀರು ತರಲು ಉಪಯೋಗಿಸುತ್ತಾರೆ. ಅದಕ್ಕೆ 'ಕಂಟ್ಲೆತ್ತು' ಎಂದು ಹೆಸರು. ಈ ಸುಳಿಯ ಎತ್ತನ್ನು ಹೂಡಿದರೆ ಒಕ್ಕಲುತನ ಸರಿಯಾಗಿ ಸಾಗದು ಎಂಬುದು ಕಲ್ಪನೆ. ಅದನ್ನು ಕೊಳ್ಳುವವರಿಲ್ಲದಕ್ಕೆ ಮುಟ್ಟುಹಾಕಿ ಕಂಟ್ಲೆಂತ್ತೆಂದು ಬಳಸುತ್ತಾರೆ (ಎಂ.ಜಿ. ಬಿರಾದಾರ; ೧೯೮೯ :೪೧ :೪೨).

ಎತ್ತಿಗೆ ಇರುವ ತೀರಾ ಕೆಟ್ಟ ಸುಳಿ 'ಕಸಬರಿಗೆಯ ಸುಳಿ' ಇದನ್ನು ಕೆಲವೆಡೆ 'ಹೀನಗೈ ಸುಳಿ' ಎನ್ನುವರು. ಇನ್ನೂ ಕೆಲವೆಡೆ 'ಬಾರಿಗೆ ಸುಳಿ' ಎಂದೂ ಕರೆಯುತ್ತಾರೆ. ಈ ಸುಳಿ ಇದ್ದ ಎತ್ತು ತನ್ನ ಒಡೆಯನ ಸಂಸಾರವನ್ನೇ ಉಡುಗಿ ಹಾಕುತ್ತದಂತೆ ! ಈ ಸುಳಿ ಹಿಂಗಾಲು ಗುಟೆಲುಬಿನ ಹಿಂದ ಒಂದು ಕಡೆ ಧೂಮಕೇತುವಿನಂತೆ ಇರುತ್ತದೆ. ಇಂತಹ ಎತ್ತನ್ನು ಯಾರೂ ಕೊಳ್ಳುವುದಿಲ್ಲ. ಎತ್ತಿನ ಗುದದ್ವಾರ ಸ್ಥಾನದಿಂದ ಕೆಳಗೆ ಒಂದೇ ಸುಳಿ ಇದ್ದರೆ ಅದನ್ನು 'ಲಂಗಟ ಸುಳಿ' ಎನ್ನುತ್ತಾರೆ. ಹೆಸರೇ ಹೇಳುವಂತೆ ಈ ಎತ್ತಿನ ಒಡೆಯನಿಗೆ ಲಂಗಟವೇ ಗತಿಯಾಗುತ್ತದಂತೆ ! ಅವನಿಗೆ ಕಡುಬಡತನ ತರುತ್ತದೆಂಬುದು ಕಲ್ಪನೆ. ಆದರೆ ಅಲ್ಲೇ ಎರಡು ಸುಳಿಗಳಿದ್ದರೆ ಬಹಳ

ಒಳ್ಳೆಯದು. ಅಂತಹ ಎತ್ತನ್ನು ಕೊಂಡವನ ಏಳ್ಗೆಯಾಗುತ್ತದಂತೆ. ಕೆಲವು ಎತ್ತುಗಳಿಗೆ ಗಂಗೆದೊಗಲಲ್ಲಿ ಎರಡು ಕಡೆಗೆ ಸುಳಿಗಳಿರುತ್ತವೆ. ಅವು ಹೂಡಿದಾಗ ಒತ್ತಗೀಲಕ್ಕೆ ಹತ್ತದಿದ್ದರೆ ಅದು ಸಲ್ಲ ಲಕ್ಷಣವಲ್ಲ. ಆ ಎತ್ತುಗಳು ದಡ್ಡ ಕಡ್ಡ ಇರುತ್ತವಂತೆ. ಅದು ತಿಂದಷ್ಟು ದುಡಿಯದ ದನ. ಇದನ್ನು ಅಷ್ಟು ಸೂಕ್ಷ್ಮವಾಗಿ ಪರೀಕ್ಷಿಸಲಾಗುವುದಿಲ್ಲ. 'ಎತ್ತಿನ ಎದಿಯಾಗ, ಕುದುರಿ ಕುಂಡ್ಯಾಗ ಸುಳಿ ನೋಡಬಾರದು' ಎಂಬ ಹೇಳಿಕೆ. ಕಿವಿಯ ಗಡ್ಡಿಯ ಮೇಲೆ ತೋಬರಿಯ ಹಿಂದೆ ಕೆಲವು ಸುಳಿಗಳಿರುತ್ತವೆ. ಅವುಗಳನ್ನು ಅಷ್ಟಾಗಿ ಗಮನಿಸುವುದಿಲ್ಲ. ದನಕ್ಕಿರಬೇಕಾದ ಅತ್ಯುತ್ತಮ ಸುಳಿ 'ದವಣಿ ಸುಳಿ' ಇದಕ್ಕೆ ಕೆಲವೆಡೆ 'ಗೋದ್ಲಿ ಸುಳಿ' ಎನ್ನುವರು. ಈ 'ದವಣಿಸುಳಿ' ಇದ್ದ ಎತ್ತಿನ ದಾವಣಿಯಲ್ಲಿ ಯಾವಾಗಲೂ ದನಗಳಿರುತ್ತವಂತೆ! ಇವು ಎರಡು ಸುಳಿಗಳು. ಒಂದು ಇಣಿಯಿಂದ ಹಿಂದೆ ಬೆನ್ನ ಹುರಿಯಲ್ಲಿ ಒಂದು ಗೇಣಳತೆ ಬಿಟ್ಟು ಇರುತ್ತದೆ. ಇನ್ನೊಂದು ಹಿಂಗಾಲು ಗೂಟೆಲುಬಿನಿಂದ ಮುಂದೆ ಒಂದೆರಡು ಗೇಣಾಂತರದಲ್ಲಿ ಮೊದಲಿನ ಸುಳಿಗೆ ನೇರವಾಗಿ ಬೆನ್ನು ಹುರಿಯ ಮೇಲೆಯೇ ಇರುತ್ತದೆ. ಇವೆರಡನ್ನು ಕೂಡಿಸಿಯೇ ಈ ಹೆಸರು. ಈ ದನ ಬಹಳ ಶುಭದಾಯಕಷ್ಟೇ ಅಲ್ಲ. ದವಣಿ ಸುಳಿ ಇದ್ದ ದನದವನ ಒಕ್ಕಲುತನ ಉತ್ಕರ್ಷ ಹೊಂದುತ್ತದೆಂಬ ಬಲವಾದ ನಂಬುಗೆ. ಇಂತಹ ದನಗಳನ್ನು ಯಾರೂ ಸಾಮಾನ್ಯವಾಗಿ ಮಾರಲು ಮುಂದೆ ಬರುವುದಿಲ್ಲ. ಈ ಸುಳಿ ಇದ್ದರೆ ಬೇರೆ ಯಾವ ಸುಳಿಗಳನ್ನು ನೋಡುವುದೇ ಇಲ್ಲ. ದವಣಿ ಸುಳಿಯ ದನ ದಾವಣಿಯಲ್ಲಿದ್ದರೆ ಇನ್ನುಳಿದ ಕೆಟ್ಟ ಸುಳಿಯ ದನದ ಪ್ರಭಾವ ಒಡೆಯನ ಮೇಲೆ ಆಗುವುದಿಲ್ಲವಂತೆ (ಎಂ.ಜಿ. ಬಿರಾದಾರ : ೧೯೮೭ : ೪೧ - ೪೩).

ಎತ್ತಿನ ಕಾಲಿನಲ್ಲಿ ಅಂದರೆ ಎರಡೂ ಮುಂಗಾಲಿನ ಗೊರಸಿನ ಮೇಲೆ ಸುಳಿಗಳಿದ್ದರೆ ಬೇಡಿ ಸುಳಿ ಎನ್ನುವರು. ಅಂತಹ ಎತ್ತನ್ನು ಕೊಂಡರೆ ಮನೆಯಲ್ಲಿ ಯಾರಿಗಾದರೂ ಬೇಡಿ ಹಾಕಿಸಿಕೊಳ್ಳುತ್ತಾರೆ ಎಂಬ ನಂಬಿಕೆ ಇದೆ. ಎತ್ತಿನ ಎರಡೂ ಕಣ್ಣುಗಳ ಹತ್ತಿರ ಎರಡು ಸುಳಿ ಇದ್ದರೆ ಕೆಟ್ಟದ್ದು. ಆದರೆ ಮೂರು ಸುಳಿಗಳಿದ್ದರೆ ಒಳ್ಳೆಯದು. ಇದನ್ನು 'ಬಾಸಿಂಗ ಸುಳಿ' ಎನ್ನುವರು. ಇಂತಹ ಎತ್ತನ್ನು ಕೊಂಡರೆ ಮನೆಯಲ್ಲಿ ಮದುವೆ ಕಾರ್ಯ ನಡೆಯುತ್ತದೆ ಎಂಬ ನಂಬಿಕೆ ಇದೆ. ಎತ್ತಿನ ಎದೆಗುಂಡಿಗೆ ಹತ್ತಿರ ಇರಡೂ ಕಡೆಗೆ ಸುಳಿಗಳಿರುತ್ತವೆ. ಅವನ್ನು 'ಗುಂಡಿಗೆ ಸುಳಿ' ಎನ್ನುವರು. ಇಂತಹ ಸುಳಿಯ ಎತ್ತುಗಳು ಒಳ್ಳೆಯವು. ಗುಂಡಿಗೆ ಸುಳಿಯಿಂದ ಸ್ವಲ್ಪ ದೂರದಲ್ಲಿ, ಅಂದರೆ ಗುಂಡಿಗೆ ಸುಳಿ ಮೇಲುಗಡೆ ಎರಡಿಂಚು ಅಂತರದಲ್ಲಿ ಎರಡು ಸುಳಿಗಳಿದ್ದರೆ ಅವನ್ನು 'ಎದುರು ಪಾಮ' ಎಂದು ಕರೆಯುವರು. ಎದುರು ಪಾಮ ಇದ್ದ ಎತ್ತು ತುಂಬಾ ಬಲಿಷ್ಠವಾಗಿದ್ದು, ವ್ಯವಸಾಯದ ಕೆಲಸಕ್ಕೆ ತುಂಬಾ ಯೋಗ್ಯವಾಗಿರುತ್ತದಂತೆ. ಭುಜದ ಮೇಲೆ ನೇರವಾಗಿ ಇದ್ದರೆ 'ರಾಶಿಸುಳಿ' ಎನ್ನುವರು. ಇಂತಹ ಎತ್ತಿರುವ ಮನೆಯು ರಾಶಿ ಏರಿದಂತೆ ಏರುತ್ತದೆ ಎಂಬ ನಂಬಿಕೆ ಇದೆ. ಬೆನ್ನಮೇಲೆ ಇನ್ನೊಂದು ನಡುವೆ ಸುಳಿ ಇರುತ್ತದೆ. ಇದನ್ನು 'ಸವಗುಡ್ಡ ಸುಳಿ' ಎನ್ನುವರು. ಈ ಸುಳಿಗೆ ಬಡಿದರೆ ಅಥವಾ ಸುಳಿಯ ಮೇಲೆ ಕಲ್ಲನ್ನು ಇಟ್ಟರೆ ಎತ್ತು ಉಚ್ಚಿ ಹೊಯ್ಯುತ್ತದೆ. ಎತ್ತಿನ ಮೊಣಕಾಲ ಮೇಲೆ ಸುಳಿಗಳಿದ್ದರೆ, ಅವು ಕೆಡಕನ್ನುಂಟು ಮಾಡುವ ಸುಳಿಗಳಾಗಿರುತ್ತವೆ. ಒಟ್ಟಾರೆಯಾಗಿ, ಎತ್ತುಗಳಿಗೆ ಬೇಡಿ ಸುಳಿ, ಕಾಗಿ ಸುಳಿ, ಕಸಬರಿಗೆ ಸುಳಿ, ಕೀಲುಕಂಟಗ ಸುಳಿ, ಜೋಗಿ ಸುಳಿ, ಹಾಗೂ ಅಡಕಲು ಸುಳಿಗಳಿದ್ದರೆ ಒಳ್ಳೆಯ ಫಲ ಕೊಡುವುದಿಲ್ಲ ಎಂಬ ನಂಬಿಕೆ ಜನಪದರಲ್ಲಿ ದಟ್ಟವಾಗಿ ಇದೆ.

ಇನ್ನೂ ಕೆಲವೆಡೆ ಪೊರಕೆ ಸುಳಿ, ಸಂಕಾಲ ಸುಳಿ, ಕಾಡು ಸುಳಿ, ಗೂಬೆಸುಳಿ, ಚಟ್ಟದ ಸುಳಿ, ಬೆನ್ನು ಸುಳಿ, ಮಸ್ತಕ ಸುಳಿ.... ಹೀಗೆ ಹಲವಾರು ಸುಳಿಗಳನ್ನು ಗುರುತಿಸುತ್ತಾರೆ. ಹೀಗಿರುವ ಒಂದೊಂದು ಸುಳಿಗೂ ಅದರದೇ ಆದ ಅರ್ಥ, ಪ್ರಾಮುಖ್ಯತೆ ಇದೆ. ಸುಳಿ ಎತ್ತಿನ ಯಾವ ಭಾಗದಲ್ಲಿದೆ ಎಂಬುದರ ಮೇಲೆ ಅದು ಒಳ್ಳೆಯದೋ, ಕೆಟ್ಟದೋ ಎಂದು ತೀರ್ಮಾನಿಸುತ್ತಾರೆ. 'ಸಂಕಾಲ ಸುಳಿ' ಮುಂಗಾಲಿನ ಗೆಣ್ಣಿನಿಂದ ಕೆಳಗಿರುತ್ತದೆ. 'ಕಾಡುಸುಳಿ' ಪಕ್ಕೆಗಳ ಮೇಲಿರುತ್ತದೆ. ಕಾಡುಸುಳಿ ಇರುವ ರಾಸು ಕಟ್ಟಿದರೆ ಕಾಡಿಸುತ್ತವೆ ಎಂಬ ಭಾವನೆಯಿಂದ ರೈತರು ಕಟ್ಟುವುದಿಲ್ಲ. 'ಹೀನ ಸುಳಿ' ಹಿಂಗಾಲಿನ ಪಂಜದ ಮೇಲಿರುತ್ತದೆ. ಇದು ತುಂಬ ಕೆಟ್ಟ ಸುಳಿ ಎಂಬ ನಂಬಿಕೆಯಿದೆ. ಬಾಲದ ಬುಡದ 'ಗೂಬೆ ಸುಳಿ' ಇದೂ ಅನಿಷ್ಟವಂತೆ. 'ಕೀಲು ಸುಳಿ' ಕೀಲಿನ ಮುಂಭಾಗದಲ್ಲಿರುತ್ತದೆ. 'ಪೊರಕೆ ಸುಳಿ' ಬಾಲದಲ್ಲಿದ್ದು, ಇದನ್ನು ಕಟ್ಟಿದರೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆ ಇದೆ. 'ಪಾತಾಳ ಸುಳಿ' ಹಿರಿಳಿನ ಮೇಲಿರುತ್ತದೆ. ಈ ರಾಸನ್ನು ಕಟ್ಟಿದರೆ ಪಾತಾಳಕ್ಕೆ ಹೋಗುತ್ತಾರಂತೆ. 'ಮುಕ್ಕಣ್ಣ ಸುಳಿ' ಯು ಮುಖದ ಮೇಲೆ ಕಣ್ಣಿನ ನೇರದಲ್ಲಿರುತ್ತದೆ. 'ಚಕ್ರಸುಳಿ' ಯು ಕಣ್ಣಿನ ನೇರಕ್ಕೆ ಕೆಳಗಿರುತ್ತದೆ. ಇವೆರಡೂ ಕೆಟ್ಟ ಸುಳಿಗಳು. ತಲೆಯ ಮೇಲಿರುವ ಸುಳಿ 'ಬಾಸಿಂಗ ಸುಳಿ' ಈ ಸುಳಿ ಇರುವ ರಾಸುಗಳನ್ನು

ಮದುವೆ ಆಗಿರುವವರು ಕಟ್ಟಬಾರದಂತೆ. 'ಜೊತಗ ಸುಳಿ' ಇದು ಗೋಮಾಳೆಯಿಂದ ಕೆಳಕ್ಕಿದ್ದು ತುಂಬ ಒಳ್ಳೆಯ ಸುಳಿ. ಈ ಸುಳಿ ಇರುವ ರಾಸುಗಳನ್ನು ಹುಡುಕಿ, ಹುಡುಕಿ ಕೊಳ್ಳುತ್ತಾರೆ. (ಅಶೋಕ ಹೇರಿಂದ್ಯಾಪನಹಳ್ಳಿ; ೨೦೦೦ :೮).

ಡಾ|| ಎಚ್. ಎಲ್. ನಾಗೇಗೌಡರು ದನಗಳ ಸುಳಿಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ; 'ಕೀಲುಸುಳಿ, ಪಾತಾಳ ಸುಳಿ, ಪರಕು ಸುಳಿ, ಹೀನ ಸುಳಿ, ದಾವಣಿ ಸುಳಿ, ರಾಜಾ ಸುಳಿ, ಮಂತ್ರಿ ಸುಳಿ, ಹೇಡಿ ಸುಳಿ, ಚೊಟ್ಟ ಬಡಗಿಸುಳಿ, ಬರಗಸುಳಿ, ಮುಕ್ಕಣ್ಣ ಸುಳಿ, ಬಾಸಿಂಗ ಸುಳಿ, ಛತ್ರಿ ಸುಳಿ, ನಾಮದ ಸುಳಿ, ಗುಂಡಿಗೆ ಸುಳಿ, ಬೇಡಿ ಸುಳಿ, ವಕ್ರ ಸುಳಿ, ನಗಾರಿ ಸುಳಿ, ಮಡಿಕೆ ಸುಳಿ ಮುಂತಾದವು. (ಡಾ. ಹೆಚ್.ಎಲ್. ನಾಗೇಗೌಡ; ೧೯೮೮ : ೫).

'ಸುಳಿ' ಇದು ದನಗಳಿಗೆ ಹುಟ್ಟಿನಿಂದ ಬಂದುದು ಅಲ್ಲದೆ ಸಾಯುವವರೆಗೆ ಉಳಿಯುವಂತಹದ್ದು. ಆದ್ದರಿಂದ "ಹೀನ ಸುಳಿ ಬೋಳಿಸಿದರೆ ಹೋದೀತೇ" ಎಂಬುದು ಲೋಕೋಕ್ತಿ. ಸುಳಿ ಎಲ್ಲ ದನಗಳಿಗೆ ಇದ್ದರೂ, ಕುರಿ-ಆಡುಗಳನ್ನು ಕೊಳ್ಳುವಾಗ ಸಾಮಾನ್ಯವಾಗಿ ಸುಳಿ ನೋಡುವುದಿಲ್ಲ. ದನಗಳಲ್ಲದೆ ಕುದುರೆಯ ಸುಳಿಗಳನ್ನು ಅತಿ ಸೂಕ್ಷ್ಮವಾಗಿ ನೋಡುವುದುಂಟು. ಆಕಳು, ಎತ್ತುಗಳಿಗೆ ಮುಂಭಾಗಕ್ಕೆ ಕೆಳಕ್ಕೆ ಮಾತ್ರ ಎಂಟು ಹಲ್ಲುಗಳಿರುತ್ತವೆ. ಯಾವ ದನಗಳಿಗೂ ಏಳು ಹಲ್ಲುಗಳಿರಬಾರದು. ಏಳುಹಲ್ಲಿನ ದನ ಗೋಳು ಮಾಡುವುದೆಂದು ಒಕ್ಕಲಿಗನ ನಂಬಿಗೆ.

"ಹಣೆಯ ಮೇಲೆ ನಡುವೆ ಒಂದು ಸುಳಿ ಇದ್ದರೆ 'ಕುಂಕುಮ ಸುಳಿ'. ಹಣೆಯ ಮೇಲೆ ರೇಖೆಯಂತೆ ಒಂದು ಸುಳಿ ಇದ್ದರೆ 'ನಾಮ ಸುಳಿ'. ಹಣೆಯ ಮೇಲೆ ಒಂದು ಮೇಲೊಂದು ಎರಡು ಸುಳಿ ಇದ್ದರೆ 'ಅಡಕಲ ಸುಳಿ'. ಹಣೆಯ ಮೇಲೆ ತ್ರಿಕೋನದಂತೆ ಮೂರು ಸುಳಿ ಇದ್ದರೆ 'ಬಾಸಿಂಗ ಸುಳಿ' ಎರಡು ಕೋಡುಗಳ ಮಧ್ಯೆ ಒಂದು ಸುಳಿ ಇದ್ದರೆ, 'ಮಸಕದ ಸುಳಿ'. ಜಂತಿಗೆಯಲ್ಲಿ ಸಿಗುವಂತೆ ಕುತ್ತಿಗೆಯಲ್ಲಿ ಎರಡು ಸುಳಿ ಇದ್ದರೆ 'ಉರಲು ಸುಳಿ' ಎದೆಯ ಮೇಲೆ ಇಬ್ಬದಿಯಲ್ಲಿ ಒಂದೊಂದರಂತೆ ಎರಡು ಸುಳಿಗಳಿದ್ದರೆ 'ಎದೆಯ ಸುಳಿಗಳು'. ಇಣಿಯ ಮುಂಭಾಗದಲ್ಲಿ ಹೆಗಲ ಮೇಲೆ ಒಂದು ಸುಳಿ ಇದ್ದರೆ 'ನೊಗ ಮುರುಕ ಸುಳಿ' ಇಣಿಯ ಹಿಂಬಾಗದಲ್ಲಿ ಒಂದು ಸುಳಿ ಇದ್ದರೆ 'ಕಾಗಿ ಸುಳಿ' ಇಣಿಯ ತುದಿಯಲ್ಲಿರುವ ಸುಳಿ 'ಬೆಟ್ಟದ ಸುಳಿ ಅಥವಾ ಗೋಪುರ ಸುಳಿ'. ಬೆನ್ನ ಮೇಲೆ ಮುಂಭಾಗದಲ್ಲಿ ಒಂದು ಸುಳಿ ಇದ್ದರೆ 'ರಾಜಾಸುಳಿ'. ಬೆನ್ನ ಮೇಲೆ ಮುಂಭಾಗದಲ್ಲೊಂದು ಹಿಂಭಾಗದಲ್ಲೊಂದು ಸುಳಿ ಇದ್ದರೆ 'ದಾವಣಿ ಸುಳಿ' ಬೆನ್ನ ಮಧ್ಯದಲ್ಲಿ ಒಂದು ಸುಳಿಯಿದ್ದು ಅದರ ಮೇಲಿನ ನೀರು ಕೆಳಗೆ ಮೂತ್ರಧಾರೆಗೆ ಕೂಡುವಂತಿರುವ ಸುಳಿ 'ಮುಟ್ಟುಸುಳಿ ಅಥವಾ ಮೂತ್ರಸುಳಿ' ಬೆನ್ನ ಮೇಲೆ ಹಿಂಭಾಗದಲ್ಲಿ ಒಂದು ಸುಳಿ ಇದ್ದರೆ 'ಗದ್ದಗಿ ಸುಳಿ' ಹೊಟ್ಟೆಯ ಕೆಳಭಾಗದಲ್ಲಿ ಹೊಕ್ಕಳ ಹತ್ತಿರ ಒಂದು ಸುಳಿ ಇದ್ದರೆ 'ಹೊಕ್ಕಳ ಸುಳಿ' ಮುಂಗಾಲ ಮಂಡಿಯ ಹಿಂದಿರುವ ಒಂದು ಸುಳಿ 'ಬೇಡಿ ಸುಳಿ ಅಥವಾ ಜಿರಳಿ ಸುಳಿ'. ಹಿಂಗಾಲ ಚಪ್ಪೆಯ ಕೆಳಗಿರುವ ಒಂದು ಸುಳಿ' ವಕ್ರ ಸುಳಿ'. ಬಾಲದ ಮೇಲಿರುವ ಒಂದು ಸುಳಿ 'ಬಾರಿಗಿ ಸುಳಿ' ಎರಡು ಕಣ್ಣುಗಳ ಮಧ್ಯೆ ಒಂದು ಸುಳಿ ಇದ್ದರೆ 'ಮುಕ್ಕಣ್ಣ ಸುಳಿ' ಎನ್ನುವರು" (ಡಾ. ಎಂ.ಎನ್. ವಾಲಿ ೧೯೮೯ :೬).

ಕುಂಕುಮ ಸುಳಿ, ನಾಮ ಸುಳಿ, ಎದೆಯ ಸುಳಿಗಳು, ಬೆಟ್ಟದ ಸುಳಿ, ಅಥವಾ ಗೋಪುರ ಸುಳಿ, ರಾಜಾ ಸುಳಿ, ದಾವಣಿ ಸುಳಿ, ಗದ್ದಿಗೆ ಸುಳಿ, ಹೊಕ್ಕಳ ಸುಳಿ, ನಾಗರ ಹೆಡೆಯಂತಿರುವ ಬಾರಿಗೆ ಸುಳಿಯ ದನಗಳು ಶುಭ ಫಲವನ್ನು ನೀಡುವವು. ಇನ್ನುಳಿದ ಸುಳಿ ಇರುವ ದನಗಳು ಅಶುಭ ಫಲ ನೀಡುವವು.

ರಘುನಾಥ ಕೊಡಗಹಳ್ಳಿ ಅವರು ಜಾನಪದ ಜಗತ್ತು ಸಂಚಿಕೆಯಲ್ಲಿ ಮಂಡ್ಯ ಪರಿಸರದಲ್ಲಿರುವ ದನಗಳ ಸುಳಿಗಳನ್ನು ಗುರುತಿಸಿದ್ದಾರೆ. ಅವರು ತಮ್ಮ 'ಸುಳು ಮತ್ತು ಜನಪದ ನಂಬಿಕೆಗಳು' ಎಂಬ ಲೇಖನದಲ್ಲಿ ದನದ ಮೈಯಲ್ಲಿ ಒಟ್ಟು ೨೧ ಸುಳಿಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ 'ರಾಜಾ ಸುಳಿ, ದಾವಣಿ ಸುಳಿ, ಮಂತ್ರಿ ಸುಳಿ, ವಕ್ರಸುಳಿ, ಪಾತಾಳ ಸುಳಿ, ಕೀಲುಸುಳಿ, ಚೊಟ್ಟದ ಬಡಿಗೆ ಸುಳಿ, ಗುಂಡಿಗೆ ಸುಳಿ, ಮುಕ್ಕಣ್ಣ ಸುಳಿ, ಬಾಸಿಂಗ ಸುಳಿ, ಬೇಡಿಸುಳಿ, ವಕ್ರಸುಳಿ, ನಗಾರಿ ಸುಳಿ, ಚತ್ರು ಸುಳಿ, ಮಸಕದ ಸುಳಿ, ಹೀನಸುಳಿ, ಹೊಕ್ಕಳಸುಳಿ, ಕಂಕುಳ ಸುಳಿ, ಬೆಟ್ಟದ ಸುಳಿ, ನಾಗರ ಸುಳಿ ಮತ್ತು ಮಡಿಕೆ ಸುಳಿ' ಎಂದು ಗುರುತಿಸುತ್ತಾರೆ. (೧೯೮೬; ೩-೪).

‘ರಾಜಾ ಸುಳಿ’ ಸುಳಿಗಳಲ್ಲಿ ಅತ್ಯಂತ ಶ್ರೇಷ್ಟವಾದುದು. ‘ಉತ್ತಮ ವಂಶಿಕನ ಹೊಟ್ಟೆಯಲ್ಲಿ ವಂಶಿಕ ಹುಟ್ಟಿದ ಹಾಗೆ ‘ ಎಂದು ರಾಜಾಸುಳಿಯ ಬಗ್ಗೆ ಜನಪದರ ನಾಣ್ಣುಡಿಯಿದೆ. ಭುಜದ ಹಿಂದೆ ಒಂದು ಗೇಣು ದೂರದಲ್ಲಿ ಅಂದರೆ, ನಡುಬೆನ್ನಮೇಲೆ ಇದು ಕಂಡುಬರುತ್ತದೆ. ಈ ಸುಳಿ ಇರುವ ಪಶುವಿಗೆ ಬೇಡಿಕೆ ಹೆಚ್ಚು. ‘ದಾವಣಿ ಸುಳಿ’ ಪಶುದೇಹದಲ್ಲಿ ಕಂಡುಬರುವ ವಿಶಿಷ್ಟ ಸುಳಿಗಳಲ್ಲಿ ಒಂದು. ಅಪರೂಪಕ್ಕೆ ಕೆಲವೊಂದು ಪಶುಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. ದಾವಣಿ ಸುಳಿ ಇರುವ ಹಸು-ಎತ್ತುಗಳು ಮನೆಯಲ್ಲಿ ಹುಟ್ಟಿದರೆ ‘ಕರೇವು ವರ್ಷಂಬತ್ತು ಕಾಲ ಇರುತ್ತದೆ’ ಹಾಗೂ ‘ದನಗಳು ಸಾಲುಸಾಲಾಗಿ ಹುಟ್ಟುತ್ತವೆ’ ಎಂದು ನಮ್ಮ ಜನಪದರು ನಂಬಿದ್ದಾರೆ. ಈ ಸುಳಿ ರಾಜಾಸುಳಿಯ ಮುಂದಕ್ಕೆ ಬೆನ್ನಿನ ಮೇಲೆ ಕಾಣಿಸಿಕೊಳ್ಳುತ್ತದೆ. ‘ಮಂತ್ರಿಸುಳಿ’ಯು ರಾಜಾಸುಳಿ ಮತ್ತು ದಾವಣಿಸುಳಿ ಇವೆರಡರ ಮಧ್ಯೆ ಕಂಡುಬರುತ್ತದೆ. ಈ ಸುಳಿಯ ಬಗ್ಗೆ ವಿಶಿಷ್ಟ ಅಭಿಪ್ರಾಯವೇನಿಲ್ಲ. ‘ವಕ್ರ ಸುಳು’ ಇದನ್ನು ಗಲ್ಲದ ಸುಳಿ ಎಂತಲೂ ಕರೆಯುತ್ತಾರೆ. ಹಿಂಗಾಲ ಚಪ್ಪೆಯ ಕೆಳಗೆ ಕಂಡುಬರುತ್ತದೆ. ಈ ಸುಳಿ ಇರುವ ಪಶು ಹೊಂದಿದ ಮಾಲೀಕನಿಗೆ ಗ್ರಹಚಾರ ವಕ್ಕರಿಸಿದ ಹಾಗೆ ಎನ್ನುತ್ತಾರೆ. ‘ಪಾತಾಳ ಸುಳಿ’ ಯು ಅಪರೂಪವಾಗಿ ಕಂಡು ಬರುವ ಸುಳಿಗಳಲ್ಲಿ ಒಂದು. ಪಶುವಿನ ಭುಜದ ಮೇಲೆ ಕಂಡು ಬರುತ್ತದೆ. ಇಂತಹ ಪಶು ಮನೆಯಲ್ಲಿ ಹುಟ್ಟಿದರೆ ಕೂಡಲೇ ಮಾರುವ ವ್ಯವಸ್ಥೆಯನ್ನು ಮಾಡುತ್ತಾರೆ. ಏಕೆಂದರೆ ‘ಪಾತಾಳಕ್ಕೆ ಹೋದಂಗೆ’ ಎಂಬ ನಂಬಿಕೆಯಿದೆ.

‘ಕೀಲುಸುಳಿ’ಯು ಕೂಡ ವಿಶೇಷವಾಗಿ ಕಂಡುಬರುವ ಸುಳಿ, ಪಶುವಿನ ಹಿಂಗಾಲ ಕೀಲಿನ ಭಾಗದಲ್ಲಿ ಕಂಡು ಬರುತ್ತದೆ. ‘ಕೀಲು ಸುಳಿ’ ಪಶುವಿದ್ದರೆ ‘ಕೀಲು ಮುರಿದಂಗೆ’ ಎನ್ನುತ್ತಾರೆ. ವ್ಯವಸಾಯಕ್ಕೆ ನಾಲಾಯಕ್ಕಾಗಿರುವ ಈ ಪಶುಗಳು ವ್ಯಾಪಾರ ದೃಷ್ಟಿಯಿಂದ ಕಡಿಮೆ ಬೆಲೆಯುಳ್ಳದ್ದಾಗಿರುತ್ತದೆ. ನೋಡಲು ದಷ್ಟಪುಷ್ಟವಾಗಿದ್ದರೂ ಈ ಸುಳಿ ಇರಬಾರದೆಂಬುದು ಹಳ್ಳಿಗರ ವಾದ. ‘ಚೊಟ್ಟದ ಬಡಿಗೆ ಸುಳಿ’ ಕೆಲವು ಪಶುಗಳಲ್ಲಿ ನೊಗವನ್ನು ಇಡುವಂತಹ ಸ್ಥಳದಲ್ಲಿ ಅಂದರೆ ಹೆಗಲ ಮೇಲೆ ಈ ಸುಳಿಯನ್ನು ನೋಡಬಹುದು. ಇದು ಇರಬಾರದೆಂಬ ನಂಬಿಕೆ ಇದೆ. ‘ಗುಂಡಿಗೆ ಸುಳಿ’ ಯು ಬಹುಪಾಲು ಪಶುಗಳಲ್ಲಿ ಕಂಡುಬರುವುದರಿಂದ ಇದನ್ನು ಖಾಯಂ ಸುಳಿಗಳ ಗುಂಪಿಗೆ ಸೇರಿಸಬಹುದು. ಎದೆಗೂಡಿನ ಬಳಿ ಕಂಡುಬರುವುದರಿಂದ ಇದನ್ನು ಗುಂಡಿಗೆ ಸುಳಿ ಎನ್ನುತ್ತಾರೆ. ಗುಂಡಿಗೆಯ ಸ್ಥಳವನ್ನು ಬಿಟ್ಟು ಸ್ವಲ್ಪ ಅದಲು ಬದಲಾದರೂ ಪಶುವಿನ ಬೆಲೆಯಲ್ಲಿ ಏರಿಳಿತವುಂಟಾಗುತ್ತದೆ. ದೊಡ್ಡ ಹುಟ್ಟಿನ ದನಗಳಲ್ಲಿ ಕಂಡು ಬರುವ ಈ ಸುಳಿ ‘ಕೆಟ್ಟದಂತೂ ಅಲ್ಲ’ ‘ಮುಕ್ಕಣ್ಣ ಸುಳಿ’ ಪಶುವಿನ ಎರಡು ಕಣ್ಣುಗಳ ಮಧ್ಯೆ ಇರುತ್ತದೆ. ಇಂತಹ ಪಶುವನ್ನು ಹೊಂದಿದವನಿಗೆ ‘ಕೇಡು ತಪ್ಪಿದ್ದಲ್ಲ’ ಎಂದು ನಂಬಿಕೆ ಇದೆ. ‘ಬಾಸಿಂಗ ಸುಳಿ’ ಯನ್ನು ‘ಪಟ್ಟ ಸುಳಿ’ ಎಂತಲೂ ಕರೆಯುತ್ತಾರೆ ಮದುವೆಯಾದವರು ಈ ಸುಳಿಯುಳ್ಳ ಪಶುಕಟ್ಟಿದರೆ ಒಳ್ಳೆಯದು, ಮದುವೆಯಾಗದವರು ಕಟ್ಟಿದರೆ ಕೆಟ್ಟದ್ದು ಎಂಬ ನಂಬಿಕೆಯುಂಟು. ‘ಬಾಸಿಂಗ ಸುಳಿ’ ದನ ತಂದವನು ಎರಡು ಮದುವೆಯಾದವಳನ್ನು ಕಟ್ಟಿಕೊಂಡ ಹಾಗೆ’ ಎನ್ನುತ್ತಾರೆ. ಈ ಪಶುಗಳು ಚಂಗಲು ಗುಣವನ್ನು ಹೊಂದಿರುತ್ತವಾದ್ದರಿಂದ ಬೆಲೆ ಕಡಿಮೆ. ಅಲ್ಲದೆ ಬಲಹೀನವೂ ವ್ಯವಸಾಯಕ್ಕೆ ಅನರ್ಹವೂ ಎಂದು ಹೇಳುತ್ತಾರೆ.

‘ಬೇಡಿ ಸುಳಿ’ಯನ್ನು ‘ಸಂಕಾಲ ಸುಳಿ’ ಎಂತಲೂ ಕರೆಯುತ್ತಾರೆ. ಇಂತಹ ದನ ಕಟ್ಟಿದರೆ ‘ಬೇಡಿ ಹಾಕಿಸಿಕೊಂಡು ಕುಂತಾಗೆ’ ಎನ್ನುತ್ತಾರೆ. ಮುಂಗಾಲು ಮಂಡಿಯ ಹಿಂಭಾಗದಲ್ಲಿ ಈ ಸುಳಿ ಕಂಡು ಬರುತ್ತದೆ. ‘ವಕ್ರ ಸುಳಿ ದನ ತಂದು ಪೊರದಾಡ್ತಾವ್ನೆ ನೋಡು’ ಎಂಬ ಮಾತು ಹಳ್ಳಿಗಳಲ್ಲಿ ಕೇಳಿಬರುವುದುಂಟು. ಬಾಲದ ದಿಂಡಿನ ಮಧ್ಯದಲ್ಲಿ ಕಂಡುಬರುವ ಈ ಸುಳಿ ಇದ್ದರೆ ವ್ಯವಸಾಯದಲ್ಲಿ ಜಂಜಾಟವೇ ಜಾಸ್ತಿ ಎಂದು ನಂಬಿದ್ದಾರೆ. ‘ನಗಾರಿ ಸುಳಿ’ ಯನ್ನು ‘ಜೋಡಿ ಸುಳಿ’ ಎಂತಲೂ ಕರೆಯುತ್ತಾರೆ. ರಾಜಾ ಸುಳಿಯ ಅಕ್ಕಪಕ್ಕದಲ್ಲಿ ಸಮಾನಾಂತರವಾಗಿ ಕಂಡು ಬರುವ ಈ ಸುಳಿ ಆರಂಭಕಾರನಿಗೆ ಒಳ್ಳೆಯದಲ್ಲ. ‘ಚತ್ರುಸುಳಿ’ ಯನ್ನು ‘ಕೊಡೆಯ ಮೇಲೆ ಕೊಡೆ’ ಎನ್ನುತ್ತಾರೆ. ಮುಕ್ಕಣ್ಣ ಸುಳಿಯಿಂದ ಮೇಲಕ್ಕಿದ್ದು ಆಕಾರದಲ್ಲಿ ಛತ್ರಿಯ ರೂಪದಲ್ಲಿರುವುದರಿಂದ ಈ ಹೆಸರು ಬಂದಿದೆ. ನೋಡಿದ ಕೂಡಲೇ ಎಲ್ಲರಿಗೂ ಎದ್ದು ಕಾಣುವುದರಿಂದ ಪಶುವಿನ ಬೆಲೆಗೆ ಧಕ್ಕೆ. ಕೆಟ್ಟ ಸುಳಿಗಳಲ್ಲಿ ಇದೂ ಒಂದು. ‘ಮಸಕದ ಸುಳಿ’ ಯ ದನ ಕಟ್ಟಿದರೆ ಯಾವಾಗಲೂ ‘ಮಸೆದಾಟ ಜಾಸ್ತಿ’ ಎಚ್ಚರ ಇಟ್ಟ ಹಾಗೆ ಎಂದು ನಂಬಿದ್ದಾರೆ. ಎರಡು ಕೊಂಬುಗಳ ಮಧ್ಯೆ ಕಂಡುಬರುವ ಈ ಸುಳಿ ಇರುವ ದನಗಳಿಗೆ ರೋಷ ಜಾಸ್ತಿ.

'ಹೀನ ಸುಳಿ'ಯು ದನಗಳ ತೊಡೆಯ ಮೇಲೆ ಕಂಡು ಬರುತ್ತದೆ. ಈ ಸುಳಿಯಿರುವ ದನ ಕಟ್ಟಿದರೆ 'ಹಣ ನಾಶವಾಗಿ ಬೇರೆಯವರ ಅಪವಾದಕ್ಕೆ ಗುರಿಯಾಗುತ್ತಾರೆ' ಎಂಬ ನಂಬಿಕೆ ಇದೆ. 'ಹೊಕ್ಕಳ ಸುಳಿ' ಪಶುವಿನ ಅಡಿಹೊಟ್ಟೆಯ ಹೊಕ್ಕುಳ ಭಾಗದಲ್ಲಿ ಕಂಡುಬರುವುದು. ಇದು ಇದ್ದರೆ ತಪ್ಪೇನಿಲ್ಲ. ' ಕಂಕುಳ ಸುಳಿ' ಗುಂಡಿಗೆಯ ಅಕ್ಕಪಕ್ಕದಲ್ಲಿ ಮುಂಗಾಲ ಹತ್ತಿರ ಕಂಡುಬರುತ್ತದೆ. ಈ ಸುಳಿ ಇದ್ದರೆ ತಪ್ಪೇನಿಲ್ಲ. 'ಬೆಟ್ಟದ ಸುಳಿ' ಯನ್ನು 'ಗೋಪುರ ಸುಳಿ' ಎಂತಲೂ ಕರೆಯುತ್ತಾರೆ. ದನಗಳ ಭುಜನ ಮೇಲೆ ಕಂಡುಬರುವ ಈ ಸುಳಿ ಒಳ್ಳೆಯದು ಎನ್ನುತ್ತಾರೆ. 'ನಾಗರ ಸುಳಿ' ಯು ಬಾಲದ ಬಲಭಾಗದ ಮಗ್ಗುಲಲ್ಲಿ ಕಂಡು ಬಂದು ನಾಗರಹಾವಿನ ಹೆಡೆಯಂತೆ ಕಂಡು ಬರುತ್ತದೆ. ಈ ಪಶುಗಳು ನಾಗರ ಹಾವಿನಂತೆ ಭುಸುಗುಟ್ಟುತ್ತವೆ. ಕೆಟ್ಟ ಸುಳಿಗಳಲ್ಲಿ ಇದೂ ಒಂದು. 'ಮಡಿಕೆ ಸುಳಿ' ಯ ತೊಡೆಯ ಮೇಲೆ ಕಂಡು ಬರುತ್ತದೆ. ಈ ಸುಳಿಯ ಬಗ್ಗೆ ವಿಶೇಷ ನಂಬಿಕೆಯೇನು ಇಲ್ಲ.

## ಹೆಣ್ಣು : ಸುಳಿ, ಲಕ್ಷಣ

ಪ್ರಾಚೀನ ಯುಗ, ಮಧ್ಯಯುಗ ಮತ್ತು ಆಧುನಿಕ ಯುಗಗಳಲ್ಲಿ ಸ್ತ್ರೀಯರ ಸ್ಥಾನಮಾನಗಳು ಏರು ಪೇರಾಗಿರುವುದು ಕಂಡುಬರುತ್ತದೆ. ಒಂದು ಕಾಲದಲ್ಲಿ ಸ್ತ್ರೀ ದೇವರಿಗೆ ಸಮೀಪವಾದ ಸ್ಥಾನಮಾನವನ್ನು ಪಡೆದು ಪೂಜಿಸಲ್ಪಟ್ಟಿದ್ದಾಳೆ. ಮತ್ತೊಮ್ಮೆ ಪುರುಷನ ಕೈಗೊಂಬೆಯಾಗಿ ಪರಿಗಣಿಸಲ್ಪಟ್ಟಿದ್ದಾಳೆ. ಇನ್ನೊಮ್ಮೆ ಪುರುಷನಿಗೆ ಸರಿಸಮಾನವಾಗಿ ಗೌರವಿಸಲ್ಪಟ್ಟಿದ್ದಾಳೆ.

ಕ್ರಮೇಣ ಹೆಣ್ಣನ್ನು ಉಪಭೋಗದ ವಸ್ತುವನ್ನಾಗಿ ಪರಿಗಣಿಸಲ್ಪಟ್ಟು, ಆಕೆಯನ್ನು ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮದುವೆ ಮಾಡಿಕೊಳ್ಳುವಾಗ ಮತ್ತು ಶುಭಕಾರ್ಯಗಳಲ್ಲಿ ಭಾಗವಹಿಸುವಾಗ ಅಂಗ ಸಾಮುದ್ರಿಕೆ, ಆಕೆಯ ಆಕಾರ, ಕೂದಲು, ಸುಳಿ, ಮುಂತಾದ ದೇಹದ ಪ್ರತಿಯೊಂದು ಅಂಗಗಳನ್ನು ಪರಿಶೀಲಿಸಿ ಆರಿಸುತ್ತಾರೆ. ಜೊತೆಗೆ ದೇಹದ ಆಕಾರ, ಕೂದಲು, ಸುಳಿ, ಅಂಗಸಾಮುದ್ರಿಕೆಗಳ ಬಗೆಗೆ ತಮ್ಮದೇ ಆದ ಕೆಲವೊಂದು ನಂಬಿಕೆಗಳನ್ನು ಹೊಂದಿದ್ದಾರೆ. ಕೆಲವೆಡೆ ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುವುದುಂಟು. ವಿಶೇಷವಾಗಿ ಮದುವೆ ಮಾಡಿಕೊಳ್ಳುವ ಪೂರ್ವದಲ್ಲಿಯೇ ಅನುಭವಿ ಹಿರಿಯರಿಂದ ಹೆಣ್ಣಿನ ದೇಹದ ಅಂಗಾಂಗಗಳ ಪರೀಕ್ಷೆ ಮಾಡಿಸುವ ರೂಢಿ ಬಂತು. ಈ ಅನುಭವಿ ಹಿರಿಯ ಹೆಂಗಸರು ಊರೂರಿಗೆ ಇರುತ್ತಿದ್ದು, ಯಾರಾದರೂ ಹೆಣ್ಣು ನೋಡಲು ಹೋಗುವಾಗ ಆ ಹಿರಿಯ ಹೆಂಗಸರನ್ನು ಜೊತೆಗೆ ಕರೆದುಕೊಂಡು ಹೋಗುತ್ತಿದ್ದರು. ಹೆಣ್ಣಿನ ಅಂಗಾಂಗಗಳ ಆಧಾರ ಹಾಗೂ ಆಕೆಯ ಮೈಮೇಲಿನ ರೋಮ, ಸುಳಿಗಳು ಮುಂತಾದವುಗಳ ಆಧಾರದ ಮೇಲೆ ಪತಿವ್ರತಾ ಸ್ತ್ರೀ, ವಿಧವಾಸ್ತ್ರೀ, ದರಿದ್ರಸ್ತ್ರೀ, ಭಾಗ್ಯವತೀಸ್ತ್ರೀಗಳೆಂದು ವಿಭಾಗೀಕರಣ ಮಾಡಿಕೊಳ್ಳುವರು. ಅಂಗಾಂಗಗಳನ್ನು ನೂಲು ಹಿಡಿದು ಅಳತೆಯನ್ನು ನೋಡುವ ಕ್ರಮವು ಸಹ ಇದೆ.

ಸ್ತ್ರೀಯಳ ತಲೆಯು ದೊಡ್ಡದಿದ್ದರೆ ದುರ್ಮಾರ್ಗಿಯೂ, ಹಿಂಭಾಗದಲ್ಲಿ ಎತ್ತರವಿದ್ದರೆ ಪತಿಗೆ ಕೇಡು ಬಯಸುವವಳೂ, ತಲೆಯಲ್ಲಿ ಕೂದಲು ಸುಳಿಯಿದ್ದರೆ ಮುಂಡೆಯೂ, ತಲೆಯ ಕೂದಲು ಬಿರುಸಾಗಿದ್ದರೆ ಜಗಳಗಂಟಿಯೂ, ಎದುರು ಕೂದಲಿದ್ದರೆ ಹಾದರಗಿತ್ತಿಯೂ, ಮುಂಡೆಯೂ ಆಗುವಳು. ಕೂದಲು ದೀರ್ಘವಾಗಿಯೂ, ಮೃದುವಾಗಿಯೂ, ಕಪ್ಪಾಗಿಯೂ ಇದ್ದರೆ ಭಾಗ್ಯವಂತಿ. ಹಣೆಯು ಸಮವಾಗಿದ್ದರೆ ಸಂಪತ್ತುಶಾಲಿಯು, ಅಗಲವಿದ್ದರೆ ಮಾವನಿಗೂ, ಗಂಡನಿಗೂ ವಿರೋಧಿಯೂ, ಹಣೆಯಲ್ಲಿ ಸುಳಿಯಿದ್ದರೆ, ವ್ಯಭಿಚಾರಿಯೂ, ಮುಂಡೆಯೂ ಆಗುವಳು. ಹಣೆಯಲ್ಲಿ ಮಚ್ಚೆಯಂಥ ತಿಲಕವಿದ್ದರೆ ಪ್ರಥಮ (ಚೊಚ್ಚಿಲ) ದಲ್ಲಿ ಉತ್ತಮ ಗಂಡು ಮಗುವನ್ನು ಹಡೆಯುವವಳು ಆಗುವಳು.

ಹುಬ್ಬುಗಳು ವಿಶೇಷ ಅಗಲವಿದ್ದರೆ ಬಿದಿಗೆಯ ಚಂದ್ರನಂತೆ, ಬೊಗ್ಗಿದ್ದರೆ ಐಶ್ವರ್ಯವಂತೆಯೂ, ಗಂಟುಗಟ್ಟಿದಂಥವು ಇದ್ದರೆ ಹಾದರಗಿತ್ತಿಯೂ, ದರಿದ್ರೆಯೂ ಹುಬ್ಬುಗಳಲ್ಲಿ ಸುಳಿಯಿದ್ದರೆ ಕುಲಕಂಟಕಿಯೂ ಆಗುವಳು.

ಕಣ್ಣುಗಳು ತಾವರೆಯ ಎಸಳಿನಂತಿದ್ದರೆ ಸುಮಂಗಲೆಯೂ, ಸೊಟ್ಟಾಗಿದ್ದರೆ ದುಷ್ಟೆಯೂ, ಗುಂಡಾಗಿದ್ದರೆ ಗಂಡನನ್ನು ಹಾಳು ಮಾಡುವವಳೂ, ತಗ್ಗಾಗಿದ್ದರೆ ದುರ್ಮಾರ್ಗಿಯೂ, ಹಳದಿ ವರ್ಣವಿದ್ದರೆ ಹಾದರಗಿತ್ತಿಯೂ, ಕಪಿಲ ವರ್ಣವಿದ್ದರೆ ಕಷ್ಟಜೀವಿಯೂ, ಬೆಕ್ಕಿನ

ಕಣ್ಣಿನಂತಿದ್ದರೆ ಪುಕ್ಕೆಯೂ, ಮೇಲ್ ಗಣ್ಣಿದ್ದರೆ ಮೇಲಾದ ಧನವಂತಿಯೂ, ಬಾರು ಗಣ್ಣಿದ್ದರೆ ದೂರದೃಷ್ಟಿಯೂ, ಕಡೆನೋಟದವಳು, ಬಡವಿಯೂ, ಚಂಚಲ ನೋಟದವಳು ಹಂಚಿಕೆಯಿಂದ ಹಾದರ ಮಾಡುವವಳು ಆಗುವಳು.

ಕಿವಿಗಳು ಮೆತ್ತಗಿದ್ದರೆ ರತ್ನಾಭರಣಗಳನ್ನು ಧರಿಸುವವಳು, ಗಟ್ಟಿ ಇದ್ದರೆ ಶ್ರೇಷ್ಠವಾದ ಬಂಗಾರದ ಒಡವೆಗಳನ್ನು ಧರಿಸುವವಳೂ ಆಗುವಳು. ಕಿವಿಗಳು ದೀರ್ಘವಾಗಿ ವಿಶಾಲವಾಗಿದ್ದರೆ ಭಾಗ್ಯವತಿ, ವಕ್ರವಾಗಿದದರೆ ದರಿದ್ರಳು, ಮೂಗು ಚಿಕ್ಕದಾಗಿ ಸಮವಾಗಿದ್ದರೆ ಸದ್ಗುಣವುಳ್ಳವಳು, ಉದ್ದವಾಗಿಯೂ ದೊಡ್ಡವಾಗಿಯೂ ಇದ್ದರೆ ದುರ್ಗಣವುಳ್ಳವಳು, ಸಂಪಿಗೆಯ ತೆನೆಯಂತಿದ್ದರೆ ಸುಮಂಗಲೆಯೂ, ಸೊಟ್ಟಗಿದ್ದರೆ ಕೆಟ್ಟ ನಡತೆಯುಳ್ಳವಳು, ಎಡಮೂಗಿನ ಮಚ್ಚೆಯಿದ್ದರೆ ಧನವಂತಿಯೂ ಮೂಗಿನ ಹೊರಳಿಯಲ್ಲಿ ಸುಳಿಯಿದ್ದರೆ ದುರುಳೆಯು ಆಗಿರುತ್ತಾಳೆ.

ಬಾಯಿ ಬಹಳ ದೊಡ್ಡದಿದ್ದರೆ ಅಡ್ಡದಾರಿ ಹಿಡಿಯುವವಳು, ತೆರವಾಯಿಯಿದ್ದರೆ ಗುರು ಹಿರಿಯರಿಗೆಲ್ಲ ಹೊರತಾಗುವವಳೂ ಮುಗುಳ್ನಗೆಯವಳು, ಹಾದರಗಿತ್ತಿಯೂ ಆಗುವಳು, ಹಲ್ಲುಗಳು ಸಮವಾಗಿದ್ದು ಚಂದವಿದ್ದರೆ ಸುಖಿಯೂ, ಡೊಂಕು ಡೊಂಕಾಗಿದ್ದರೆ ದುಷ್ಟೆಯೂ, ಬಿಡಿಬಿಡಿಸಿ ಇಟ್ಟಂತಿದ್ದರೆ ಬಡವೆಯೂ, ಸುಟ್ಟ ಹಾಗಿದರೆ ಕೆಟ್ಟವಳೂ, ಶುಭ್ರವಾಗಿಯೂ ಚಿಕ್ಕದಾಗಿಯೂ ಸಮವಾಗಿದ್ದರೆ ಸಂಪತ್ತುಳ್ಳವಳು, ದೊಡ್ಡದಾಗಿಯೂ ಹೆಚ್ಚು ಕಡಿಮೆಯಾಗಿಯೂ ಇದ್ದರೆ ಕಷ್ಟ ಪಡುವವಳು ಆಗುವಳು. ನಾಲಿಗೆಯು ದೊಡ್ಡದಾಗಿದ್ದರೆ ಕುಲಹೀನೆಯೂ, ಹಳದಿ ವರ್ಣವಿದ್ದರೆ ದುಷ್ಟಳೂ ಆಗುವಳು.

ಕುತ್ತಿಗೆಯು ಶಂಖದಂತಿದ್ದರೆ ಅತ್ತೆ, ಮಾವ, ಭಾವ, ಮೈದುನರಿಗೆಲ್ಲ ಹಿತಸ್ಥಳೂ, ಧನವಂತಳು, ದುಂಡಾಗಿಯೂ, ನುಣುಪಾಗಿಯೂ, ಮೂರು ಮಡಿಕೆಗಳುಳ್ಳದ್ದಾಗಿಯೂ ಇದ್ದರೆ ಸಂಪತ್ತುಳ್ಳವಳು. ಅತಿ ದೀರ್ಘವಾಗಿಯೂ, ಅತಿ ಕುರಚಾಗಿಯೂ ಇದ್ದರೆ ದರಿದ್ರಳು. ಎತ್ತರವಿದ್ದರೆ ವಂಶನಾಶಿನಿಯೂ, ಸಣ್ಣದಾಗಿದ್ದರೆ ಹಣವಂತಿಯೂ, ಬಹಳ ಸಣ್ಣದಾಗಿದ್ದರೆ ಬಂಜೆಯೂ ಆಗುವಳು. ಕುತ್ತಿಗೆಯಲ್ಲಿ ಸುಳಿ ಇದ್ದರೆ ಬಂಜೆಯೂ, ಮಚ್ಚೆಯಿದ್ದರೆ ಚೊಚ್ಚಲ ಗಂಡುಮಗುವನ್ನು ಹಡೆಯುವವಳು ಆಗುವಳು. ಸ್ವರವು ಕೋಗಿಲದಂತಿದ್ದರೆ ಸುಖವಂತೆಯೂ, ಕಾಗೆಯಂತಿದ್ದರೆ ಮುಂಡೆಯೂ, ಬೆಕ್ಕಿನಂತಿದ್ದರೆ ಕಳ್ಳಿಯೂ ಆಗುವಳು.

ಭುಜಗಳು ಗಡತರವಿದ್ದರೆ ದುಃಖಿಯೂ, ಅತಿ ಚಿಕ್ಕದಿದ್ದರೆ ವಿಧವೆಯೂ ಆಗುವಳು. ಭುಜದಲ್ಲಿ ಕೂದಲಿದ್ದರೆ ದರಿದ್ರೆಯೆಂದು ತಿಳಿಯಬೇಕು. ಹೆಗಲು ಎತ್ತರವಿದ್ದರೆ ಒಡಹುಟ್ಟಿದವರಿಗೆ ಕೇಡು, ಅಗಲವಿದ್ದರೆ ಬಳಗವಂತಿಯು, ಹೆಗಲ ಮೇಲೆ ಕೂದಲಿದ್ದರೆ ಹಾದರಗಿತ್ತಿಯೂ, ತುಡುಗಿಯೂ, ಬಡವಿಯೂ ಆಗುವಳು. ಹೆಗಲ ಮೇಲೆ ಸುಳಿಯಿದ್ದರೆ ಮುಂಡೆ ಆಗುವಳು. ಬಗಲಲ್ಲಿ ಕೂದಲಿದ್ದರೆ ದುಃಖಿಯೂ, ಮಚ್ಚೆಯಿದ್ದರೆ ವಂಶನಾಶಿನಿಯೂ ಆಗುವಳು.

ಮೊಲೆಗಳು ಗುಂಡಾಗಿ ಎರಡೂ ಸಮವಿದ್ದರೆ ಪುತ್ರ ಪೌತ್ರಾಭಿಯುಳ್ಳವಳೂ, ಬಲಮೊಲೆ ಎಡಮೊಲೆಗಿಂತ ಸಣ್ಣದಿದ್ದರೆ ಭಾಗ್ಯವತಿಯೂ, ಬಲಮೊಲೆ ಎಡಮೊಲೆಗಿಂತ ದೊಡ್ಡದಿದ್ದರೆ ಬಡವೆಯು, ಉದ್ದವಾಗಿದ್ದರೆ ಜಿದ್ದ ನಡೆಸುವವಳು, ಮೊಲೆಯಲ್ಲಿ ಕೂದಲು ಬೆಳೆದಿದ್ದರೆ ಮುಂಡಯಾಗುವಳು.

ಪಕ್ಕೆಗಳು ಬಡಕಾಗಿದ್ದರೆ ಗಂಡನಿಗೆ ಅರಿಷ್ಟವು, ಅಲ್ಲಿ ಕೂದಲು ಬೆಳೆದಿದ್ದರೆ ಮುಂಡೆಯೂ ಹಾದರಗಿತ್ತಿಯೂ ಆಗುವಳು, ಕೈಗಳೆರಡೂ ಸಮವಾಗಿದ್ದು ಶೋಭಿಸುತ್ತಿದ್ದರೆ ಧನವಂತಿಯೂ, ಸಮವಾಗಿಲ್ಲದಿದ್ದರೆ ದುಃಖಿಯೂ ಆಗುವಳು, ಸೊಟ್ಟಾಗಿಯೂ ಕಠಿಣವಾಗಿಯೂ ಇದ್ದರೆ ದುರಾಚಾರಿಣಿಯೂ. ಅಂಗೈಗಳು ಮೃದುವಾಗಿದ್ದರೆ ಧನವಂತಿಯೂ, ಬಿರುಸಾಗಿದ್ದರೆ ಬಡವಿಯೂ ಆಗುವಳು.

ಹೊಟ್ಟೆಯು ದೊಡ್ಡದಿದ್ದರೆ ಕಷ್ಟಜೀವಿಯೂ, ಮುಂಡೆಯು, ಕಪ್ಪೆಯ ಹೊಟ್ಟೆಯಂತಿದ್ದರೆ ಸಂಪತ್ತುಶಾಲಿಯೂ, ಜೋಲು ಬಿದ್ದಿದ್ದರೆ ಮಾವನಿಗೆ ಅರಿಷ್ಟ. ಹೊಟ್ಟೆ ಮೃದುವಾಗಿಯೂ ವಿಶಾಲವಾಗಿಯೂ ಇದ್ದರೆ ಸಂತಾನವುಳ್ಳವಳು. ಹೊಟ್ಟೆಯ ಮೇಲೆ ಮೂರು ಮಡಿಕೆಗಳು ಇದ್ದರೆ ಭೋಗವತಿಯಾಗುವಳು.

ಹೊಕ್ಕಳು ವಿಶಾಲವಾಗಿದ್ದು ಎಡದಿಂದ ಬಲಕ್ಕೆ ಸುತ್ತಿದರೆ ಪುತ್ರವತಿಯೂ ಧನವಂತಿಯೂ, ಚಿಕ್ಕದಾಗಿ ಕೂದಲು ಬೆಳೆದಿದ್ದರೆ ಸಂತಾನಹೀನತೆಯೂ, ಹೊಕ್ಕಳಲ್ಲಿ ಸುಳಿ ಇದ್ದರೆ ಹಾದರಗಿತ್ತಿಯೂ ಆಗುವಳು, ಬಲಬಾಗ ತಿರುಗಿ ತಗ್ಗಾಗಿದ್ದರೆ ಆಯುಷ್ಯ ವೃದ್ಧಿಯುಳ್ಳವಳು, ಎಡಭಾಗ ತಿರುಗಿದ್ದರೆ ಆಯುಷ್ಯ ಕ್ಷೀಣವಾಗಿರುತ್ತದೆ.

ನಡುವು ಸಣ್ಣದಿದ್ದರೆ ಶ್ರೀಮಂತ ಮಡದಿಯೂ, ದೊಡ್ಡದಿದ್ದರೆ ಕಡುಬಡವಿಯೂ ಆಗುವಳು, ಸೊಂಟದಲ್ಲಿ ಸುಳಿ ಇದ್ದರೆ ಸಂತಾನಹೀನೆಯಾಗುವಳು, ಬೆನ್ನು ಅಗಲವಿದ್ದರೆ ಬಳಗವಂತಿಯೂ, ಉದ್ದವಾಗಿದ್ದರೆ ಒಡಹುಟ್ಟಿದವರಿಗೆ ಹಾನಿ ತರುವವಳೂ ಆಗುವಳು.

ಯೋನಿಯು ಅಗಲವಾಗಿಯೂ ತ್ರಿಕೋಣಾಕಾರವಾಗಿಯೂ ಇದ್ದರೆ ಸಂಪತ್ ಶಾಲಿಯೂ ಅಲ್ಪಾಯುಷಿಯೂ, ಚಿಕ್ಕದಾಗಿಯೂ, ಉದ್ದವಾಗಿಯೂ, ವಿಶೇಷ ಕೂದಲುಗಳಿಂದ ಮುಚ್ಚಿದ್ದರೆ ಬಡವಿಯೂ, ಕಡುದುಃಖಿಯೂ, ಅರಳೆ ಎಲೆಯಂತಿದ್ದರೆ ಪುಣ್ಯಶಾಲಿಯೂ, ವಿಶಾಲವಾಗಿದ್ದರೆ ಮಾನಗೇಡಿಯೂ, ಕರ್ರಗಿದ್ದರೆ ಅಲ್ಪಾಯುಷಿಯೂ, ಒಣಗಿದಂತಿದ್ದರೆ ಕುಟುಂಬದವರಿಗೆಲ್ಲ ಕಂಟಕಿಯೂ ಆಗುವಳು. ಯೋನಿಯ ಎಡಭಾಗದಲ್ಲಿ ಸುಳಿ ಇದ್ದರೆ ದುಃಖಿಯಾಗುವಳು

ತೊಡೆಗಳು ಆನೆಯ ಸೊಂಡೆಯಂತೆ ಮನೋಹರವಾಗಿದ್ದರೆ ಬಡವನ ಮಡದಿಯೂ, ಗುಂಡಾಗಿದ್ದರೆ ಮುಂಡೆಯೂ, ಸಣ್ಣಾಗಿದ್ದು ಕೂದಲಿದ್ದರೆ ದರಿದ್ರೆಯೂ ಆಗುವಳು. ತೊಡೆಯಲ್ಲಿ ಸುಳಿ ಇದ್ದರೂ, ಮಚ್ಚೆ ಇದ್ದರೂ ಮುಂದೆ ಹಾದರಗಿತ್ತಿ ಆಗುವಳು, ಜಂಘೆಗಳು ಗುಂಡಾಗಿದ್ದು ರೋಮಗಳಿಲ್ಲದೆ ಶೋಭಿಸುತ್ತಿದ್ದರೆ ದನಧಾನ್ಯ ಸಂಪನ್ನೆಯೂ, ಗುಂಡಾಗಿಲ್ಲದೆ ವಿಶೇಷ ಕೂದಲುಗಳಿದ್ದರೆ ಮುಂಡೆಯೂ, ಗಡುತರವಿದ್ದರೆ ಬಡವಿಯೂ ಆಗುವಳು

ಪಾದಗಳು ಶರೀರಕ್ಕನುಸರಿಸಿ ಅಚ್ಚುಕಟ್ಟಾಗಿದ್ದರೆ ಸುಖವಂತೆಯೂ, ದೊಡ್ಡವು ಇದ್ದರೆ ದುಃಖಿಯೂ, ಚಿಕ್ಕವಿದ್ದರೆ ದರಿದ್ರೆಯೂ ಆಗುವಳು, ಪಾದದ ಮೇಲ್ಭಾಗವೂ ಆಮೆಯ ಬೆನ್ನಿನ ಚಿಪ್ಪಿನಂತಿದ್ದರೆ ಪುಣ್ಯವಂತಿಯೂ, ನಿಲ್ಲುವಾಗ ಬಲಗಾಲ ಮೇಲೆ ಭಾರಹಾಕಿ ಎಡಗಾಲು ಸಡಿಲಬಿಟ್ಟು ನಿಂತರೆ ಮುಂಡೆಯೂ, ಎಡಗಾಲ ಮೇಲೆ ಬಾರ ಹಾಕಿ ಬಲಗಾಲು ಸಡಿಲಬಿಟ್ಟು ನಿಂತರೆ ಮುತ್ತೈದೆಯೂ ಆಗುವಳು, ಹಿಮ್ಮಡಿಯು ದುಂಡಾಗಿದ್ದು ಕೆಂಪಗಿದ್ದರೆ ಧನವಂತಿಯೂ ಆಗುವಳು, ಪಾದದ ಬೆರಳುಗಳು ಒಂದಕ್ಕೊಂದು ಹತ್ತಿಕೊಂಡಿದ್ದರೆ ಭೋಗವತಿಯೂ, ಅಂಗಲಾಗಿದ್ದರೆ ದುಃಖಿಯೂ ಆಗುವಳು, ಹೆಬ್ಬೆರಳಿಗಿಂತ ಅದರ ಪಕ್ಕದಲ್ಲಿ ಇರುವ ಬೆರಳು ಉದ್ದವಾಗಿದ್ದರೆ ಮುಂಡೆಯೂ, ನಡೆಯುವಾಗ ಕಿರುಬೆರಳು ಭೂಮಿಗೆ ಹತ್ತದಿದ್ದರೂ ವ್ಯಭಿಚಾರಿ ಆಗುವಳು, ಯಾರ ನಡಿಗೆಯು ಬಿರುಸಾಗಿರುವುದೋ ಅವಳು ಮುಂಡೆಯೆಂದು ತಿಳಿಯಬೇಕು. ಕಾಲಿನ ಉಗುರು ಕೆಂಪಾಗಿಯೂ, ಉದ್ದವಾಗಿಯೂ, ಮೃದುವಾಗಿಯೂ ಇದ್ದರೆ ಸುಖವಂತಳು. ಕರ್ಗಿದ್ದರೆ ಶೋಕವಂತಳು. ಹಳದಿ ಬಣ್ಣವಿದ್ದರೆ ದುಷ್ಟೆಯು, ಬೆಳ್ಳಗಿದ್ದರೆ ಕಷ್ಟವನ್ನು ಅನುಭವಿಸುವವಳೂ, ತಾವರೆ ಬಣ್ಣದಂತಿದ್ದರೆ ಶ್ರೀಮಂತೆಯೂ, ಬೆಳ್ಳಗಿದ್ದರೆ ರೋಗಿಯೂ, ಕರ್ರಗಿದ್ದರೆ ದುಃಖಿಯೂ ಆಗುವಳು. ಅಂಗಾಲದಲ್ಲಿ ಪದ್ಮ ಮೀನಿನ ರೇಖೆಗಳಿದ್ದರೆ ಅರಸನ ಮಡದಿಯೂ ಆಗುವಳು.

ಮಂಡೆಯಲ್ಲಿ ಜೋಡುಸುಳಿ ಇದ್ದರೆ ಗಂಡನು ಸಾಯುವನು. ಹುಬ್ಬಿನ ಮೇಲಿರಲು ಧನಕ್ಷಯ. ಭುಜದಲ್ಲಿದ್ದರೆ ಗಂಡನಲ್ಲಿ ಮೋಹ. ಮೊಲೆಯ ಮೇಲಿರಲು ಮೋಹ ಕೆಡುವಳು, ಮೊಲೆಯ ಮಧ್ಯದಲ್ಲಿರಲು ವೈಧವ್ಯ, ಹೊಟ್ಟೆಯ ಮೇಲಿರಲು ಪತಿವ್ರತೆ. ಹೊಕ್ಕಳದಲ್ಲಿದ್ದರೆ ಭಾಗ್ಯವಂತಿ. ಬೆನ್ನಿನ ಮೇಲೆ ಇದ್ದರೆ ಪೆಟ್ಟು ತಿನ್ನುತ್ತಾಳೆ. ಕುಂಡೆಯ ಮೇಲಿದ್ದರೆ ಸೂಳೆಯಾಗುವಳು. ತೊಡೆಯ ಮೇಲಿದ್ದರೆ ದಾರಿದ್ರ. ಕುಂಡಿಯ ಮೇಲಿದ್ದರೆ ಪರಗೃಹದಲ್ಲಿ ದಾಸಿವೃತ್ತಿ. ಕಂಠದಲ್ಲಿದ್ದರೆ ಸಂತಾನ. ಮುಖದಲ್ಲಿದ್ದರೆ ವೈಧವ್ಯ ಪ್ರಾಪ್ತಿ.

ಚಂದ್ರಬಿಂಬದಂತೆ ಮುಖವು, ಕಮಲದಂತೆ ನೇತ್ರಗಳು, ಅರ್ಧಚಂದ್ರಾಕೃತಿಯಂತೆ ಹಣೆಯೂ, ಬಿಲ್ಲಿನಂತೆ ಹುಬ್ಬುಗಳೂ, ಸಂಪಿಗೆಯ ಮೂಗಿನಂತೆ ಮೂಗು, ದಾಳಿಂಬರ ಬೀಜದಂತೆ ಹಲ್ಲು, ಮೃದುವಾದ ದೇಹ, ಶಂಖದಂತಿರುವ ಕಂಠವು, ಚಿಕ್ಕದಾಗಿರುವ ನಡ,

ಕಮಲಗಳಾಗಿರುವ ಪಾದವು, ಲಜ್ಜಾದಿ ವಿನಯಗಳು, ಧರ್ಮಬುದ್ಧಿ ಇತ್ಯಾದಿ ಲಕ್ಷಣಗಳುಳ್ಳ ಸ್ತ್ರೀಯು ಪುಣ್ಯವಂತೆಯೂ ಪತಿವ್ರತೆಯೂ ಆಗಿ ಸುಮಂಗಲತ್ವ ಪಡೆಯುತ್ತಾಳಂತೆ.

ಅತಿ ಜಾಗ್ರತೆಯಾಗಿ ನಡೆಯುವುದು, ಚಂಚಲವಾದ ಕಣ್ಣುಗಳು, ಕಾಲು ಕಿರುಬೆರಳು ಮೇಲಕ್ಕೆ ಎದ್ದಿರುವುದು, ಜೋತಾಡುತ್ತಿರುವ ಕೂದಲು, ದುರಾಲೋಚನೆ, ಅತಿ ಚಮತ್ಕಾರವಾದ ಮಾತು, ಬಹು ನಾಚಿಕೆಯಿಂದ ನಟಿಸುವುದು, ಇತ್ಯಾದಿ ಲಕ್ಷಣಗಳುಳ್ಳ ಸ್ತ್ರೀಯು ಜಾರಿಣಿಯಾಗುತ್ತಾಳೆ.

ದೊಡ್ಡ ಶರೀರ, ಜೋತಾಡುತ್ತಿರುವ ಕೂದಲು, ದೂರಾಲೋಚನೆ, ಪದೇ ಪದೇ ಮುಖ ಬೆವರುವುದು, ಬಹು ಸಣ್ಣ ಕಣ್ಣುಗಳು, ದುರಾಚಾರ ಕಂಠವು, ದುರಾಚಾರ ಮತ್ತು ಅಶುಚಿ ಈ ಲಕ್ಷಣವುಳ್ಳವರು ದರಿದ್ರ ಸ್ತ್ರೀಯಾಗಿರುತ್ತಾರೆ.

ಬಲಭಾಗದ ಅಂಗಗಳಿಗಿಂತಲೂ ಎಡಭಾಗದ ಅಂಗಗಳು ದೊಡ್ಡದಾಗಿಯೂ, ಕಪ್ಪಾದ ದೀರ್ಘ ಕೇಶಗಳೂ, ಸಂತೋಷವುಳ್ಳ ಮುಖ, ಸಣ್ಣ ಹೊಕ್ಕಳು ಆಳವಾಗಿ ಇರೋಣ, ಮೃದುವಾಗಿಯೂ ಸ್ವಲ್ಪ ದೀರ್ಘವಾಗಿಯೂ ಇರುವ ನಾಲಿಗೆ, ಮೃದುವಾಗಿಯೂ ಕೆಂಪಾಗಿಯೂ ಇರುವ ಬೆರಳು ಇತ್ಯಾದಿ ಲಕ್ಷಣಗಳುಳ್ಳ ಸ್ತ್ರೀ ಭಾಗ್ಯವತಿಯಾಗುತ್ತಾಳೆ.

**ನೂಲು ಹಿಡಿದು ಆಳತೆ ನೋಡುವ ಕ್ರಮ**

ಸ್ತ್ರೀಯರ ಎಡಹಸ್ತದ ಐದು ಬೆರಳುಗಳನ್ನು ಮೂರು ಮೂರು ಕಂಡಿನ ಅಳತೆ ಮತ್ತು ಆಯುಷ್ಯ ರೇಖೆಯ ಬುಡದಿಂದ ಸ್ತ್ರೀಪುರುಷರಿಬ್ಬರ ಕೂಡಿದ ರೇಖೆಯ ಕೊನೆಯವರೆಗೆ ಅಳತೆ. ಈ ಅಳತೆಗಳನ್ನು ನೂಲಿನಿಂದ ಹಿಡಿದು ಒಟ್ಟನ್ನು ಮೂರು ಪಟ್ಟು ಮಾಡಿ ಆಕೆಯ ಎಡಗಾಲಿನ ಹೆಬ್ಬೆಟ್ಟಿನಿಂದ ಕುಂಕುಮ ಧರಿಸತಕ್ಕ ಸ್ಥಳದವರೆಗೆ ಹಿಡಿಯತಕ್ಕದ್ದು. ನೂಲಿನ ಅಳತೆಯು ಕುಂಕುಮ ಧರಿಸತಕ್ಕ ಸ್ಥಳದ ಮೇಲೆ ಬಂದರೆ ಉತ್ತಮ. ಕುಂಕುಮ ಧರಿಸತಕ್ಕ ಸ್ಥಳದಲ್ಲಿ ಬಂದರೆ ಮಧ್ಯಮ. ಕುಂಕುಮದ ಕೆಳಗೆ ಬಂದರೆ ಕನಿಷ್ಠ.

## ಉಪಸಂಹಾರ

ಮಾನವನಿಗೆ ಪ್ರಕೃತಿಯಲ್ಲಿರುವ ಗಾಳಿ, ಬೆಳಕು, ಕಲ್ಲು, ಮಣ್ಣು ಸಸ್ಯ ಮುಂತಾದವುಗಳು ಅತ್ಯಗತ್ಯವಾಗಿ ಬೇಕೆಬೇಕು. ಜೀವನಾವಶ್ಯಕವಾಗಿರುವ ಇವುಗಳ ಬಗೆಗಿನ ಅವನ ಭಾವನೆಗಳು ಅವನ ಬದುಕಿನುದ್ದಕ್ಕೂ ಹರಿದು ಬಂದವು. ಆರ್ಥಿಕ ಅಪೇಕ್ಷೆಗಾಗಿ ಒಂದುಗೂಡಿ ಮನುಷ್ಯ ಹೇಗೆ ದೈಹಿಕವಾಗಿ ಚಲಿಸುತ್ತಾನೆಯೋ, ಮಾನಸಿಕವಾಗಿಯೂ ಚಲಿಸುತ್ತಾನೆ. ಇಂತಹ ಸಂದರ್ಭಗಳಲ್ಲಿ ತಾನು ಪಡೆದ ಜ್ಞಾನದ ಪರಿಣಾಮವಾಗಿ ಹಲವಾರ ನಂಬಿಕೆ ಆಚರಣೆಗಳನ್ನು ಬೆಳೆಸಿಕೊಂಡನು. ದಿನ ನಿತ್ಯದ ಬದುಕೆಗೆ ಬೇಕಾಗುವ ಗಾಳಿ, ನೀರು, ಕಲ್ಲುಗಳ ಬಗೆಗಿನ ಅವನ ಜ್ಞಾನದ ಪರಿಣಾಮವಾಗಿ 'ಸುಳಿ' ಗಳನ್ನು ಸೃಷ್ಟಿಸಿಕೊಂಡನು. ಗಾಳಿ ಮಾನವನ ಜೀವನಕ್ಕೆ ಅತ್ಯಗತ್ಯವಾಗಿ ಬೇಕಾಗಿದ್ದರೂ, ಆ ಗಾಳಿಯು ಸಾಧಾರಣವಾಗಿದ್ದರೆ ಒಳ್ಳೆಯದಾಗಿಯೂ, ತಂಗಾಳಿಯಾಗಿದ್ದರೆ ಜೀವನಕ್ಕೆ ಆಹ್ಲಾದಕರವಾಗಿಯೂ, ಜಾಸ್ತಿಯಾಗಿದದು ಸುಳಿಯುತ್ತಿದ್ದರೆ ಸುಳಿಗಾಳಿಯನ್ನು ಕಂಡುಕೊಂಡನು. ಈ ಸುಳಿಗಾಳಿಯು ಜೀವನಕ್ಕೆ ವ್ಯತ್ಯಯವನ್ನುಂಟು ಮಾಡುವುದಲ್ಲದೆ, ಹಲವಾರು ಸಂದರ್ಭಗಳಲ್ಲಿ ವಿಕೋಪಕ್ಕೆ ಹೋಗಿ ನಾನಾ ರೀತಿಯ ಗಾಳಿಯಲ್ಲಿರುವ ಸುಳಿಯು ಮಾನವನ ಜೀವನಕ್ಕೆ ತೊಂದರೆಯನ್ನು ಕೊಡುವುದೆಂಬ ಕಾರಣಕ್ಕಾಗಿ ಹಾಗೂ ತನ್ನ ಆರ್ಥಿಕ, ಸಾಮಾಜಿಕ ಜೀವನಕ್ಕೆ ಏರುಪೇರನ್ನುಂಟು ಮಾಡುತ್ತದೆ ಎಂಬ ಕಾರಣಕ್ಕಾಗಿ ಗಾಳಿಯಲ್ಲಿ ಸುಳಿಯನ್ನು ಗುರುತಿಸಿಕೊಂಡನು. ಹಾಗೂ ಅದರ ಬಗೆಗೆ ತನ್ನ ಕಲ್ಪನಾಶಕ್ತಿಯನ್ನು ಬೆಳೆಸಿಕೊಂಡು ಆ ಸುಳಿಗಾಳಿಯು ತೊಂದರೆಯ ಪ್ರತೀಕವಾಗುತ್ತದೆ ಎಂದುಕೊಂಡನು.

ನೀರು ಮಾನವನ ಜೀವನಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವ ಒಂದು ವಸ್ತು. ಈ ನೀರು ನಿಲ್ಲುವ ಕೆರೆ, ಬಾವಿ, ಹಳ್ಳ, ನದಿಗಳಲ್ಲಿ ಮಾನವನು ತನ್ನ ಬಹುಪಾಲು ಜೀವನದ ಮುಖ್ಯ ಕೆಲಸಗಳನ್ನು ತೀರಿಸಿಕೊಂಡು ಬರುತ್ತಿದ್ದಾನೆ. ಇಂತಹ ಹಳ್ಳ, ನದಿಗಳಲ್ಲಿ ಹರಿಯುವ

ನೀರಿನಲ್ಲಿ ತಾನು, ತನ್ನ ದನಕರುಗಳ ಸ್ವಚ್ಛತೆಯನ್ನು ಮಾಡಿಕೊಂಡು ಬಂದಿದ್ದಾನೆ. ಈ ಹರಿಯುವ ನೀರು ಸರಳವಾಗಿ ಹರಿಯದೆ ತಿರುಗುತ್ತಾ ಹರಿದಾಗ ಸುಳಿಯು ಉಂಟಾಗುತ್ತದೆ. ಈ ಸುಳಿ ಇರುವ ಜಾಗವು ನೀರಿನಲ್ಲಿ ಅಪಾಯಕಾರಿಯಾದುದು ಹಾಗೂ ಅಲ್ಲಿ ನೀರು ಆಳವಾಗಿದ್ದು ಅಲ್ಲಿಗೆ ಹೋಗುವ ಜೀವ, ವಸ್ತುಗಳನ್ನು ಮುಳುಗಿಸಿಕೊಂಡು ಬಿಡುತ್ತದೆ. ಹಾಗಾಗಿ ಅಂತಹ ಕಡೆಗಳಲ್ಲಿ ಹಿರಿಯರು ಜಾಗರೂಕತೆಯಿಂದ ಇರಲು ಹೇಳುತ್ತಿರುತ್ತಾರೆ. ಹಾಗೂ ಆ ಸುಳಿ ತೀರಾ ದೊಡ್ಡದಾಗಿದ್ದರೆ ಸಾಮಾನ್ಯವಾಗಿ ಅಂತಹ ಸುಳಿಯನ್ನು 'ತಿರುಗುಣಿ' ಅಥವಾ 'ಮಡ' ಎಂದು ಕರೆಯುತ್ತಾರೆ. ಗಾಳಿ ಮತ್ತು ನೀರಿನಲ್ಲಿ ಸುಳಿಯನ್ನು ಕಂಡುಕೊಂಡಿರುವಾಗ ಮಾನವನು ಕಲ್ಲಿನಲ್ಲಿಯೂ ಸಹ ಸುಳಿಯನ್ನು ಕಂಡುಕೊಂಡನು. ಕಲ್ಲಿನಲ್ಲಿರುವ ಸುಳಿಯು ಕಲ್ಲನ್ನು ಬೇರ್ಪಡಿಸಲು ತುಂಬಾ ಸಹಾಯಕಾರಿಯಾಗುವುದಲ್ಲದೆ, ಶಿಲ್ಪಕಲೆಗೆ ಸಂಬಂಧಿಸಿದ ಸೂಕ್ಷ್ಮ ಕೆಲಸಗಳಿಗೆ ಅಂತಹ ಕಲ್ಲನ್ನು ಸಾಮಾನ್ಯವಾಗಿ ಉಪಯೋಗಿಸುವುದಿಲ್ಲ.

ಸಸ್ಯ ಜಗತ್ತು ಈ ಪ್ರಕೃತಿಯ ಅತ್ಯಮೂಲ್ಯವಾದ ಕೊಡುಗೆ. ಪರಿಸರ ಸಮತೋಲನಕ್ಕಾಗಿ ಸಸ್ಯಗಳು ಬಹಳಷ್ಟು ಸಹಾಯಕಾರಿಯಾಗಿವೆ. ಜೊತೆಗೆ ಅವುಗಳನ್ನು ಮಾನವನು ಆಹಾರಕ್ಕಾಗಿ ಬಹಳಷ್ಟು ಬಳಸುತ್ತಿದ್ದಾನೆ. ಅಂತಹ ಸಸ್ಯಗಳಲ್ಲೂ ಸಹ ಮನುಷ್ಯನು ಸುಳಿ ಬೀಳುವುದನ್ನು ಗುರುತಿಸಿಕೊಮಡನು. ಜೋಳ ಮತ್ತು ತೆಂಗಿನ ಸುಳಿಗಳು ಆ ಸಸ್ಯಗಳ ನಾಶಕ್ಕಾಗಿರುವ ರೋಗಗಳೆಂದೇ ಕರೆಯಬೇಕು. ಏಕೆಂದರೆ ರೈತರು ಸುಳಿ ಎಂದು ಕರೆಯುವ ಇವು ಜೋಳ ಮತ್ತು ತೆಂಗಿನ ವಿಚಾರದಲ್ಲಿಿ ಅವುಗಳ ಜೀವಕ್ಕೆ ಕುತ್ತು ತರುವಂತಹವುಗಳಾಗಿವೆ. ಈ ರೋಗಗಳು ಬಿದ್ದಾಗ ಆ ಸಸ್ಯಗಳು ಒಣಗಿ ಹೋಗುತ್ತವೆ. ಒಣಗಿದ ಸಸ್ಯಗಳಿಂದ ಯಾವುದೇ ರೀತಿಯ ಫಲ ಕಾಣಲು ಸಾಧ್ಯವಿಲ್ಲ. ಹಾಗಾಗಿ ಈ ಸಸ್ಯಗಳಿಗೆ ಬೀಳುವ ಸುಳಿಗಳನ್ನು ಆಧುನಿಕ ವಿಜ್ಞಾನಿಗಳು ಆ ಸಸ್ಯದ ರೋಗಗಳೆಂದು ಗುರುತಿಸುತ್ತಾರೆ. ಜನಪದರು ಸುಳಿ ಎಂದು ಕರೆಯುತ್ತಾರೆ.

ಜನಪದರು ಭೌತಿಕ ಮತ್ತು ಸಸ್ಯ ಜಗತ್ತಿನಲ್ಲಿ ಸುಳಿಯನ್ನು ಕಂಡುಕೊಂಡಂತೆ ಜೀವ ಜಗತ್ತಿನಲ್ಲಿ ಸಹ ಸುಳಿಯನ್ನು ಕಂಡುಕೊಂಡನು. ಜೀವ ಜಗತ್ತಿನಲ್ಲಿ ಕುದುರೆ, ಆಕಳು (ಹಸು), ಎತ್ತು (ಹೋರಿ), ಎಮ್ಮೆ, ಕುರಿ, ಆಡು (ಮೇಕೆ) ಮುಂತಾದ ಪ್ರಾಣಿ ವರ್ಗ ಹಾಗೂ ಮನುಷ್ಯ (ಹೆಣ್ಣು ಮತ್ತು ಗಂಡು)ರಲ್ಲಿಯೂ ಸುಳಿಗಳಿರುವುದನ್ನು ಕಂಡುಕೊಂಡನು. ಮೇಲೆ ಹೇಳಿದ ಪ್ರಾಣಿವರ್ಗ ಹಾಗೂ ಮನುಷ್ಯ (ಹೆಣ್ಣು ಮತ್ತು ಗಂಡು) ವರ್ಗಗಳಲ್ಲಿ ಸುಳಿಗಳನ್ನು ಗುರುತಿಸಿಕೊಂಡಿದ್ದರೂ, ಬಹುಮುಖ್ಯವಾಗಿ ಪರಿಗಣನೆಗೆ ತೆಗೆದುಕೊಂಡಿರುವುದು ಕುದುರೆ, ಎತ್ತು ಮತ್ತು ಹೆಣ್ಣಿನ ಮೈಮೇಲೆ ಇರುವ ಸುಳಿಗಳ ಬಗೆಗೆ. ಈ ಮೂರುಜೀವಿಗಳ ಬಗೆಗಿನ ಸುಳಿಗಳ ಬಗ್ಗೆ ಕೊಟ್ಟಿರುವ ಮಹತ್ವವನ್ನು ಗಮನಿಸಿದರೆ, ಅವುಗಳನ್ನು ಮಾನವನು ತನ್ನ ಆರ್ಥಿಕ-ಸಾಂಸ್ಕೃತಿಕ ಜೀವನದ ಬಹುಮುಖ್ಯ ಅಂಗವೆಂದು ತಿಳಿದುಕೊಂಡಿರುವುದು ಗೊತ್ತಾಗುತ್ತದೆ. ಅಲ್ಲದೆ ಎತ್ತು, ಕುದುರೆಗಳು ಆರ್ಥಿಕ ಚಟುವಟಿಕೆಯ ಅಂಗಗಳಾಗಿದ್ದು, ಅವುಗಳನ್ನು ಕೊಳ್ಳುವಲ್ಲಿ ಮತ್ತು ಮಾರುವಲ್ಲಿ ಲಾಭಾಕಾಂಕ್ಷಿಯಾಗಿದ್ದ ಮನಸ್ಸು 'ಸುಳಿ' ಯನ್ನು ಗಮನಕ್ಕೆ ತೆಗೆದುಕೊಂಡಿರುವುದು ತಿಳಿದು ಬರುತ್ತದೆ. ಸಮಾನಳಾಗಿದ್ದ ಹೆಣ್ಣು ಕಾಲಾನಂತರದಲ್ಲಲಿ ಗಂಡಿನ ತುಳಿತಕ್ಕೆ ಒಳಗಾಗಿ, ಉಪಭೋಗದ ವಸ್ತುವಾಗಿ ಮಾರ್ಪಟ್ಟಳು. ಉಪಭೋಗದ ವಸ್ತು ಎಂದು ಪರಿಗಣಿಸಲ್ಪಟ್ಟ ಹೆಣ್ಣಿನ ಲಕ್ಷಣ ಮತ್ತು ಸುಳಿಗಳನ್ನು ನೋಡಲು ಪ್ರಾರಂಭಿಸಿದರು. ಜೊತೆಗೆ ಗಂಡು ತನ್ನ ಮೂಗಿನ ನೇರಕ್ಕೆ ಹೆಣ್ಣಿನ ಮೇಲೆ 'ಲಕ್ಷಣ', 'ಸುಳಿ' ಮುಂತಾದವುಗಳನ್ನು ಹೇರಿದನು. ಮತ್ತು ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದನು. ಹಾಗೂ ಹೆಣ್ಣಿನ ಸುಳಿ ಮತ್ತು ಲಕ್ಷಣಗಳನ್ನು ಹೆಣ್ಣಿನಿಂದಲೇ ಪರೀಕ್ಷೆಗೆ ಒಳಪಡಿಸಿದನು. ಇದು ಒಂದು ರೀತಿಯಲ್ಲಿ ಹೆಣ್ಣಿನಿಂದಲೇ ಹೆಣ್ಣಿನ ಶೋಷಣೆಯನ್ನು ಮಾಡಲು ಅನುಕೂಲವಾಯಿತು.

ಧರ್ಮಗಳನ್ನು ರೂಪಿಸಿಕೊಂಡ ಹಾಗೆ ಸಮಾಜದ ನೀತಿ ನಿಯಮಗಳನ್ನು ಮನುಷ್ಯನೇ ನಿರ್ಮಿಸಿಕೊಂಡನು. ಎಷ್ಟಾದರೂ ಮನುಷ್ಯ ಸ್ವಾರ್ಥಿ. ಎಲ್ಲಾ ನಿಯಮಗಳನ್ನು ತನಗಾಗಿಯೇ ಮಾಡಿಕೊಂಡನು. ಜಾತಿ ಪದ್ಧತಿಯ ಉಚ್ಛ ನೀಚ ಕಲ್ಪನೆಯಂತೆ ಗಂಡಸಿಗೆ ಶ್ರೇಷ್ಠ ಸ್ಥಾನವನ್ನು ತಾನೇ ಕೊಟ್ಟುಕೊಂಡನು. ಹೆಂಗಸು ನಿಕೃಷ್ಟ ವ್ಯಕ್ತಿಯಾದಳು. ಅದರಲ್ಲೂ ಕೆಟ್ಟ ಸುಳಿಗಳಿರುವ ಹೆಂಗಸನ್ನು ಯಾರೂ ಮದುವೆಯಾಗುತ್ತಿರಲಿಲ್ಲ. ಕೆಟ್ಟ ಸುಳಿಗಳನ್ನು ಎಷ್ಟೋ ಸಾರಿ ಮನೆಯ ಹಿರಿಯರು ಮಗುವಿದ್ದಾಗಲೇ ಸುಟ್ಟು ಹಾಕುವುದರ ಮುಖಾಂತರ ಹೋಗಲಾಡಿಸಲು ಪ್ರಯತ್ನಿಸುತ್ತಿದ್ದರು. ಆ ಪ್ರಯತ್ನದಲ್ಲಿ ವಿಫಲವಾಗುವುದರ ಜೊತೆಗೆ ಶಾಶ್ವತವಾಗಿ ಆ ಜಾಗದಲ್ಲಿ

ಗಾಯದ ಕಲೆಯನ್ನು ಮಾಡುತ್ತಿದ್ದರು. ಅಂತ ಹೆಣ್ಣು ಹುಟ್ಟಿದ ಮನೆಗೋ ಅಥವಾ ಕೊಟ್ಟ ಮನೆಗೋ ಕೇಡುಂಟು ಮಾಡುವವಳು ಎಂಬ ನಂಬಿಕೆಯಿಂದಾಗಿ ಶಾಶ್ವತವಾಗಿ ಆ ಹೆಣ್ಣಿನ ನೆಮ್ಮದಿಯನ್ನು ಕಲಕುತ್ತಿದ್ದರು. ಅಲ್ಲದೆ ಕುಟುಂಬ ಸಂಸ್ಕೃತಿಯ ಬಹುಮುಖ್ಯ ಅಂಗವಾದ ಮದುವೆ, ಮುಂಜಿಯಂತಹ ಹಲವಾರು ಪವಿತ್ತ ಕಾರ್ಯಗಳಿಗೆ ಅಂತಹ ಹೆಣ್ಣಿನ ಪಾಲ್ಗೊಳ್ಳುವಿಕೆಯನ್ನು ತಡೆ ಹಿಡಿಯುತ್ತಿದ್ದರು. ಆ ಮುಖಾಂತರ ಅವರ ಸ್ವಾತಂತ್ರ್ಯವನ್ನು ಮಣ್ಣುಪಾಲು ಮಾಡುತ್ತಿದ್ದರು. ಇದು ಒಂದು ರೀತಿಯಲ್ಲಿ ಮನುವಿನ “ಸ್ತ್ರೀ ಸ್ವಾತಂತ್ರ್ಯಮರ್ಹತಿ” ಎನ್ನುವುದನನ್ನು ಸತ್ಯ ಮಾಡುವ ಕ್ರಮವಲ್ಲದೆ ಬೇರೇನೂ ಅಲ್ಲ. ಸಮಾಜವು ಕೆಟ್ಟ ಸುಳಿ ಇರುವವಳು ಎಂಬ ಕಾರಣಕ್ಕಾಗಿ ಆಕೆಗೆ ಸಮಾಜದಲ್ಲಿ ತಕ್ಕ ಸ್ಥಾನಮಾನವನ್ನು ಕೊಡದೆ ಹೀಯಾಳಿಸಿ, ಗೋಳಾಡಿಸುತ್ತಿತ್ತು. ಪರಂಪರೆಯು “ನಸ್ತ್ರೀ ಸ್ವಾತಂತ್ರ್ಯಮರ್ಹತಿ” ಅಂದರೆ ಹೆಂಗಸು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲವೆಂದು ಹೇಳಿ, ಅದರಂತೆ ಆಕೆಗೆ ಸಮಾಜದಲ್ಲಿ ತಕ್ಕ ಸ್ಥಾನಮಾನಗಳನ್ನು ಕೊಡದೆ ಹೀಯಾಳಿಸಿ, ಗೋಳಾಡಿಸಿದ ಗಂಡು “ಯತ್ರ ನಾರ್ಯಾಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ” - ಎಲ್ಲಿ ಸ್ತ್ರೀಯರಿಗೆ ಪೂಜ್ಯತೆ ಇದೆಯೋ ಅಲ್ಲಿ ದೇವತೆಗಳು ಸಂತುಷ್ಟರಾಗುತ್ತಾರೆಂಬ ಉಕ್ತಿಯಿಂದ, ನೊಂದ ಹೆಂಗಸಿಗೆ ಸಮಾಧಾನವನ್ನು ಅವನೇ ಹೇಳಿದನು. ಹಾಗಾಗಿ ಸ್ತ್ರೀಯನ್ನು ದೇವತೆ ಎಂತಲೋ, ಸೇವಕಿ ಎಂತಲೋ ಪರಿಣಿಸಿದರೇ ಹೊರತು ಅವಳನ್ನು ಒಬ್ಬ ಮನುಷ್ಯಳು ಎಂದು ಪರಿಗಣಿಸಲಿಲ್ಲ. ಇಲ್ಲಿ ಸ್ತ್ರೀಯು ಪುರುಷನ ಸೊತ್ತು ಉಪಭೋಗದ ವಸ್ತುವೆಂದು ಪರಿಗಣಿಸಲ್ಪಟ್ಟಿದ್ದಾಳೆ. ಪತ್ನಿಯೆಂದರೆ ಪುರುಷ ತನಗಿಷ್ಟ ಬಂದಂತೆ ಬಳಸುವ ವಸ್ತು. ನಿರ್ಜೀವ ವಸ್ತುವನ್ನು ಬಳಸುವಂತೆ ಪತ್ನಿಯನ್ನು ಪುರುಷರು ಬಳಸುವರು. ಇಷ್ಟೆಲ್ಲಾ ದಬ್ಬಾಳಿಕೆ ಆದಾಗಲೂ ಹೆಣ್ಣು ತನ್ನ ಪ್ರತಿಭಟನೆಯನ್ನು ಹೆಚ್ಚಿನದಾಗಿ ತೋರಿಸಲಿಲ್ಲವೇನೋ ಅನ್ನಿಸುತ್ತೆ. ಜೊತೆಗೆ ತನ್ನ ಪ್ರತಿಭಟನೆಯ ಕಾವನ್ನು, ದಬ್ಬಾಳಿಕೆಯು ಬೇರೆ ಬೇರೆ ರೂಪಗಳಲ್ಲಿ ಹೇಗೆ ನಡೆಯುತ್ತದೆಯೋ ಆ ರೀತಿಯಲ್ಲಿ ಮುಂದುವರೆಸಿಕೊಂಡು ಬರುತ್ತಿಲ್ಲ ಎನ್ನಿಸುತ್ತದೆ. ಜೊತೆಗೆ ಹೆಣ್ಣಾಗಲಿ, ಗಂಡಾಗಲಿ ದೈಹಿಕವಾಗಿ ಎಷ್ಟೇ ದುರ್ಬಲರಾಗಿರಲಿ, ಎಲ್ಲರೂ ತಮ್ಮ ಆತ್ಮ ಗೌರವದ ವಸ್ತು ಸ್ವಾತಂತ್ರ್ಯದ ಕಾವಲುಗಾರರು ತಾವೇ ಎಂಬುದು ಮಾನವ ಕುಟುಂಬಕ್ಕೆ ನಂಬಿಕೆ ಹುಟ್ಟಿದಾಗ ಸ್ವಾತಂತ್ರ್ಯ್ ಮೊಟಕಾಗುವುದಿಲ್ಲ.

ವಿಜ್ಞಾನದ ಮಹಿಮೆಯಿಂದ ಶ್ರಮವನ್ನು, ಕಾಲವನ್ನು ಉಳಿಸುವ ಯಂತ್ರಗಳು ಹುಟ್ಟಿದವು. ಹಾಗಾಗಿ ಪ್ರಾಣಿಗಳ ಮತ್ತು ಮನುಷ್ಯರ ಶ್ರಮ ಮತ್ತು ಕಾಲದ ಉಳಿತಾಯವಾಯಿತು. ತಾಂತ್ರಿಕತೆಯ ಅವಿಷ್ಕಾರಕ್ಕಿಂತ ಮೊದಲು ಒಂದೂರಿನಿಂದ ಇನ್ನೊಂದೂರಿಗೆ ಪ್ರಯಾಣಿಸಲು, ನೀರು ತರಲು, ಭಾರದ ವಸ್ತುಗಳನ್ನು ಸಾಗಿಸಲು, ದನಕರುಗಳನ್ನು ಮೇಯಿಸಲು ಕುದುರೆಯನ್ನು ಬಳಸುತ್ತಿದ್ದರು. ಜೊತೆಗೆ ರಾಜ ಮಹಾರಾಜರ ಕಾಲದಲ್ಲೂ ಸಹ ಕುದುರೆಯ ಬಳಕೆ ಅತ್ಯಧಿಕವಾಗಿತ್ತು. ಅಂದರೆ ಮಾನವನ ಆರ್ಥಿಕತೆಯ ಒಂದಂಗವಾಗಿ ಕುದುರೆಯು ಬಳಕೆಯಾಗುತ್ತಿತ್ತು. ಹಾಗಾಗಿ ಅದರ ಕೊಡುಕೊಳ್ಳುವಿಕೆಯ ಸಂದರ್ಭದಲ್ಲಿ ಅದರ ಬಣ್ಣ, ಆಕಾರ, ಲಕ್ಷಣ, ವಂಶ, ಸುಳಿ ಮತ್ತು ಅದರ ದೈಹಿಕ ಆರೋಗ್ಯದ ಬಗೆಗೆ ಗಮನವಿಟ್ಟು ನೋಡುತ್ತಿದ್ದರು. ಕುದುರೆಯನ್ನು ಕೊಳ್ಳುವಾಗ ಕದರ ಆಯಾಲು (ಕುತ್ತಿಗೆಯ ಮೇಲಿನ ಜವೆಗೂದಲು) ಇಳಿ ಬೀಳುವ ಬಗೆಗೆ ಇರುವ ಮನೋಭಾವವನ್ನು ನೋಡಿದರೆ, ನಮಗೆ ಇಲ್ಲಿಯೂ ಗಂಡಿನ ಮೇಲುಗಾರಿಗೆ ಗೊತ್ತಾಗುತ್ತದೆ. ಮೊದಲಿನಿಂದಲೂ ನೋಡಿದಾಗ ಗಂಡು ಬಲ, ಹೆಣ್ಣು ಎಡ ಎಂಬುದು ಸರ್ವವಿಧಿತವಾದುದು. ಅಂದರೆ ಗಂಡಿನ ಎಡಕ್ಕೆ ಹೆಣ್ಣು ಎಂಬುದು. ಬಲಭಾಗ ಶ್ರೇಷ್ಠವಾದುದು ಮತ್ತು ಬಲಯುತವಾದುದು. ಹಾಗಾಗಿ ಗಂಡು ಬಲಕ್ಕೆ ಇರುವುದು (ಮದುವೆ ಮುಂತಾದ ಕಾರ್ಯಗಳಲ್ಲಿ). ಇಲ್ಲಿಯು ಅಂದರೆ ಕುದುರೆಯ ಆಯಾಲು ಗಂಡು ಆಗಿದ್ದರೆ ಬಲಕ್ಕೆ ಬೀಳಬೇಕು, ಹೆಣ್ಣು ಆಗಿದ್ದರೆ ಎಡಕ್ಕೆ ಬೀಳಬೇಕು. ಹಾಗಿದ್ದರೆ ಶ್ರೇಷ್ಠ ಎಂಬ ಮನೋಭಾವವಾಗಿದೆ. ಹಾಗೆಯೇ ಬಣ್ಣದ ವಿಷಯದಲ್ಲಿಯೂ ಸಹ ಒಳ್ಳೆಯದು ಕೆಟ್ಟದ್ದು ಎಂಬ ಮನೋಭಾವವು ಸಹ ಪರಂಪರೆಯಿಂದ ಬಂದುದಾಗಿದೆ.

ಇನ್ನು ಸುಳಿಗಳ ಬಗೆಗಿನ ನಿರ್ಧಾರಗಳೂ ಸಹ ಏಕಪ್ರಕಾರವಾಗಿರದೆ, ಪ್ರಾಂತದಿಂದ ಪ್ರಾಂತಕ್ಕೆ ಬದಲಾಗಿರುವುದನ್ನು ಕಾಣಬಹುದು. ಅಂದರೆ ಸುಳಿಗಳು ಕೊಡುವ ಫಲಾಫಲಗಳು ಸಹ ವಿಭಿನ್ನವಾಗಿವೆ. ಉದಾ : ಕುದುರೆಯ 'ಗಂಗಾವಾಟ (ಬಂಗಾರಪಟ) ಸುಳಿ'ಯು ಕೆಲವರಿಗೆ ಒಳ್ಳೆಯದಾಗಬಹುದು, ಕೆಲವರಿಗೆ ಕೆಟ್ಟದಾಗಬಹುದು. ಹಾಗೆಯೇ ಕುದುರೆಯಲ್ಲಿ ಎಣಿಸಿದಂತೆ ಒಳ್ಳೆಯ ಸುಳಿಗಳಿದ್ದು, ಅದು ಮೂಲತಹ ಕೆಲಸ ಮಾಡದ ಮನೋಸ್ಥಿತಿಯನ್ನು ಹೊಂದಿದ್ದರೆ ಅಂತಹ ಕುದುರೆಯನ್ನು ಕೊಂಡವನ ಗತಿ ಅಧೋಗತಿಯೇ ಸರಿ. ಹಾಗಿಯೇ ಒಳ್ಳೆಯ ಮತ್ತು ಕೆಟ್ಟ ಸುಳಿಗಳು ಎಂಬುದು ವ್ಯಕ್ತಿಯ ಮಾನಸಿಕ ಭಾವನೆಗೆ ಬಿಟ್ಟದ್ದೇ ಹೊರತು ನಿರ್ದಿಷ್ಟವಾದ ಫಲವನ್ನು ನೀಡುತ್ತದೆ ಎಂಬುದು ಸುಳ್ಳು.

“ಹೆಂಡತಿ ಇಲ್ಲದವನಿಗೆ ಮನೆ ಇಲ್ಲ ದನಾ ಇಲ್ಲದವನಿಗೆ ದಗದ (ಕೆಲಸ) ಇಲ್ಲ” ಎಂಬ ಗಾದೆಯಂತೆ ರೈತರಿಗೆ ದನಗಳು ಅತಿ ಮುಖ್ಯವಾದ ಆಶ್ರಯಗಳಾಗಿವೆ. ಹಾಗಾಗಿ ಇಂತಹ ದನಗಳೇ ಆರ್ಥಿಕತೆಯ ಒಂದು ಭಾಗವಾಗಿ ಪರಿಗಣಿಸಲ್ಪಟ್ಟವು. ಇಲ್ಲಿಯು ಅಂದರೆ ಕೊಡುಕೊಳ್ಳುವಿಕೆಯ ಸಂದರ್ಭದಲ್ಲಿ ದನದ ಬಣ್ಣ, ಆಕಾರ, ಲಕ್ಷಣ, ವಂಶ, ಸುಳಿ ಮತ್ತು ಅದರ ದೈಹಿಕತೆಯ ಬಗೆಗಿನ ಗಮನ ಹೆಚ್ಚಾಯಿತು. ಸುಳಿಗಳನ್ನು ಕುರಿತು ವಿಜ್ಞಾನ ಪ್ರಾರಂಭವಾಯಿತು. ಸುಳಿಗಳ ಬಗೆಗೆ ಒಳ್ಳೆಯದು ಕೆಟ್ಟದ್ದು ಎಂಬ ಭಾವನೆ ಬೆಳೆಯಿತು. ಒಳ್ಳೆಯ ಸುಳಿ ಇದ್ದ ಎತ್ತಿಗೆ ಹೆಚ್ಚಿನ ಬೇಡಿಕೆ ಹಾಗೂ ಹಣದ ಹೆಚ್ಚಳಿಕೆಯೂ ಅಯಿತು.

ಕೆಲವು ವಿಶಿಷ್ಟ ಸುಳಿಯ ದನಗಳು ಅಂದರೆ ದವಣಿ ಸುಳಿಯ ದನ ಮನೆಯಲ್ಲಿದ್ದರೆ ಕೆಟ್ಟ ಸುಳಿಯ ದನವಿದ್ದರೂ ಸಹ ಅದರ ಕೆಟ್ಟ ಪರಿಣಾಮವಾಗುವುದಿಲ್ಲ ಎಂದು ನಂಬುವರು. ಹಾಗೆಯೇ ಎತ್ತಿಗೆ ಲಂಗಟ ಸುಳಿ ಇರಬಾರದು ಕೆಟ್ಟದ್ದು. ಆದರೆ ಆ ಸುಳಿಯ ಹತ್ತಿರವೇ ಇನ್ನೊಂದು ಸುಳಿ ಇದ್ದರೆ, ಅಂದರೆ ಎರಡು ಸುಳಿಗಳಿದ್ದರೆ ಒಳ್ಳೆಯದು. ಅಂದರೆ ಇನ್ನೊಂದು ಹೆಚ್ಚಿನ ಸುಳಿ ಇದೆ ಎಂಬ ಏಕೈಕ ಕಾರಣಕ್ಕಾಗಿ ಕೆಟ್ಟ ಸುಳಿಯೂ ಸಹ ಒಳ್ಳೆಯದಾಗುವುದು. ಇನ್ನು ಕೆಲವೆಡೆ ಒಳ್ಳೆಯ ಸುಳಿ ಇದ್ದ ಎತ್ತು, ಕುದುರೆಗಳನ್ನು ಮಾರದೆ ಇರುತ್ತಾರೆ. ಸತ್ತರೆ ಮನೆಯಲ್ಲೇ ಹುಗಿಯುವುದುಂಟು. ಇನ್ನೂ ಸುಳಿಗಳು ಕೊಡುವ ಫಲಗಳು ವಿರುದ್ಧ ದಿಕ್ಕಗಳಲ್ಲಿರುವುದನ್ನು ಕಾಣಬಹುದು. ಉದಾ : ಬಾಸಿಂಗ ಸುಳಿ ದನವಿದ್ದರೆ ಆ ದನದ ಒಡೆಯನ ಹೆಂಡತಿ  ಸಾಯುವಳು ಎಂದು ಒಂದೆಡೆ ಇದ್ದರೆ, ಅಂತಹ ಎತ್ತು ಇದ್ದರೆ ಮನೆಯಲ್ಲಿ ಲಗ್ನವಾಗುವುದು ಎಂದು ಇನ್ನು ಕೆಲವಡೆ ಇದೆ. ‘ಎದುರುಪಾಮ’ ಇರುವ ಎತ್ತು ಬಹಳ ಬಲಿಷ್ಠವಾಗಿದ್ದು ವ್ಯವಸಾಯದಲ್ಲಿ ತುಂಬಾ ಚುರುಕಾಗಿಯೂ, ಚೆನ್ನಾಗಿಯೂ ಎಳೆಯುವುದು ಎನ್ನುವರು. ಆದರೆ ಕೆಲವೆಡೆ ಇದಕ್ಕೆ ವಿರುದ್ಧವಾದ ಫಲಿತಾಂಶಗಳನ್ನು ಕೊಟ್ಟಿರುವುದು ಉಂಟು. ಕೆಟ್ಟ ಸುಳಿಗಳಿದ್ದ ದನ ಮನೆಯಲ್ಲೇ ಹುಟ್ಟಿದರೆ ಅದಕ್ಕೆ ರಿಯಾಯಿತಿ ತೋರುವುದನ್ನು ಕಾಣಬಹುದು.

ಇನ್ನು ಸುಳಿಗಳನ್ನು ಹೆಸರಿಸುವ ಹೆಸರುಗಳನ್ನು ನೋಡಿದರೆ, ಅವುಗಳ ಬಗೆಗಿರುವ ಮನೋಭಾವ ಚೆನ್ನಾಗಿ ಅರ್ಥವಾಗುತ್ತದೆ. ಉದಾಹರಣೆಗೆ ಕೆಟ್ಟ ಸುಳಿಗಳಿಗೆ ಇಟ್ಟಿರುವ ಸಿದಿಗಿಸುಳಿ, ಮೂತ್ರಿಸುಳಿ, ಕತ್ತರಿ ಸುಳಿ, ಮುಟ್ಟಿನ ಸುಳಿ, ಕಸಬರಿಗೆ ಸುಳಿ, ಲಂಗಟ ಸುಳಿ, ಬೇಡಿ ಸುಳಿ, ಜಾರಮಸ್ತಕ, ಅಡಕ ಸುಳಿ, ಉರ್ಲಸುಳಿ, ಗೂಟಾಪಳಿಸುಳಿ ಮುಂತಾದವು. ಒಳ್ಳೆಯ ಸುಳಿಗಳಿಗೆ ಇಟ್ಟಿರುವ ದವಣಿ ಸುಳಿ, ರಾಶಿಸುಳಿ, ಬಾಸಿಂಗ ಸುಳಿ, ಮಸ್ತಕ ಸುಳಿ, ಕಂಠಾಭರಣ ಸುಳಿ, ದೇವಮಣಿ ಸುಳಿ ಮುಂತಾದವುಗಳು. ಇವುಗಳನ್ನು ಗಮನಿಸಿದರೆ ಕೆಟ್ಟ ಫಲ ನೀಡುವವು ಎಂಬ ಕಾರಣಕ್ಕಾಗಿ ಸಂಸ್ಕೃತಿಯಲ್ಲಿರುವ ಕೆಟ್ಟ ಹೆಸರುಗಳನ್ನು ಇಡಲಾಗಿದೆ. ಹಾಗೆಯೇ ಒಳ್ಳೆಯ ಸುಳಿಗಳಿಗೆ ಒಳ್ಳೆಯ ಫಲ ನೀಡುತ್ತವೆ ಎಂಬುದಕ್ಕಾಗಿ ಸಂಸ್ಕೃತಿಯಲ್ಲಿರುವ ಒಳ್ಳೆಯ ಸುಳಿಗಳಿಗೆ ಒಳ್ಳೆಯ ಫಲ ನೀಡುತ್ತವೆ ಎಂಬುದಕ್ಕಾಗಿ ಸಂಸ್ಕೃತಿಯಲ್ಲಿರುವ ಒಳ್ಳೆಯ ಪದಗಳನ್ನು ಬಳಸಲಾಗಿದೆ.

‘ಕಸಬರಿಗೆ ಸುಳಿ ಎತ್ತು ಕೊಂಡವನ ಮನೆಯನ್ನೇ ಸಾರಿಸುತ್ತದೆ ಹಾಗು ಬೇಡಿ ಸುಳಿ ಇರುವ ಎತ್ತನ್ನು ಕೊಂಡವನಿಗೆ ಬೇಡಿ ಬೀಳುತ್ತೆ ಎಂಬ ನಂಬಿಕೆಗಳನ್ನು ನೋಡಿದಾಗಿ ಆಶ್ಚರ್ಯವೆನ್ನಿಸುತ್ತದೆ. ಬೇಡಿ ಹಾಕುವುದು ನಮ್ಮ ದೇಶಕ್ಕೆ ಬಂದುದು ಬ್ರಿಟಿಷರು ನಮ್ಮ ದೇಶವನ್ನು ಆಳಲು ಪ್ರಾರಂಭಿಸಿದಾಗ. ಹಾಗಾಗಿ ಈ ನಂಬಿಕೆ ಇತ್ತೀಚಿನದಾಗಿರಬಹುದು. ಬೇಡಿ ಸುಳಿ ಎತ್ತುಗಳನ್ನು ಮಾರುವಾಗ ಕಾಲನ್ನು ಕೆಸರಿನಿಂದ ಮುಚ್ಚುವುದುಂಟು. ಅಂದರೆ ಇಲ್ಲಿಯ ವ್ಯಾಪಾರದಲ್ಲಿಯೂ ಮೋಸವನ್ನು ಕಾಣಬಹುದು. ಸಾಮಾನ್ಯವಾಗಿ ಎತ್ತಿನ ವ್ಯಾಪಾರವನ್ನು ಮಾಡುವಾಗ ಹಣದ ಬದಲಾಗಿ ಮನುಷ್ಯನ ಬೆರಳುಗಳ ಮೂಲಕ ಅಂದರೆ ಬೆರಳುಗಳನ್ನೇ ಹಣಗಳ ಹಾಗೆ ರೂಪಾಂತರಗೊಳಿಸುವ ಮುಖಾಂತರ ವ್ಯಾಪಾರ ಮಾಡುತ್ತಾರೆ. ಕೆಟ್ಟ ಸುಳಿಯ ದನಗಳನ್ನು ಸಾಮಾನ್ಯವಾಗಿ ಆರ್ಥಿಕವಾಗಿ ಹಿಂದುಳಿದವರು, ಹೊಸದಾಗಿ ವ್ಯವಸಾಯ ಆರಂಭಿಸುವವರು ಕೊಳ್ಳುವರು ಅಥವಾ ಮಾಂಸಕ್ಕಾಗಿ ಕೊಳ್ಳುವರು. ಅಂದರೆ ಇಲ್ಲಿಯೂ ಬಡವರು ಮತ್ತು ಮಾಂಸ ತಿನ್ನುವವರೇ ದಬ್ಬಾಳಿಕೆಗೆ ಒಳಗಾಗುವರು. ಏಕಂದರೆ ಕಡಿಮೆ ಹಣಕ್ಕೆ ಸಿಗುವುದು ಎಂಬ ಕಾರಣಕ್ಕಾಗಿ ಅವರೇ ಅವನ್ನು ಕೊಂಡುಕೊಳ್ಳುವರು.

ಇಂದು ದಟ್ಟವಾಗಿರುವ ವೈಜ್ಞಾನಿಕತೆಯಿಂದಾಗಿ ಅಲ್ಪಸ್ವಲ್ಪ ಸುಳಿಗಳ ಬಗೆಗಿನ ನಂಬಿಕೆಗಳು ಕಡಿಮೆಯಾಗುತ್ತಿವೆ. ಅವುಗಳ ಬಗೆಗಿನ ಅಲ್ಪಸ್ವಲ್ಪ ವ್ಯಾಮೋಹವು ಸಹ ಕಡಿಮೆಯಾಗಿದೆ. ಜೊತೆಗೆ ಇಂದಿನ ಬಹುರಾಷ್ಟ್ರೀಯ ಕಂಪನಿಗಳ ಪ್ರಪಂಚೀಕರಣದಿಂದಾಗಿ ಎಲ್ಲವೂ

ಸಾರ್ವತ್ರಿಕರಣಗೊಳಗಾಗುತ್ತಿದೆ. ಜೊತೆಗೆ ಇಲ್ಲಿಯ ಎಲ್ಲಾ ಪಾರಂಪರಿಕ ಜ್ಞಾನಗಳು ಪ್ರಪಂಚದೆಡೆಗೆ ಸಾಗುತ್ತಿವೆ. ಸಮೂಹ ಮಾಧ್ಯಮಗಳ ಮುಖೇನವಾಗಿ ಇಡೀ ಜಗತ್ತೇ ಒಂದು ವಿಶಾಲವಾದ ಹಳ್ಳಿಯಾಗಿರುವ ಕಾಲದಲ್ಲಿ ಸುಳಿಗಳ ಬಗೆಗಿನ ಜ್ಞಾನ ತಿಳಿದ ಬಹುರಾಷ್ಟ್ರೀಯರು ಪೇಟೆಂಟ್ ಮುಖಾಂತರ ಒಳ್ಳೆಯ ಸುಳಿಯ ದನಗಳನ್ನು ಸೃಷ್ಟಿಸಿಕೊಡುವುದಿಲ್ಲ ಎಂದು ಹೇಗೆ ಹೇಳುವುದು. ಜೊತೆಗೆ ಸೌಂದರ್ಯ ಸ್ಪರ್ಧೆಗೋಸ್ಕರವಾಗಿ (ಸ್ಪರ್ಧೆಯು ಬಯಸುವ ರೀತಿಯಲ್ಲಿ) ಎದೆ-ಟೊಂಕ-ತೊಡೆಗಳನ್ನು ವೈಜ್ಞಾನಿಕ ಪದ್ಧತಿಯಿಂದ ಬೆಳೆಸಿಕೊಳ್ಳುತ್ತಿರುವ ಕಾಲದಲ್ಲಿ, ಬೇಕಾದ ಒಳ್ಳೆಯ ಸುಳಿಗಳನ್ನು ಉಳಿಸಿಕೊಂಡು (ಬೆಳಸಿಕೊಂಡು) ಕೆಟ್ಟ ಸುಳಿಗಳನ್ನು ಸಹ ಅಳಿಸಿ ಹಾಕಿಕೊಳ್ಳುವ ಕಾಲ ಬರುವುದಿಲ್ಲ ಎಂದು ಹೇಗೆ ಹೇಳುವುದು.

ಸಸ್ಯಗಳಲ್ಲಿರುವ ಸುಳಿಗಳ ಬಗೆಗೆ ಹೇಳುವುದಾದರೆ, ಜೋಳದ ಸುಳಿಯನ್ನು ಬರದ ರೀತಿಯಲ್ಲಿ ತಡೆಗಟ್ಟುವ ಕಾಲ ದೂರವಿಲ್ಲ. ಏಕೆಂದರೆ ಜೋಳದ ಬೆಳೆಯೊಂದರಿಂದಲೇ ಕಾರ್ಗಿಲ್ ನಂತಹ ಸಂಸ್ಥೆಗಳು ಇಂದು ಪ್ರಪಂಚದ ವ್ಯಾಪಾರೀಕರಣದಲ್ಲಿ ಬಹಳಷ್ಟು ಸಾಧಿಸಿವೆ. ಇಂದು ಬಹುರಾಷ್ಟ್ರೀಯ ಕಂಪನಿಗಳು ಹರಡಿಕೊಂಡಿರುವ ವ್ಯಾಪ್ತಿ, ದೇಶ ದೇಶಗಳ ಒಳ ಹೊರಗನ್ನು ಬದಲಿಸಬಲ್ಲ ಶಕ್ತಿ ಸೂಕ್ಷ್ಮ ಸ್ತರಗಳಿಗೆ ಹೋಗುತ್ತಿದೆ. ಅವುಗಳ ಶೋಷಣೆ ನಮಗೆ ಅರಿವಿಲ್ಲದಂತೆ ನಮ್ಮನ್ನು ಆವರಿಸಿಕೊಳ್ಳಬಲ್ಲ, ಅದೃಶ್ಯರೂಪ ತಾಳುತ್ತಿದೆ. ಇದು ಪ್ರಧಾನವಾಗಿ ಬಡ ದೇಶದಲ್ಲಿ ಸಿಗುವ ಸಂಪನ್ಮೂಲಗಳ ಲೂಟಿ ಹಾಗೂ ಅಗ್ಗದ ಶ್ರಮದ ಲೂಟಿಯ ರೂಪದಲ್ಲಿದೆ. ಜೋಳದ ಕೃಷಿಯಲ್ಲಿ ಕೈ ಚಾಚಿದ ಕಾರ್ಗಿಲ್ ಕಂಪನಿಗೆ ಬಿತ್ತನೆ ಬೀಜ ಮಾರಾಟದಿಂದ ಬರುವ ಲಾಭ ಅಷ್ಟೇನು ಮುಖ್ಯವಾಗಿಲ್ಲ. ಬದಲಾಗಿ ಜೋಳದಲ್ಲಿರುವ ಸಿಟ್ರಿಕ್ ಆಸಿಡ್ ಅನ್ನು ಕೋಳಿ ಆಹಾರ ತಯಾರಿಸಲು ಬಳಸುತ್ತಿದೆ. ಕಾರ್ಗಿಲ್ ಕಂಪನಿ ಜಗತ್ತಿನ ಕೋಳಿ ಆಹಾರ ಮಾರುಕಟ್ಟೆಯ ಶೇ. ೯೦ ರಷ್ಟು ಹತೋಟಿ ಹೊಂದಿದ್ದು, ಭಾರತದಲ್ಲೂ ಸಂಸ್ಕರಣಾ ಘಟಕ ಸ್ಥಾಪಿಸಿದೆ. ನಮ್ಮ ರೈತರು ಶ್ರಮದಿಂದ ಬೆಳೆದ ಜೋಳವನ್ನು ಅಗ್ಗದ ದರದಲ್ಲಿ ಕೊಂಡು ಕೋಳಿ ಆಹಾರ ತಯಾರಿಸಿ ಅಪಾರ ಲಾಭ ಮಾಡುತ್ತಿದ್ದಾರೆ.

## ಪರಾಮರ್ಶಿತ ಗ್ರಂಥಗಳು ಮತ್ತು ಲೇಖನಗಳು


೧. ಅಶೋಕ ಹೇರಿಂದ್ಯಾಪನಹಳ್ಳಿ; ೨೦೦೦, 'ದನಗಳ ಜಾತ್ರೆಯಲ್ಲಿ ರಾಸುಗಳ ಲೇವಾದೇವಿ' ಪ್ರಜಾವಾಣಿ ಸಂಪುಟ-೧೨, ಸಂಚಿಕೆ-೫೪ ಬೆಂಗಳೂರು.

೨. ರೆ.ಎಫ್. ಕಿಟ್ಟಲ್; ೧೯೯೧, ಕನ್ನಡ-ಇಂಗ್ಲೀಷ್ ಡಿಕ್ಷನರಿ, ನ್ಯೂಡೆಲ್ಲಿ ಏಷಿಯನ್ ಎಜುಕೇಷನಲ್ ಸರ್ವಿಸಸ್.

೩. ಡಾ. ಚಂದ್ರಶೇಖರ ಕಂಬಾರ; ೧೯೮೫, ಕರ್ನಾಟಕ ಜಾನಪದ ವಿಶ್ವಕೋಶ, ಸಂಪುಟ-೧, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

೪. ಮ.ಲ. ನರಸಿಂಹ ಅಯ್ಯಂಗಾರ್, ೧೯೭೩, ನಮ್ಮ ದನಗಳು, ಮೈಸೂರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

೫. ಡಾ.ಎಚ್.ಎಲ್. ನಾಗೇಗೌಡ; ೧೯೮೮, 'ಶಬ್ದ ಸಂಗ್ರಹಣೆಗಾಗಿ ಮಾದರಿ ಪಟ್ಟಿ' ಜಾನಪದ ಜಗತ್ತು, ಸಂಪುಟ-೯, ಸಂಚಿಕೆ-೧, ಜನವರಿ-ಫೆಬ್ರವರಿ, ಬೆಂಗಳೂರು, ಕರ್ನಾಟಕ ಜಾನಪದ ಟ್ರಸ್ಟ್.

೬. ಎನ್. ಬಸವಾರಾಧ್ಯ, ೧೯೯೫, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

೭. ಡಾ. ಎಂ.ಜಿ. ಬಿರಾದಾರ, ೧೯೮೭, ಜಾನಪದ ಜೀವಾಳ, ಕಲಬುರಗಿ ಪುಸ್ತಕ ಅಕಾಡೆಮಿ.

೮. ರಘುನಾಥ ಕೊಡಗಹಳ್ಳಿ, ೧೯೮೬, 'ಸುಳಿ ಮತ್ತು ಜನಪದ ನಂಬಿಕೆಗಳು' ಜಾನಪದ ಜಗತ್ತು ಸಂಪುಟ-೭, ಸಂಚಿಕೆ-೨, ಮಾರ್ಚ್-ಏಪ್ರಿಲ್, ಬೆಂಗಳೂರು, ಕರ್ನಾಟಕ ಜಾನಪದ ಟ್ರಸ್ಟ್.

೯. ಕ.ವೆಂ. ರಾಜಗೋಪಾಲ, ಟಿ. ಕೇಶವಭಟ್ಟ, ೧೯೭೦. ಕಾವ್ಯಪದ ಮಂಜರಿ, ಬೆಂಗಳೂರು, ಸಹಕಾರೀ ಪ್ರಕಾಶನ ಮಂದಿರ ನಿಯಮಿತ.

೧೦. ಡಾ. ಎಂ.ಎನ್. ವಾಲಿ; ೧೯೮೬, 'ದನಗಳ ಸುಳಿ ಹಾಗೂ ಶುಭಾಶುಭ ಲಕ್ಷಣಗಳು' ಜಾನಪದ ಜಗತ್ತು, ಸಂಪುಟ-೧೦, ಸಂಚಿಕೆ-೪, ಜುಲೈ-ಆಗಸ್ಟ್, ಬೆಂಗಳೂರು ಕರ್ನಾಟಕ ಜಾನಪದ ಟ್ರಸ್ಟ್.

೧೧. ಜಿ. ವೆಂಕಟಸುಬ್ಬಯ್ಯ, ಶೇಷಗಿರಿರಾವ್, ರಾಮಚಂದ್ರ ಮೂರ್ತಿ; ೧೯೮೧, ಐ.ಬಿ.ಎಚ್. ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟು, ಬೆಂಗಳೂರು, ಐ.ಬಿ.ಎಚ್. ಪ್ರಕಾಶನ ಗಾಂಧಿನಗರ.

೧೨. ಸಿದ್ಧಪ್ಪ, ಪ್ರತಾಪ್ ಕುಮಾರ್, ವೆಂಕಟರಾಮಯ್ಯ; ೧೯೭೯, 'ಪಶುಸಂಗೋಪನೆ', ಕನ್ನಡ ವಿಷಯ ವಿಶ್ವಕೋಶ, ಮೈಸೂರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ.

## ಅರ್ಥಕೋಶಗಳು

ವಿವಿಧ ಅರ್ಥಕೋಶಗಳು ಸುಳಿಯ ಬಗೆಗೆ ಈ ಕೆಳಗಿನ ಅರ್ಥಗಳನ್ನು ಗುರುತಿಸಿವೆ;

ಸುಳಿ = ನೀರಿನಲ್ಲಿ ಸುತ್ತುವ ಕುಳಿ (ರಾಜಗೋಪಾಲ; ಕೇಶವ ಭಟ್ಟ; ೧೯೭೦ : ೨೬೦)

ಸುಳಿ = ೧. ಚಕ್ರಕಾರವಾಗಿ ಸುತ್ತುವಿಕೆ

೨. ಜಲಾವರ್ತ; ಚಕ್ರದಂತೆ ತಿರುಗುವ ನೀರು

೩. ಸುರುಳಿಯಾಗಿ ಸುತ್ತಿಕೊಂಡಿರುವ ಚಿಗುರೆಲೆ

೪. ಚಕ್ರಾಕಾರವಾಗಿ ಸುತ್ತು; ಗುಂಡಾಗಿ ತಿರುಗು

(ವೆಂಕಟಸುಬ್ಬಯ್ಯ, ಶೇಷಗಿರಿರಾವ್, ರಾಮಚಂದ್ರ ಮೂರ್ತಿ; ೧೯೮೧ : ೬೨೭)

ಸುಟಿ = a curl; (T ಚುಟಿ; Te ಸುಡಿ) ಹುಬ್ಬುಗಳ ಮಧ್ಯದ ಸುಟಿ.

ಕುದುರೆಯ ಪುರ್ಬಿನೊಳು ಕದಪಿನೊಳು ಬೆನ್ನೊಳುರದೊಳು ಪೆಗಲೊಳುದರದೊಳ್ ತುದಿಮೂಗು ತುದಿಗಿವಿಯ ಮೊದಲ್ಕಣ್ಣ ಕಡೆಗಳೊಳ್ ಮುಷ್ಕದೊಳು ತಿಗದೊಳು ಮೊದಲ ಬಾಲದೊಳು, ಮೂಗಿನ ಕಮ್ಬಿನೊಳು ಮೇಣ್ ಗುದದಗ್ರದೊಳ್ ಮಧ್ಯ ನೆತ್ತಿಯೊಳು ಜಾನು ಜಂಘೆಯೊಳು ಮೂತ್ರದ ನಾಳದೊಳು ಗಲ್ಲದೊಳು ನಿಜಾಸನದಿ ಸುಟಿ ಪುಟ್ಟಲ್ಕೆ ಕಷ್ಟಮಕ್ಕುಂ. (ರೆ.ಎಫ್. ಕಿಟ್ಟಲ್; ೧೯೯೧; ೬೧೯)

ಸುೞ೧ ಸುಳಿ೧, (ಕ್ರಿ). ೧.ಗುಂಡಾಗಿ ಸುತ್ತು; ಚಕ್ರಾಕಾರವಾಗಿ ತಿರುಗು : 'ಸುೞಿ, ಭ್ರಮಣೆ, ಪರಿಭ್ರಮಣೇ-ಜಲಾವರ್ತೇಚ' (ಶಮಧಾ); ಈ ಮುಗುಳೊಳಮಾ ಮಾೞಿಯನಱಿಸಿ ಸುೞಿವುದಳಿ ಕೆಲಕೆಲದೊಳ್ (ಕವಿರಾ, ೩-೧೨೩); ಲತೆಯ ಮನೆಗಳೊಳ್ ತೆಱಂಬೊಳೆವಲರ ಬಸದೆ ಸುೞಿವಳಿಗಳ ಬಳಗದ ದನಿಗೆ ಕಿನಿಸಿ ಕಿಂಕಿಱಿವೋದಳ್ (ಪಂಪಭಾ ೫-೪)

೨. ಕಾಣಿಸಿಕೊಳ್ಳು; ಗೋಚರವಾಗು : ದಂಪತಿಗಳಲ ಶರೀರದೊಳ್ ಸುೞಿದು ಕೆತ್ತುವ ಪುಣ್ಗಳಬಾಯ್ಗಳಿಂದ ಮೆಲ್ಪೊಗೆವರುಣಾಂಬು ಧಾರೆಗಳ್ (ಜಗವಿ೭-೮೩)

೩. ಸಮುದ್ರ, ನದಿ, ತೊರೆಗಳಲ್ಲಿಯ ಆಳವಾದ ಕಡೆಯಲ್ಲಿರುವ ತಿರುಗುಣಿ; ಜಲಾವರ್ತ : "ಸುೞಿಯೆಂದು ಜಲಾವರ್ತ" (ಕಶಸಾ ೫೩-೧೪೨); ಸುಳಿಯೊಳಗಿರ್ದು ಬೆಟ್ಟುಪೋಱ ಪೊಣ್ಮುವಿನಂಲವಣಾಂಬುರಾಶಿ ಕುಕ್ಕುವಿಗುದಿವಲ್ಲಿ ಪಂಪಭಾ (ಘುಳುಘುಳು ನೇವ್ವಿ ಬೊಬ್ಬುಳಿಯನೀಸು ೞಿಯಂ (ಚಿಕವಿ ೧-೩೭).

೪. ದೇಹದಲ್ಲಿ ಕಾಣಿಸಿಕೊಳ್ಳುವ ಕೂದಲಿನ ಸುತ್ತು, ಆವರ್ತ : ಮುಂದಲೆಯ ಸುೞಿಯಿಂದಕ್ಕುಂ ಕಳ್ಳಂ (ಲೋಕೋಪ ೧೧-೨೫); ಅಪ್ಪುವು ಸುೞಿಗಳ್ ನೂಱು ಭೇದದಿಂದಂ ತರಗಕ್ಕೆ (ಅಶ್ವಶಾ ೪-೧)

೫. ತೆಂಗು, ಬಾಳೆ, ಮೊದಲಾದ ಸಸ್ಯಗಳ ಕುಡಿ, - ಎಳೆಯ ಚಿಗುರು : "ಸುೞಿ-ಕೆಲಸಗಳ್ಳಂ; ಸಸಿಯ ಸುೞಿ" (ಶಮದ ಪರಿ ೧);

ತಿಳಿನೀರ ಸುಂತುರ್ವನಿಗಳಂ ಪೊರೆದೆಳೆವಾೞೆಯ ಸುೞಿಯ ಬಿಜ್ಜಣಿಗೆಗಳ ನಡಿನಡಿಗೆ ಬೀಸಿಯುಂ (ಕಾದಂ ಪೊ.೮೫೫).

೫. ಗುರುತು; ಜಾಡು : ಮೇಳದಂಕದಂತೆ ಸುೞಿದು (೦) ಡೊಂಬರ ಕೋಡಗದಂತಾಡಿ (ಪಂಪಭಾ-೭೨)

೬. ಸೋಮಾರಿ; ಆಲಸಿ : "ಸುೞಿ-ಕೆಲಸಗಳ್ಳಂ; ಸಸಿಯ ಸುೞಿ" (ಶಮದ. ಪರಿ೧)

ಸುಳಿ೨ : ೨. ಖಳಿಕಟಿಲ ಬಿಟಿವೊಯಿಲೊ ಸಿಡಿಲಿನ ಸುಳಿಯೊ ಮೈಮಸೆಯರುಣವಾರಿಯೊ ಮಳೆಗಳಿಲ್ಲದ ಹೊನಲೊರಣದಲಿ ಚಿತ್ರವಾಯ್ತು (ಕುವ್ಯಾದ್ರೋ ೧೪-೭); ಶರಧಿಯ ಸುಳಿಗಳೆಣೆಯೆನಿಸು ನಾಭಿ (ಅಂಜಚ ೭ -೧೮೬); ಗಳೆಯ ಡೊಂಬತಿಯಾಟ ದಾಪರಿ..... ಸುಳಿಯ ನೀರಿನ ತಲೆಯ ಹೂಗರಿ (ಕ ಎಪು.೮೯-೧೫).

೩. ದನವಿನ ಬೆಂನ ಸುಳಿಯ ಮೇಲೆ ಬರೆದರೆ ಮೂಱುದು (ಎಕ.XI ಹೊಳಲ್ಕೆ ೯೩-೩;?); ಸಿಂಧೂ ದೇಶದ ಕುದುರೆಗಳನ್ನು ಆರಿಸಿಕೊಂಡನು. ... ಲಕ್ಷಣವಾದ ಹತ್ತು ಸುಳಿಗಳುಳ್ಳವು (ವಚಭಾ ೧೪೦).

೪. ಸಸಿ ಬಲಿದು ಹೊಸ ಸುಳಿ ತೋೞಿದಲ್ಲಿಯಲ್ಲದೆ ಆ ತುಷ ಪರ್ಣ ಬಿಡದು (ಮೋಳಿಮಾ ೧೪೧-೫೪೦); ಎಳೆಯ ಬಾಳೆಯ ಸುಳಿಗೆ ಸೀಗೆಯ ಮೆಳೆಯೊಡನೆ ಸರಸವೆ (ಕುವ್ಯಾದ್ರೋ ೧೨-೧೯); ಎಳೆಯಬಾಳೆಯ ಸುಳಿಯು ಅನಲನ ಪೊಯ್ಯಲಿ ನಂದವೋಲ್ (ನಳಚ ೫-೨)

೭. ಸಂತಾನ; ಸಂತತಿ : ಸತ್ತು ಹುಟ್ಟುವ ಸುಳಿಯಲ್ಲದೆ ಮತ್ತೊಂದು ಗೊತ್ತು ಇಲ್ಲದೆ ಹೋಯಿತು (ಪುರಂದ ೧-೧೬೧-೨)

೮. [ವ್ಯಾಕ] ಋ ಕಾರಕ್ಕೆ ಕಾಗುಣಿತದಲ್ಲಿ ಬರುವ ಚಿಹ್ನೆ; ವಟ್ಟುಸುಳಿ (೮) : ಇದು ಋಕಾರದ ಸುಳಿ (ಸಂಶೋಧ; ೨೬); ಒತ್ತಕ್ಷರ 'ರಕಾರವು' ಕೆಳಗೆ ಸುಳಿಯೊಂದಿಗೆ ಪ್ರತ್ಯೇಕವಾಗಿ ಬಲಬದಿಯಿಂದ ಆರಂಭವಾಗಿ ಎಡಬದಿಯಲ್ಲಿ ಮೇಲೇರುತ್ತದೆ (ನೊಳಂಬ ೮೦).